ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಗುರುವಾರ, ಜೂನ್ 08, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 25 RNI : 27369/75

50 1974 2023

janathavani@mac.com
www.janathavani.com
08192 254736 91642 99999




## ಸ್ಮಾರ್ಟ್ ಯೋಜನೆಯ ಅವೈಜ್ಞಾನಿಕ ಕಾಮಗಾರಿಗಳ ಪರಿಶೀಲನೆ: ಎಸ್ಸೆಸ್ಸೆಂ



ದಾವಣಗೆರೆ, ಜೂ.7- ನಗರದಲ್ಲಿ ನಡೆದಿರುವ ಅವೈಜ್ಞಾನಿಕ ಸ್ಮಾರ್ಟ್ ಸಿಟಿ ಕಾಮಗಾರಿಗಳ ಕುರಿತು ಪರಿಶೀಲನೆ ನಡೆಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವರೂ, ಗಣಿ, ಭೂ ವಿಜ್ಞಾನ ಹಾಗೂ ತೋಟಗಾರಿಕೆ ಇಲಾಖೆ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಹೇಳಿದ್ದಾರೆ.

ನಗರದಲ್ಲಿ ಬುಧವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಗರದಲ್ಲಿ ಯಾವ ರಸ್ತೆ ಎಲ್ಲಿದೆ? ಹಳ್ಳ ಎಲ್ಲಿದೆ? ಡ್ರೈನೇಜ್ ಎಲ್ಲಿದೆ? ಇವರಿಗೆ ಯಾವ ಗಂಧ ಗಾಳಿಯೂ ಗೊತ್ತಿಲ್ಲ. ಬಂದು ಎಸಿ ರೂಂನಲ್ಲಿ ಕುಳಿತು ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದು ತರಾಟೆಗೆ ತೆಗೆದುಕೊಂಡರು.

ಖಾಸಗಿ ಬಸ್ ನಿಲ್ದಾಣ ನಿರ್ಮಾಣಕ್ಕೆ ನಾವು ಮಾಡಿಸಿದ್ದ ಪ್ಲಾನ್ ಬೇರೆಯದ್ದೇ ಇತ್ತು. ಈಗ ನಡೆದಿರುವ ಕಾಮಗಾರಿಯೇ ಬೇರೆ. ಹಳೆಯ ಪ್ಲಾನನ್ನು ಕ್ಯಾನ್ಸಲ್ ಮಾಡಿ ಕಾಮಗಾರಿ ಮಾಡಿಸಿದ್ದಾರೋ ಏನೋ ಗೊತ್ತಿಲ್ಲ. ಮೊದಲಿದ್ದ ಬಸ್ ನಿಲ್ದಾಣದಲ್ಲಿ ಮೂವತ್ತಕ್ಕೂ ಹೆಚ್ಚು ಬಸ್‌ಗಳು ನಿಲ್ಲುತ್ತಿದ್ದವು. ಈಗ ನಾಲ್ಕು ಬಸ್ ನಿಲ್ಲಲೂ ಸಾಧ್ಯವಿಲ್ಲ ಎಂದರು.

ಕೆ.ಆರ್. ಮಾರುಕಟ್ಟೆ, ನಾನು ಸಚಿವನಾಗಿದ್ದಾಗ 28 ಕೋಟಿ ರೂ. ಅನುದಾನ ಕೊಟ್ಟಿದ್ದೆ. ಆದರೆ ಇವರು (ಬಿಜೆಪಿಯವರು) ತರಾತುರಿಯಲ್ಲಿ ಉದ್ಘಾಟನೆ ಮಾಡಿದ್ದಾರೆ. ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಬಳಿ ರ್‍ಯಾಂಪ್ ನಿರ್ಮಾಣ ಮಾಡಬೇಕಾಗಿತ್ತು. ಅದನ್ನೂ ಮಾಡಿಲ್ಲ ಎಂದರು.

ನಗರದಲ್ಲಿ ಇದ್ದ ಬದ್ದ ರಸ್ತೆಗಳಿಗೆಲ್ಲಾ ನಾಮಕರಣ ಮಾಡುತ್ತಾರೆ. ಕನಿಷ್ಟ ಪಕ್ಷ ಆ ರಸ್ತೆಗೆ ಹೆಸರಿಡಬೇಕಾದ ವ್ಯಕ್ತಿ ಏನಾದರೂ ಕೊಡುಗೆ ನೀಡಿರಬೇಕಲ್ಲವೇ? ರಾತ್ರೋ ರಾತ್ರಿ ಬೋರ್ಡ್ ಬದಲಿರುವ ಕೆಲಸ ಮಾಡುತ್ತಾರೆ. ಇದೊಂದು ರೀತಿ ತುಘಲಕ್ ದರ್ಬಾರ್ ಆಗಿದೆ. ಇವೆಲ್ಲವನ್ನೂ ಕೂಲಂಕುಶವಾಗಿ ಪರಿಶೀಲನೆ ಮಾಡಲಾಗುವುದು ಎಂದು ಹೇಳಿದರು.

ಕೆರೆಯ ತೆರಿಗೆಯನ್ನು ಕೆರೆಗೆ ಮಾತ್ರ ಬಳಕೆ ಮಾಡಬೇಕು. ಆದರೆ ಬೇರೆಲ್ಲಾ (2ನೇ ಪುಟಕ್ಕೆ)

## ಜಿಎಸ್ಟಿ, ತೆರಿಗೆದಾರರಿಗೆ ಗ್ಯಾರಂಟಿ ಕಟ್

ಬೆಂಗಳೂರು, ಜೂ.7 - ಜಿಎಸ್‌ಟಿ ಮತ್ತು ತೆರಿಗೆ ಪಾವತಿಸುವವರಿಗೆ ಗ್ಯಾರಂಟಿ ಯೋಜನೆಗಳಲ್ಲಿ ಕಡಿತವಾಗುವ ಮುನ್ಸೂಚನೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಬಡವರಿಗೆ ಗ್ಯಾರಂಟಿ ನೀಡಲು ನಿರ್ಧರಿಸಿದ್ದೇವೆ. ತೆರಿಗೆ ಹಾಗೂ ಜಿಎಸ್‌ಟಿ ಪಾವತಿದಾರರು ಈ ಯೋಜನೆ ಬೇಕು ಎಂದು ಕೇಳುತ್ತಿಲ್ಲ ಎಂದವರು ಹೇಳಿದ್ದಾರೆ.

ಅನೇಕರು ಈ ಯೋಜನೆ ಬೇಡ ಎಂದು ನಮಗೆ ಪತ್ರ ಬರೆದಿದ್ದಾರೆ. ತೆರಿಗೆ ಪಾವತಿದಾರರು ನಮಗೆ ಮತ ಹಾಕಿದ್ದಾರೆ. ಆದರೆ, ಅವರು ನಮ್ಮನ್ನು ಈ ಯೋಜನೆಗಳನ್ನು ಕೊಡಿ ಎಂದು ಕೇಳುತ್ತಿಲ್ಲ. ಅವರು ಬಡವರ ಪರವಾಗಿದ್ದಾರೆ ಎಂದರು.

ಗ್ಯಾರಂಟಿ ಯೋಜನೆಗಳ (3ನೇ ಪುಟಕ್ಕೆ)

# ಬಾಡಿಗೆದಾರರಿಗೆ ಕರಾರು ಕಡ್ಡಾಯವಲ್ಲ

### ಉಚಿತ ವಿದ್ಯುತ್ ಸೌಲಭ್ಯಕ್ಕೆ ಚಾಲನಾ ಪರವಾನಗಿ, ಮತದಾರರ ಗುರುತಿನ ಚೀಟಿ, ಪಾಸ್‌ಪೋರ್ಟ್ ಸೇರಿದಂತೆ ಯಾವುದಾದರೂ ವಾಸ ದೃಢೀಕರಣ ದಾಖಲೆ ಸಲ್ಲಿಸಲು ಅವಕಾಶ : ಸಚಿವ ಕೆ.ಜೆ. ಜಾರ್ಜ್

ಬೆಂಗಳೂರು, ಜೂ. 7 - ಇನ್ನೂರು ಯುನಿಟ್‌ಗಿಂತ ಕಡಿಮೆ ವಿದ್ಯುತ್ ಬಳಕೆ ಮಾಡುವ ಎಲ್ಲಾ ಗ್ರಾಹಕರಿಗೆ ಉಚಿತ ಸೌಲಭ್ಯ ದೊರೆಯಲಿದೆ ಎಂದು ಇಂಧನ ಖಾತೆ ಸಚಿವ ಕೆ.ಜೆ.ಜಾರ್ಜ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯೋಜನೆ ಲಾಭ ಪಡೆಯಲಿಚ್ಛಿಸುವವರು ಜೂನ್ 15 ರಿಂದ ನೋಂದಣಿ ಮಾಡಿಕೊಳ್ಳಬೇಕು ಎಂದರು.

ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಒಂದಲ್ಲಾ ಒಂದು ಗೊಂದಲ ನಿರ್ಮಾಣವಾಗುತ್ತಿವೆ. ನಾವು ಎಷ್ಟೇ ತೆರೆ ಎಳೆದರೂ ದಿನ ನಿತ್ಯ ಒಂದು ಸಮಸ್ಯೆ ಎದುರಾಗುತ್ತಿದೆ. ಆದರೂ ನಮ್ಮ ನಿರ್ಧಾರದಿಂದ ನಾವು ಹಿಂದೆ ಸರಿದಿಲ್ಲ. ಇನ್ನೂ ಕೆಲವು ಸಮಸ್ಯೆಗಳಿವೆ. ಅವುಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಸಮಾಲೋಚಿಸಿ ಬಗೆಹರಿಸುತ್ತೇನೆ ಎಂದರು.

ನೋಂದಣಿಗೆ ಫಲಾನುಭವಿಯ ಆಧಾರ್ ಸಂಖ್ಯೆ ಮತ್ತು ವಿದ್ಯುತ್ ಸಂಪರ್ಕದ ಆಧಾರ್ ನಂಬರ್ ಕಡ್ಡಾಯವಾಗಿದೆ. ಸ್ವಂತ ಮನೆಯಿರುವವರ ವಿಳಾಸ ಆಧಾರ್‌ನೊಂದಿಗೆ ಹಂಚಿಕೆಯಾಗುವುದರಿಂದ ಹೆಚ್ಚಿನ ದಾಖಲಾತಿಗಳ ಅಗತ್ಯ ಇರುವುದಿಲ್ಲ.

ಬಾಡಿಗೆದಾರರು ಬಾಡಿಗೆ ಕರಾರು, ಭೋಗ್ಯ ಕರಾರು ಸೇರಿದಂತೆ ಸೂಕ್ತ ದಾಖಲಾತಿಗಳನ್ನು ಸಲ್ಲಿಸಬೇಕಿದೆ. ಒಂದು ವೇಳೆ ಬಾಡಿಗೆ ಅಥವಾ ಭೋಗ್ಯ ಕರಾರು ಇಲ್ಲದೇ ಹೋದರೆ ಅದೇ ಆರ್. ಆರ್ ಸಂಖ್ಯೆಯ ಮನೆಯಲ್ಲಿ ವಾಸವಿರುವುದನ್ನು ದೃಢಪಡಿಸಲು ಚಾಲನಾ ಪರವಾನಗಿ, ಮತದಾರರ ಗುರುತಿನ ಚೀಟಿ, ಪಾಸ್‌ಪೋರ್ಟ್ ಸೇರಿದಂತೆ ಯಾವುದಾದರೂ ವಾಸ ದೃಢೀಕರಣ ದಾಖಲೆಯನ್ನು ಒದಗಿಸಬೇಕಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ನಾವು ಈ ಯೋಜನೆ ಅನುಷ್ಠಾನಗೊಳಿಸುವುದರಿಂದ 2.14 ಕೋಟಿ ಗ್ರಾಹಕರಿಗೆ ಇದರ ಲಾಭವಾಗಲಿದೆ. ಸರಾಸರಿ ಪ್ರತಿ ಕುಟುಂಬಕ್ಕೆ 53 ಯುನಿಟ್ ಬಳಕೆ ಲೆಕ್ಕಾಚಾರವಿದೆ. ಇದಕ್ಕಾಗಿ 14852 ಮಿಲಿಯನ್ ಯುನಿಟ್ ಬಳಕೆಯಾಗಲಿದೆ. ಇದರಿಂದ ವಾರ್ಷಿಕ ವೆಚ್ಚ 13 ಸಾವಿರ ಕೋಟಿ ರೂ. ಹೊರೆಯಾಗಬಹುದು ಎಂಬ ನಿರೀಕ್ಷೆ ಇದೆ ಎಂದು ಹೇಳಿದರು.

ಒಟ್ಟಾರೆ ರಾಜ್ಯದಲ್ಲಿ 2.16 ಕೋಟಿ ಕುಟುಂಬಗಳು ವಿದ್ಯುತ್ ಸಂಪರ್ಕ ಹೊಂದಿದ್ದು, ಅದರಲ್ಲಿ 200 ಕ್ಕೂ ಹೆಚ್ಚು ಯುನಿಟ್ ಬಳಕೆ ಮಾಡುವವರ ಗ್ರಾಹಕರ ಸಂಖ್ಯೆ 2 ಲಕ್ಷ ಕುಟುಂಬಗಳು ಮಾತ್ರ. ಉಳಿದವರೆಲ್ಲರೂ ನಮ್ಮ ಯೋಜನೆಯಡಿ ಬರುವವರೇ ಆಗಿದ್ದಾರೆ.



ಉಚಿತ ವಿದ್ಯುತ್ ನೀಡುತ್ತೇವೆ ಎಂದ ಮಾತ್ರಕ್ಕೆ ಸಮರ್ಪಕ ವಿದ್ಯುತ್ ನೀಡುವುದಿಲ್ಲ ಎಂಬ ಭಾವನೆ ಬೇಡ. ನಮ್ಮಲ್ಲೇ ಅಗತ್ಯ ವಿದ್ಯುತ್ ಉತ್ಪಾದನೆ ಆಗುತ್ತಿದೆ. ಒಂದು ವೇಳೆ ಅಗತ್ಯ ಬಿದ್ದರೆ ಕಡಿಮೆ ದರದಲ್ಲಿ ವಿದ್ಯುತ್ ಖರೀದಿಸಲಾಗುವುದು ಎಂದು ಹೇಳಿದರು.

ಸ್ವಂತ ಮನೆ, ಬಾಡಿಗೆ ಮನೆ, ಸರ್ಕಾರಿ ನೌಕರರು ಆದಾಯ ತೆರಿಗೆದಾರರು ಸೇರಿದಂತೆ ಯಾರೇ ಆದರೂ 200 ಯೂನಿಟ್ ಒಳಗೆ ವಿದ್ಯುತ್ ಬಳಕೆ ಮಾಡುತ್ತಿದ್ದರೆ, ಅವರಿಗೆ ಶುಲ್ಕ ವಿನಾಯಿತಿ ದೊರೆಯಲಿದೆ ಎಂದರು.

ನೋಂದಣಿಗೆ ಸೇವಾ ಸಿಂಧು ಪೋರ್ಟಲ್‌ನಲ್ಲಿ ಪ್ರತ್ಯೇಕವಾದ ವ್ಯವಸ್ಥೆ ಕಲ್ಪಿಸಲಾಗಿದೆ. ಪ್ರತಿದಿನ 5 ರಿಂದ 10 ಲಕ್ಷ ನೋಂದಣಿಯ ಧಾರಣ ಸಾಮರ್ಥ್ಯವನ್ನು (2ನೇ ಪುಟಕ್ಕೆ)

## ಜೂನ್‌ನಲ್ಲಿ ಕರೆಂಟ್ ಶಾಕ್

### ಸ್ಲ್ಯಾಬ್ ಬದಲಾವಣೆ, ಶುಲ್ಕ ಹೆಚ್ಚಳ, ಪೂರ್ವಾನ್ವಯ ಹೇರಿಕೆ

ದಾವಣಗೆರೆ, ಜೂ. 7 – ರಾಜ್ಯ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಗೃಹ ಜ್ಯೋತಿಯ ಗ್ಯಾರಂಟಿ ಸಿಗುವ ಗುಂಗಿನಲ್ಲಿದ್ದ ಜನತೆಗೆ, ಜೂನ್ ತಿಂಗಳಲ್ಲಿ ಬಂದಿರುವ ಬಿಲ್ ಬಿಸಿ ಮುಟ್ಟಿಸುತ್ತಿದೆ.

ನಿಗದಿತ ಶುಲ್ಕ (ಫಿಕ್ಸಡ್ ಚಾರ್ಜ್) ವನ್ನು ಗೃಹ ಬಳಕೆದಾರರಿಗೆ 100 ರೂ.ಗಳಿಂದ 110 ರೂ.ಗಳಿಗೆ ಹೆಚ್ಚಿಸಲಾಗಿದೆ. ಇದರ ಜೊತೆಗೆ ಪ್ರತಿ ಯೂನಿಟ್‌ಗೆ 70 ಪೈಸೆ ಶುಲ್ಕ ಹೆಚ್ಚಳದ ಬಿಸಿಯೂ ತಟ್ಟಿದೆ. ಏಪ್ರಿಲ್ 1ರಿಂದಲೇ ಪೂರ್ವಾನ್ವಯ ಎಂದು ಹೇಳಿ, ಆ ಬಾಕಿಯನ್ನು ಈಗ ವಸೂಲಿ ಮಾಡಲಾಗುತ್ತಿದೆ.

ಈ ನಡುವೆ, ವಿದ್ಯುತ್ ಬಳಕೆಯ ಸ್ಲ್ಯಾಬ್ ಅನ್ನೂ ಬದಲಾವಣೆ ಮಾಡಲಾಗಿದೆ. ಈ ಮುಂಚೆ ಗೃಹ ಬಳಕೆ ಗ್ರಾಹಕರು ಎಷ್ಟೇ ವಿದ್ಯುತ್ ಬಳಸಿದರೂ ಸಹ ಮೊದಲ 100 ಯೂನಿಟ್ ಬಳಕೆಗೆ ಕಡಿಮೆ ದರ ಹಾಗೂ ಆನಂತರದ ಬಳಕೆಗೆ ಹೆಚ್ಚಿನ ದರ ಇರುತ್ತಿತ್ತು.

ಈಗ 100 ಯೂನಿಟ್ ಗಡಿ ದಾಟಿದ ತಕ್ಷಣ ಎಲ್ಲದಕ್ಕೂ ಒಂದೇ ದರ ವಿಧಿಸಲಾಗುತ್ತಿದೆ! ಹೀಗಾಗಿ ವಿದ್ಯುತ್ ಬಿಲ್ ಮತ್ತಷ್ಟು ಸುಡುವಂತಾಗಿದೆ. ಹೊಸ ಬಿಲ್ ನೋಡಿದ ಕೆಲವರು ಬಿಲ್ ಕೊಡಲು ಬಂದ ಸಿಬ್ಬಂದಿ ಜೊತೆ ವಾಗ್ವಾದ ಸಹ ನಡೆಸಿದ್ದು ಕಂಡು ಬಂದಿದೆ. ಈ ಬಗ್ಗೆ ಮಾತನಾಡಿರುವ (3ನೇ ಪುಟಕ್ಕೆ)

## ದೊಡ್ಡಬಾತಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಕೆ.ಜಿ. ಉಮೇಶ್



ದಾವಣಗೆರೆ, ಜೂ.7- ತಾಲ್ಲೂಕಿನ ದೊಡ್ಡಬಾತಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಕೆ.ಜಿ. ಉಮೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕನ್ನಪ್ಪ ಶಿವಕುಮಾರ್ ತಮ್ಮ ಸ್ಥಾನಕ್ಕೆ ನೀಡಿದ್ದ ರಾಜೀನಾಮೆಯಿಂದ ತೆರವಾದ ಗ್ರಾಮ ಪಂಚಾಯ್ತಿ ಅಧ್ಯಕ್ಷ ಸ್ಥಾನಕ್ಕೆ ನಿನ್ನೆ ನಡೆದ ಚುನಾವಣೆಯಲ್ಲಿ ಈ ಆಯ್ಕೆ ನಡೆಯಿತು.

ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಗ್ರಾಮ ಪಂಚಾಯ್ತಿಯ ಎಲ್ಲಾ ಸದಸ್ಯರು ಒಮ್ಮತದಿಂದ ಕೆ.ಜಿ. ಉಮೇಶ್ ಅವರನ್ನು ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿದರು. (3ನೇ ಪುಟಕ್ಕೆ)

## ಭತ್ತದ ಬೆಂಬಲ ಬೆಲೆ 143 ರೂ. ಹೆಚ್ಚಳ



ನವದೆಹಲಿ, ಜೂ. 7 – ಭತ್ತದ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರ ಕ್ವಿಂಟಾಲ್‌ಗೆ 143 ರೂ.ಗಳಷ್ಟು ಹೆಚ್ಚಿಸಿದ್ದು, 2,183 ರೂ.ಗಳಿಗೆ ನಿಗದಿ ಪಡಿಸಿದೆ. ಕಳೆದ ದಶಕದಲ್ಲಿ ಎರಡನೇ ಬಾರಿ ಭತ್ತದ ಬೆಂಬಲ ಬೆಲೆಯನ್ನು ಅತಿ ಹೆಚ್ಚಿನ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ.

ಈ ಹಿಂದೆ 2018-19ರಲ್ಲಿ ಭತ್ತದ ಬೆಂಬಲ ಬೆಲೆಯನ್ನು ಕ್ವಿಂಟಾಲ್‌ಗೆ 200 ರೂ.ಗಳಷ್ಟು ಹೆಚ್ಚಿಸಲಾಗಿತ್ತು.

ಈಗ 2023-24ರ ಸಾಲಿನ ಮುಂಗಾರು ಹಂಗಾಮಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಶೇ.5.3 ರಿಂದ ಶೇ.10.35ರವರೆಗೆ ಹೆಚ್ಚಿಸಲಾಗಿದೆ. ಇದು ಕ್ವಿಂಟಾಲ್‌ಗೆ 128 ರೂ.ಗಳಿಂದ 805 ರೂ.ಗಳಷ್ಟಾಗಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿ ಸಭೆಯಲ್ಲಿ ಬೆಂಬಲ ಬೆಲೆ ಹೆಚ್ಚಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ. ನಂತರ ಪತ್ರಕರ್ತರೊಂದಿಗೆ ಮಾತನಾಡಿರುವ ಕೇಂದ್ರ ಆಹಾರ ಸಚಿವ ಪಿಯೂಶ್ ಗೋಯಲ್, ಚಿಲ್ಲರೆ ಹಣದುಬ್ಬರ (2ನೇ ಪುಟಕ್ಕೆ)

## ಉಪನ್ಯಾಸಕರ-ಶಿಕ್ಷಕರ ಹುದ್ದೆಗಳಿಗೆ 2 ವರ್ಷ ವಯೋಮಿತಿ ಸಡಿಲಿಕೆ

ಬೆಂಗಳೂರು, ಜೂ.7 - ಸರ್ಕಾರಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಉಪನ್ಯಾಸಕರು ಹಾಗೂ ಶಿಕ್ಷಕರ ನೇಮಕಾತಿಯಲ್ಲಿ ಎರಡು ವರ್ಷಗಳ ವಯೋಮಿತಿ ಸಡಿಲಿಕೆಗೆ ರಾಜ್ಯ ಸರ್ಕಾರ ಅವಕಾಶ ಮಾಡಿಕೊಟ್ಟಿದೆ.

ಕೊರೊನಾ ಕಾರಣದಿಂದ 2020-21 ಹಾಗೂ 2021-22ನೇ ಸಾಲಿನಲ್ಲಿ ಆರ್ಥಿಕ ಮಿತವ್ಯಯ ಅನುಷ್ಠಾನಗೊಳಿಸಿದ ಪರಿಣಾಮ ನೇಮಕಾತಿಗಳನ್ನು ತಡೆಹಿಡಿಯಲಾಗಿತ್ತು.

ಹೀಗಾಗಿ ನೇಮಕಾತಿಯಲ್ಲಿ 2 ವರ್ಷಗಳ ವಯೋಮಿತಿ ಸಡಿಲಿಸುವಂತೆ ಶಾಸಕರು, ಗಣ್ಯವ್ಯಕ್ತಿಗಳು, ಸಂಘ-ಸಂಸ್ಥೆಗಳು ಸರ್ಕಾರದ ಮೇಲೆ ಒತ್ತಡ ತಂದಿದ್ದರು.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ 778 ವಿವಿಧ ವಿಷಯಗಳ ಉಪನ್ಯಾಸಕರುಗಳ ಹುದ್ದೆಗಳಿಗೆ ಹಾಗೂ ಖಾಸಗಿ (2ನೇ ಪುಟಕ್ಕೆ)

## ವಯನಾಡ್ ಚುನಾವಣೆಗೆ ಸಿದ್ಧತೆ

ಕೋಳಿಕೋಡ್, ಜೂ. 7- ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅನರ್ಹತೆಗೆ ಗುರಿಯಾದ ಕಾರಣ ತೆರವಾಗಿರುವ ಕೇರಳದ ವಯನಾಡ್ ಲೋಕಸಭಾ ಕ್ಷೇತ್ರದ ಉಪ ಚುನಾವಣೆಗೆ ಪ್ರಕ್ರಿಯೆ ಆರಂಭಿಸಲಾಗಿದೆ. ಚುನಾವಣೆಗೆ ಮುಂಚೆ ವಿ.ವಿ.ಪ್ಯಾಟ್ ಹಾಗೂ ವಿದ್ಯುನ್ಮಾನ ಮತ ಯಂತ್ರಗಳ ಪರಿಶೀಲನೆ ನಡೆಸುವುದಾಗಿ ಕೋಳಿಕೋಡ್ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

## ಬೆಂಗಳೂರು-ದಾವಣಗೆರೆಗಳಲ್ಲಿ ಇ.ಡಿ. ದಾಳಿ

### ನೂರಾರು ಕೋಟಿ ವಂಚನೆ ಆರೋಪದ ಬಗ್ಗೆ ಕ್ರಮ

ನವದೆಹಲಿ, ಜೂ. 7 – ಭಾರತ್ ಇನ್ಫ್ರಾ ಎಕ್ಸ್‌ಪೋರ್ಟ್ ಅಂಡ್ ಇಂಪೋರ್ಟ್ ಕಂಪನಿಯ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ಬೆಂಗಳೂರು ಹಾಗೂ ದಾವಣಗೆರೆಯ 7 ತಾಣಗಳ ಮೇಲೆ ದಾಳಿ ನಡೆಸಿದೆ.

ಈ ಸಂದರ್ಭದಲ್ಲಿ 100 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿ ಪತ್ತೆ ಮಾಡಲಾಗಿದೆ ಹಾಗೂ 14 ಲಕ್ಷ ರೂ.ಗಳ ನಗದನ್ನು ವಶಪಡಿಸಿಕೊಳ್ಳಲಾಗಿದೆ. ಹಲವಾರು ದಾಖಲೆ ಹಾಗೂ ಡಿಜಿಟಲ್ ಉಪಕರಣಗಳನ್ನೂ ವಶಪಡಿಸಿಕೊಂಡಿರುವ ಅಧಿಕಾರಿಗಳು, ಬ್ಯಾಂಕ್ ಖಾತೆಗಳ ಮಾಹಿತಿ ಸಂಗ್ರಹಿಸಿದ್ದಾರೆ.

ಭಾರತ್ ಇನ್ಫ್ರಾ ಕಂಪನಿಯ ವಿರುದ್ಧ ಅಕ್ರಮ ಹಣ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿರುವ ಜಾರಿ ನಿರ್ದೇಶನಾಲಯ, ಕಳೆದ ಜೂನ್ 5ರಂದು ದಾಳಿಯ ಕ್ರಮ ತೆಗೆದುಕೊಂಡಿದೆ.

ಈ ಕಂಪನಿಯು ನಕಲಿ ದಾಖಲೆಗಳನ್ನು ಸೃಷ್ಟಿಸಿ ಸ್ಟೇಟ್ ಬ್ಯಾಂಕ್ (3ನೇ ಪುಟಕ್ಕೆ)

## ಮದ್ಯದ ಮೇಲಿನ ತೆರಿಗೆ ಹೆಚ್ಚಳ

ಬೆಂಗಳೂರು, ಜೂ. 7 – ರಾಜ್ಯ ಸರ್ಕಾರ ಮದ್ಯದ ಮೇಲಿನ ತೆರಿಗೆಯನ್ನು ಹೆಚ್ಚಿಸಿದೆ. ಬಿಯರ್ ದರಗಳನ್ನು ಅಲ್ಪ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ.

ರಾಜ್ಯ ಸರ್ಕಾರ ಐದು ಗ್ಯಾರಂಟಿಗಳನ್ನು ಜಾರಿಗೆ ತರಲು ಕ್ರಮ ತೆಗೆದುಕೊಳ್ಳುತ್ತಿರುವ ಮಧ್ಯೆಯೇ ತೆರಿಗೆ ಏರಿಕೆಗೆ ನಿರ್ಧರಿಸಲಾಗಿದೆ.

ಚಿತ್ರ: ರಫೀಕ್, ಜನತಾವಾಣಿ



**ಜೊಂಡು ತುಂಬಿದ ಕೆರೆ ...** ದಾವಣಗೆರೆ ನಗರಕ್ಕೆ ಸಮೀಪದ ಬಾತಿ ಕೆರೆ ಹೂಳು ತೆಗೆಯದೇ ಬಹುತೇಕ ಭಾಗ ಜೊಂಡಿನಿಂದ ಆವರಿಸಿದೆ. ಕೆರೆಯನ್ನು ಅಭಿವೃದ್ಧಿ ಪಡಿಸುವ ಮಾತುಗಳು ಕೇಳಿ ಬಂದಿದ್ದವಾದರೂ, ಕಾರ್ಯರೂಪಕ್ಕೆ ಬಂದಿಲ್ಲ.

### ಕರೆಶಿವಪ್ಪರ ಭರ್ಮಪ್ಪನವರು ನಿಧನ



ಹರಿಹರ ನಗರದ ಗುತ್ತೂರು ಕಾಲೋನಿವಾಸಿಯಾದ
**ಕೆ. ಭರಮಪ್ಪ**
ದಿನಾಂಕ : 7.6.2023ರ ಬುಧವಾರ ರಾತ್ರಿ 11.45 ಕ್ಕೆ ಹೃದಯಘಾತದಿಂದ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಮೃತರಿಗೆ 90 ವರ್ಷ ವಯಸ್ಸಾಗಿತ್ತು.
ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 8.6.2023ರ ಗುರುವಾರ ಮಧ್ಯಾಹ್ನ 12 ಕ್ಕೆ ಹರಿಹರದ ಗುತ್ತೂರು ಕಾಲೋನಿ, ಹಳೆ ಹರ್ಲಾಪುರ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬದವರು : ಪತ್ನಿ : ರೇವಮ್ಮ
ಕರೆಶಿವಪ್ಪರ ವಂಶಸ್ಥರು, ದಾವಣಗೆರೆ.
ಹಾಗೂ ದಾವಣಗೆರೆ ಬಸವರಾಜಪ್ಪ ಮತ್ತು ಸಹೋದರರು, ಷಂಶಿಪುರ.
ಪರಮೇಶ್ : 9742550797, ಕರಿಬಸಪ್ಪ : 88614 80085
ಶಿವಕುಮಾರ್ : +91 98450 85055

॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

### ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ದಾವಣಗೆರೆ ಸಿಟಿ, ತರಳಬಾಳು ಬಡಾವಣೆ ನಿವಾಸಿ
ಲಿಂ. ಶ್ರೀಮತಿ ಎನ್.ಜಿ. ಗೌರಮ್ಮ, (ನಿವೃತ್ತ ಕೆಇಬಿ ನೌಕರರು)
ಮತ್ತು ಮಕ್ಕಳು, ಮೊಮ್ಮಕ್ಕಳು ಮಾಡುವ ವಿಜ್ಞಾಪನೆಗಳು.
ದಿನಾಂಕ 28.05.2023ನೇ ಭಾನುವಾರ ಮಧ್ಯಾಹ್ನ 3.40 ಕ್ಕೆ



ಜನನ : 08-09-1940
ಮರಣ : 28-05-2023

**ಶರಣ ಎಸ್. ಮುರುಗೇಂದ್ರಪ್ಪ** (ನಿವೃತ್ತ ಶಿಕ್ಷಕರು)

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ದಿನಾಂಕ 09.06.2023ನೇ ಶುಕ್ರವಾರ ಬೆಳಿಗ್ಗೆ 11.00 ಕ್ಕೆ
ಲಿಂಗೈಕ್ಯರ ಸ್ವಗ್ರಾಮ, ಹಿರೇಕೋಗಲೂರು ಗ್ರಾಮ, ಚನ್ನಗಿರಿ ತಾಲ್ಲೂಕು
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು
ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಎಸ್.ಎಂ. ರೇಖಾ, ಎಸ್.ಎಂ. ನಾಗರಾಜ್,
ಡಾ.ಎಸ್.ಎಂ. ವೀರೇಶ್ ಮತ್ತು ಅಳಿಯಂದಿರು,
ಸೊಸೆಯಂದಿರು, ಮೊಮಕ್ಕಳು, ಹಾಗೂ ಬಂಧು ಮಿತ್ರರು.
ಮೊಬೈಲ್ : 94480 27044, 99722 71036

## ಅವೈಜ್ಞಾನಿಕ ಕಾಮಗಾರಿಗಳ ಪರಿಶೀಲನೆ : ಎಸ್ಸೆಸ್ಸೆಂ

**(1ನೇ ಪುಟದಿಂದ)** ಕಾಮಗಾರಿಗಳಿಗೆ ಬಳಸಿಕೊಳ್ಳಲಾಗಿದೆ. ನಾವು ಮ್ಯಾಚಿಂಗ್ ಗ್ರ್ಯಾಂಟ್ ತಂದು ಅಭಿವೃದ್ಧಿ ಮಾಡಿದ್ದೆವು. ಈಗ ಎಲ್ಲಿ ಈ ರೀತಿ ಕೆಲಸಗಳಾಗಿವೆ? ಎಂದು ಪ್ರಶ್ನಿಸಿದರು.

**ಗ್ಯಾರಂಟಿ ಸಮರ್ಪಕ ಜಾರಿಗೆ ಸಮಯ ಬೇಕು:** ಚುನಾವಣಾ ಪೂರ್ವದಲ್ಲಿ ಘೋಷಿಸಲಾಗಿದ್ದ ಗ್ಯಾರಂಟಿಗಳನ್ನು ಸರ್ಕಾರ ಜಾರಿಗೆ ತಂದಿದೆ. ಆದರೆ ಕೆಲವೊಂದು ನ್ಯೂನತೆಗಳಿವೆ. ಅವುಗಳ ಬಗ್ಗೆ ಚರ್ಚೆ ನಡೆಯುತ್ತಿದೆ ಎಂದು ಮಲ್ಲಿಕಾರ್ಜುನ್ ಹೇಳಿದರು.

ನಿಮಗೆ ಬರುವ ಸಂಬಳಕ್ಕಿಂತ ಎರಡು ಪಟ್ಟು ಖರ್ಚು ಮಾಡುತ್ತೀರಾ? ಎಂದು ಪತ್ರಕರ್ತರನ್ನೇ ಪ್ರಶ್ನಿಸಿದ ಅವರು, ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವಾಗ ಧನಾತ್ಮಕ ಹಾಗೂ ಋಣಾತ್ಮಕ ಎರಡೂ ವಿಷಯಗಳ ಬಗ್ಗೆ ಅಧ್ಯಯನ ನಡೆಸಬೇಕಾಗುತ್ತದೆ.

ಉದಾಹರಣೆಗೆ ಯುವ ನಿಧಿ ಯೋಜನೆಯಡಿ ನಾವು ಧನ ಸಹಾಯ ಮಾಡುತ್ತೇವೆ.

ಫಲಾನುಭವಿಗೆ ಕೆಲಸ ಸಿಕ್ಕರೆ ಅದು ನಮಗೆ ಗೊತ್ತಾಗುವುದು ಹೇಗೆ? ಈ ವರ್ಷ ಡಿಗ್ರಿ ಪಾಸಾದವರಿಗೆ ಹಣ ಕೊಡುವುದಾಗಿ ಹೇಳಲಾಗಿದೆ. ಪಾಸಾದ ಕೂಡಲೇ ಅವರು ಅರ್ಜಿ ಸಲ್ಲಿಸಬೇಕು. ಕೆಲಸ ಸಿಕ್ಕರೆ ನಮಗೆ ಹೇಗೆ ಗೊತ್ತಾಗಬೇಕು? ಅದಕ್ಕಾಗಿ ಕೆಲವು ಕಂಡೀಷನ್‌ಗಳು ಹಾಕಲಾಗುತ್ತದೆ ಎಂದರು.

ಇನ್ನು ಉಚಿತ ವಿದ್ಯುತ್ ನೀಡಿಕೆಗೆ ಸಂಬಂಧಿಸಿದಂತೆಯೂ ಅನಗತ್ಯವಾಗಿ ವಿದ್ಯುತ್ ಬಳಕೆ ತಪ್ಪಿಸಲು ಕೆಲ ಕಂಡೀಷನ್ ಹಾಕಲಾಗಿದೆ ಎಂದರು.

## ಬ್ರಿಜ್‌ಭೂಷಣ್ ಬಂಧಿಸಲು ಆಗ್ರಹಿಸಿ ಪ್ರತಿಭಟನೆ




ಹರಿಹರ, ಜೂ. 7- ಭಾರತೀಯ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್‌ರನ್ನು ಬಂಧಿಸಿ, ಮಹಿಳಾ ಕುಸ್ತಿ ಪಟುಗಳಿಗೆ ನ್ಯಾಯವನ್ನು ದೊರಕಿಸಿಕೊಡುವಂತೆ ಆಗ್ರಹಿಸಿ, ನಗರದ ಕ್ರೀಡಾ ಪಟುಗಳು ಪ್ರತಿಭಟನೆ ನಡೆಸಿ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಈ ವೇಳೆ ಹಿರಿಯ ಕ್ರೀಡಾ ಪಟು, ನಗರಸಭೆ ಮಾಜಿ ಅಧ್ಯಕ್ಷ ಬಿ.ರೇವಣಸಿದ್ದಪ್ಪ, ಹಿರಿಯ ಕ್ರೀಡಾಪಟು ಹೆಚ್ ನಿಜಗುಣ, ನಗರಸಭೆ ಸದಸ್ಯ ಶಂಕರ್ ಖಟಾವ್ಕರ್ ಮಾತನಾಡಿ ಕ್ರೀಡೆಗೆ ಜಾತಿ , ಧರ್ಮ, ಲಿಂಗ ಭೇದ ಯಾವುದೂ ಇಲ್ಲ. ಸಾಮರಸ್ಯಕ್ಕಾಗಿ ಆಡುವ ಕ್ರೀಡೆಗೆ ವಿಶೇಷವಾದ ಗೌರವ ಪ್ರಪಂಚದಲ್ಲಿ ಇದೆ . ಆದರೆ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್ ಕೆಲ ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಹಿನ್ನೆಲೆಯಲ್ಲಿ ದೇಶ ವ್ಯಾಪಿ ವಿರೋಧವಾಗುತ್ತಿದೆ. ಲೈಂಗಿಕ ಕಿರುಕುಳ ನೀಡಿದ ವ್ಯಕ್ತಿಯನ್ನು ಇದುವರೆಗೂ ಬಂಧಿಸುವ ಕಾರ್ಯವಾಗಿಲ್ಲ. ಕೂಡಲೇ ಬಂಧಿಸಿ, ಅಧ್ಯಕ್ಷ ಸ್ಥಾನದಿಂದ ವಜಾ ಗೊಳಿಸಬೇಕು ಹಾಗೂ ಅವರಿಗೆ ತಕ್ಕ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದರು.

ಗಾಂಧಿ ಮೈದಾನದಿಂದ ಆರಂಭಗೊಂಡ ಪ್ರತಿಭಟನಾ ಮೆರವಣಿಗೆ ಹಳೇ ಪಿ.ಬಿ. ರಸ್ತೆ, ಗಾಂಧಿ ವೃತ್ತದಲ್ಲಿ ಸಂಚರಿಸಿ ತಹಶೀಲ್ದಾರ್ ಕಚೇರಿಗೆ ಅಂತ್ಯಗೊಂಡಿತು. ಈ ಸಂದರ್ಭದಲ್ಲಿ ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ, ಗಣೇಶ ದುರ್ಗದ್, ಜೆ. ಕಲಿಂಭಾಷಾ, ಪೈ, ಸದಾಶಿವ, ವೈ.ರಘುಪತಿ, ನಿಂಗಪ್ಪ, ಬಸವರಾಜ್, ರಾಜು ಶಿವಯೋಗಿ, ಪ್ರವೀಣ್ ಜಿ.ವಿ., ಸಿ.ಎನ್. ಮಂಜುನಾಥ್, ಶಂಕರ್ ಮೂರ್ತಿ, ಗೋವಿಂದಪ್ಪ, ಮಂಜುನಾಥ್, ಮಹಮ್ಮದ್ ಅಲಿ, ರಾಮಚಂದ್ರಪ್ಪ, ದೇವೇಂದ್ರಪ್ಪ, ಧನರಾಜ್, ಮಲ್ಲೇಶ್, ಕರುಣಾಕರ, ಪ್ರವೀಣ್ ಬಿಳಸನೂರು, ಶ್ರೀದೇವಿ, ಕೇಶವ, ನಾಗರಾಜ್, ಹುಲಿಕಟ್ಟಿ ಚನ್ನಬಸಪ್ಪ, ಮಹದೇವ ಇತರರು ಹಾಜರಿದ್ದರು.

## ಏರ್ ಇಂಡಿಯಾ ವಿಮಾನ ರಷ್ಯಾದಲ್ಲಿ ತುರ್ತು ಭೂಸ್ಪರ್ಷ

ಮಾಸ್ಕೋ, ಜೂ. 7 – ದೆಹಲಿಯಿಂದ ಸ್ಯಾನ್ ಫ್ರಾನ್ಸಿಸ್ಕೋಗೆ ತೆರಳುತ್ತಿದ್ದ ಏರ್ ಇಂಡಿಯಾ ವಿಮಾನ ರಷ್ಯಾದ ಮಗಡನ್ ಎಂಬ ನಗರದಲ್ಲಿ ತುರ್ತು ಭೂಸ್ಪರ್ಷ ಮಾಡಿದೆ. ವಿಮಾನದಲ್ಲಿ 232 ಜನರಿದ್ದಾರೆ. ಈ ವಿಮಾನದಲ್ಲಿ ಅಮೆರಿಕ ಹಾಗೂ ಕೆನಡಾ ಸೇರಿದಂತೆ ಹಲವಾರು ದೇಶಗಳ ನಾಗರಿಕರಿದ್ದಾರೆ. ವಿಶೇಷಜ್ಞರು ವಿಮಾನ ಪರಿಶೀಲಿಸಿದ್ದಾರೆ. ಪ್ರಯಾಣ ಮುಂದುವರೆಸಲು ಮತ್ತೊಂದು ವಿಮಾನ ಬೇಕು ಎಂದು ತಿಳಿಸಲಾಗಿದೆ. ಪ್ರಯಾಣಿಕರಿಗೆ ಹೋಟೆಲ್ ಒಂದರಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ.

## ಕುಸ್ತಿ ಪಟುಗಳ ಪ್ರತಿಭಟನೆಗೆ ತಾತ್ಕಾಲಿಕ ತಡೆ

ನವದೆಹಲಿ, ಜೂ. 7 – ಕುಸ್ತಿ ಒಕ್ಕೂಟದ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಎಫ್.ಐ.ಆರ್. ದಾಖಲಿಸುವುದಾಗಿ ಕೇಂದ್ರ ಸರ್ಕಾರ ಭರವಸೆ ನೀಡಿದ ನಂತರ, ಕುಸ್ತಿ ಪಟುಗಳು ಪ್ರತಿಭಟನೆಯನ್ನು ಜೂನ್ 15ರವರೆಗೆ ತಾತ್ಕಾಲಿಕವಾಗಿ ತಡೆದಿದ್ದಾರೆ.

ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರನ್ನು ಕ್ರೀಡಾಪಟುಗಳಾದ ಬಜರಂಗ್ ಪುನಿಯ ಹಾಗೂ ಸಾಕ್ಷಿ ಮಲಿಕ್ ಭೇಟಿ ಮಾಡಿ ಚರ್ಚೆ ನಡೆಸಿದರು. ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕುಸ್ತಿ ಒಕ್ಕೂಟಕ್ಕೆ ಈ ತಿಂಗಳ ಒಳಗೆ ಚುನಾವಣೆ ನಡೆಸುವುದಾಗಿ ಮತ್ತು ಮಹಿಳೆಯೊಬ್ಬರ ನೇತೃತ್ವದಲ್ಲಿ ಕುಸ್ತಿ ಒಕ್ಕೂಟದಲ್ಲಿ ಆಂತರಿಕ ದೂರು ಸಮಿತಿ ರಚಿಸುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ.

## ಭತ್ತದ ಬೆಂಬಲ ಬೆಲೆ 143 ರೂ. ಹೆಚ್ಚಳ

**(1ನೇ ಪುಟದಿಂದ)** ಇಳಿಕೆಯಾಗುತ್ತಿರುವ ಈ ಸಮಯದಲ್ಲಿ ಬೆಂಬಲ ಬೆಲೆ ಏರಿಕೆ ಮಾಡಿರುವುದರಿಂದ ರೈತರಿಗೆ ಲಾಭವಾಗಲಿದೆ ಎಂದರು.

ಸಾಮಾನ್ಯ ಭತ್ತದ ಬೆಂಬಲ ಬೆಲೆಯನ್ನು 143 ರೂ.ಗಳಷ್ಟು ಹೆಚ್ಚಿಸಿ 2,183 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಎ ಗ್ರೇಡ್ ಭತ್ತದ ಬೆಂಬಲ ಬೆಲೆಯನ್ನು 143 ರೂ.ಗಳಷ್ಟು ಹೆಚ್ಚಿಸಿ 2,203 ರೂ.ಗಳಿಗೆ ನಿಗದಿ ಪಡಿಸಲಾಗಿದೆ.

ಹೈಬ್ರಿಡ್ ಜೋಳದ ಬೆಂಬಲ ಬೆಲೆಯನ್ನು 3,180 ರೂ. ಹಾಗೂ ಮಾಲದಂಡಿ ಜೋಳದ ಬೆಂಬಲ ಬೆಲೆಯನ್ನು ಕ್ವಿಂಟಾಲ್‌ಗೆ 3,225 ರೂ. ಗಳಿಗೆ ನಿಗದಿ ಪಡಿಸಲಾಗಿದೆ. ಕಳೆದ ವರ್ಷ ಇವುಗಳ ಬೆಂಬಲ ಬೆಲೆ ಕ್ರಮವಾಗಿ 2,970 ರೂ. ಹಾಗೂ 2,990 ರೂ. ಆಗಿತ್ತು.

ಮೆಕ್ಕೆಜೋಳದ ಬೆಂಬಲ ಬೆಲೆಯನ್ನು 2,090 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಕಳೆದ ವರ್ಷ ಬೆಂಬಲ ಬೆಲೆ 1,962 ರೂ. ಆಗಿತ್ತು. ರಾಗಿ ಬೆಂಬಲ ಬೆಲೆಯನ್ನು 3,846 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಕಳೆದ ವರ್ಷ ಬೆಂಬಲ ಬೆಲೆ 3,578 ರೂ. ಆಗಿತ್ತು.

ಬೇಳೆಗಳಲ್ಲಿ ಹೆಸರು ಬೇಳೆಯ ಬೆಂಬಲ ಬೆಲೆಯನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ಪ್ರಸಕ್ತ ವರ್ಷಕ್ಕೆ ಬೆಂಬಲ ಬೆಲೆಯನ್ನು 8,558 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಕಳೆದ ವರ್ಷ ಕ್ವಿಂಟಾಲ್ ಹೆಸರು ಬೇಳೆಯ ಬೆಂಬಲ ಬೆಲೆ 7,755 ರೂ. ಆಗಿತ್ತು.

ತೊಗರಿ ಬೇಳೆಯ ಬೆಂಬಲ ಬೆಲೆಯನ್ನು 7,000 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಕಳೆದ ವರ್ಷ ಬೆಂಬಲ ಬೆಲೆ 6,600 ರೂ. ಆಗಿತ್ತು. ಉದ್ದಿನ ಬೇಳೆಯ ಬೆಂಬಲ ಬೆಲೆಯನ್ನು 6,950 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಕಳೆದ ವರ್ಷ ಬೆಂಬಲ ಬೆಲೆ 6,600 ರೂ. ಆಗಿತ್ತು.

ಎಣ್ಣೆ ಬೀಜಗಳ ಪೈಕಿ ಎಳ್ಳಿನ ಬೆಂಬಲ ಬೆಲೆಯನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ಕಳೆದ ವರ್ಷ 7,830 ರೂ. ಇದ್ದ ಬೆಂಬಲ ಬೆಲೆಯನ್ನು ಈ ಬಾರಿ 8,635 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಶೇಂಗ ಬೆಂಬಲ ಬೆಲೆಯನ್ನು 5,850 ರೂ.ಗಳಿಂದ 6,377 ರೂ.ಗಳಿಗೆ ಹೆಚ್ಚಿಸಲಾಗಿದೆ.

ಸೋಯಾಬೀನ್ ಬೆಂಬಲ ಬೆಲೆಯನ್ನು 4,300 ರೂ.ಗಳಿಂದ 4,600 ರೂ.ಗಳಿಗೆ ಹೆಚ್ಚಿಸಲಾಗಿದೆ. ಗುರೆಳ್ಳು ಬೆಂಬಲ ಬೆಲೆಯನ್ನು 7,287 ರೂ.ಗಳಿಂದ 7,734 ರೂ.ಗಳಿಗೆ ಏರಿಕೆ ಮಾಡಲಾಗಿದೆ. ಸೂರ್ಯಕಾಂತಿ ಬೆಂಬಲ ಬೆಲೆಯನ್ನು 6,400 ರೂ.ಗಳಿಂದ 6,760 ರೂ. ಗಳಿಗೆ ಹೆಚ್ಚಿಸಲಾಗಿದೆ.

ವಾಣಿಜ್ಯ ಬೆಳೆಗಳಲ್ಲಿ ಉದ್ದ ಹತ್ತಿಯ ಬೆಲೆಯನ್ನು 6,380 ರೂ.ಗಳಿಂದ 7,020 ರೂ.ಗಳಿಗೆ ಹೆಚ್ಚಿಸಲಾಗಿದೆ. ಮಧ್ಯಮ ಹತ್ತಿಯ ಬೆಲೆಯನ್ನು 6,080 ರೂ.ಗಳಿಂದ 6,620 ರೂ.ಗಳಿಗೆ ಹೆಚ್ಚಿಸಲಾಗಿದೆ.

## ನಗರದ ಅಕ್ಕಮಹಾದೇವಿ ಸಮಾಜದಲ್ಲಿ ಇಂದು

ಶ್ರೀ ಅಕ್ಕಮಹಾದೇವಿ ಸಮಾಜದ ವತಿಯಿಂದ ಶ್ರೀ ಅಕ್ಕಮಹಾದೇವಿ ಸಮಾಜದ ಸಹಾಯ ನಿಧಿಯಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಇಂದು ಸಂಜೆ 4 ಗಂಟೆಗೆ ಶ್ರೀಮತಿ ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ಶ್ರೀ ಅಕ್ಕಮಹಾದೇವಿ ಸಮಾಜದ ಅಧ್ಯಕ್ಷರಾದ ಶ್ರೀಮತಿ ಕೆ.ಕೆ.ಸುಶೀಲಮ್ಮ ಅವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿರುವ ಈ ಕಾರ್ಯಕ್ರಮದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪುರಸ್ಕಾರಕ್ಕೆ ಭಾಜನಾಗಿರುವ ಹಿರಿಯ ಲೆಕ್ಕ ಪರಿಶೋಧಕ ಅಥಣಿ ಎಸ್. ವೀರಣ್ಣ ಅವರನ್ನು ಸನ್ಮಾನಿಸಲಾಗುತ್ತದೆ.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ. ಎಂ. ಮಂಜುನಾಥ, ಸಾರ್ವಜನಿಕ ಶಿಕ್ಷಣ ಇಲಾಖೆ ವಿಜ್ಞಾನ ವಿಷಯ ಪರಿವೀಕ್ಷಕರಾದ ಶ್ರೀಮತಿ ಆರ್.ಬಿ. ವಸಂತ ಕುಮಾರಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಇದೇ ಸಂದರ್ಭಲ್ಲಿ ಶ್ರೀ ಅಕ್ಕಮಹಾದೇವಿ ಸಮಾಜದ ಹಿರಿಯರಾದ ಶ್ರೀಮತಿ ಜಯಮ್ಮ ನೀಲಗುಂದ ಅವರಿಂದ ಚಿಂತನ - ಮಂತನ ಕಾರ್ಯಕ್ರಮ ನಡೆಯಲಿದೆ.

## ಶಿಷ್ಯ ವೇತನಕ್ಕೆ ಕಾನೂನು ಪದವೀಧರರಿಂದ ಅರ್ಜಿ ಆಹ್ವಾನ

ದಾವಣಗೆರೆ, ಜೂ. 7 - ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಜಿಲ್ಲೆಯ ಪರಿಶಿಷ್ಟ ಜಾತಿ ಕಾನೂನು ಪದವೀಧರರಿಗೆ ಶಿಷ್ಯವೇತನ ನೀಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜುಲೈ 15 ಕೊನೆ ದಿನ. ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಿದ ನಂತರ ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ಸಂಬಂಧಿಸಿದ ತಾಲ್ಲೂಕುಗಳ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ www.sw.kar.nic.in ಅಥವಾ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರ ಕಚೇರಿಗೆ ಸಂಪರ್ಕಿಸಲು ಉಪನಿರ್ದೇಶಕ ನಾಗರಾಜ್ ತಿಳಿಸಿದ್ದಾರೆ.

## ಜಿಲ್ಲೆಯ ರಾಜ್ಯ ಸ.ನೌಕರರ ಮಕ್ಕಳ ಪುರಸ್ಕಾರಕ್ಕೆ ಅರ್ಜಿ

ದಾವಣಗೆರೆ, ಜೂ. 7 - ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಯಲ್ಲಿ ಶೇ. 90 ಕ್ಕೂ ಹೆಚ್ಚು ಅಂಕ ಪಡೆದ ಜಿಲ್ಲೆಯ ರಾಜ್ಯ ಸರ್ಕಾರಿ ನೌಕರರ ಮಕ್ಕಳಿಂದ 2023 ನೇ ಸಾಲಿನ ಪ್ರತಿಭಾ ಪುರಸ್ಕಾರಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಂಘದಿಂದ ನಿಗದಿಗೊಳಿಸಿರುವ ನಮೂನೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ, ತಾಲ್ಲೂಕು, ಯೋಜನಾ ಶಾಖೆ, ಅಧ್ಯಕ್ಷರು ಗಳಿಂದ ಸೇವಾ ದೃಢೀಕರಣ ಪ್ರಮಾಣ ಪತ್ರವನ್ನು ದೃಢೀಕರಿಸಿ, ಆನ್‌ಲೈನ್ ಲಿಂಕ್‌ನೊಂದಿಗೆ 1.0 ಎಂ.ಬಿ ಮೀರದಂತೆ ಇದೇ ದಿನಾಂಕ 31 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಂಘದ ಜಿಲ್ಲಾ ಕಾರ್ಯದರ್ಶಿ ಸಿ. ಗುರುಮೂರ್ತಿ (98446 45183) ಅವರನ್ನು ಸಂಪರ್ಕಿಸಲು ಜಿಲ್ಲಾಧ್ಯಕ್ಷ ವೀರೇಶ ಎಸ್. ಒಡೇನಪುರ ತಿಳಿಸಿದ್ದಾರೆ.

## ಆರ್ಕೈಕೆ ಆಸ್ಪತ್ರೆಯಿಂದ ಆರೋಗ್ಯ ತಪಾಸಣಾ ಶಿಬಿರ



ದಾವಣಗೆರೆ, ಜೂ.7 - ನಗರದ ಪ್ರೀತಿ ಆರ್ಕೈಕೆ ಟ್ರಸ್ಟ್, ಸ್ಟಾರ್ ಹೆಲ್ತ್ ಇನ್ಶೂರೆನ್ಸ್ ಮತ್ತು ಆರ್ಕೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸಹಯೋಗದಲ್ಲಿ ನಗರದ ರಿಷಿ ಶಾಲೆಯಲ್ಲಿ ಮೊನ್ನೆ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ. ರವಿಕುಮಾರ್, ಸಾಮಾಜಿಕ ಸೇವೆಯ ಭಾಗವಾಗಿ ಈ ರೀತಿ ಉಚಿತವಾಗಿ ಆರೋಗ್ಯ ತಪಾಸಣಾ ಶಿಬಿರಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುತ್ತಿದ್ದು, ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸಕ್ಕರೆ ಕಾಯಿಲೆ, ರಕ್ತದೊತ್ತಡ, ಕೀಲು ನೋವು ಸೇರಿದಂತೆ ವಿವಿಧ ಕಾಯಿಲೆಗಳ ತಪಾಸಣೆ ಮತ್ತು ಚಿಕಿತ್ಸೆ ನೀಡಲಾಗಿದೆ ಎಂದು ತಿಳಿಸಿದರು.

ಹಿರಿಯ ವೈದ್ಯ ಡಾ. ಹಾಲಸ್ವಾಮಿ ಕಂಬಾಳಿಮಠ್, ಅತಿಥಿಗಳಾದ ಭರತ್ ಎಸ್, ರಾಜೇಂದ್ರ ದೊಡ್ಡವಾಡ ತಪಾಸಣೆ ಶಿಬಿರದಲ್ಲಿ ಪಾಲ್ಗೊಂಡಿದ್ದರು. ರಿಷಿ ಸಮೂಹ ಸಂಸ್ಥೆಗಳ ಪ್ರಾಂಗಣದಲ್ಲಿ ಆಯೋಜಿಸಿದ್ದ ತಪಾಸಣೆ ಶಿಬಿರದಲ್ಲಿ ಸ್ಟಾರ್ ಹೆಲ್ತ್ ಇನ್ಶೂರೆನ್ಸ್ ವಿಮಾದಾರರು ಭಾಗವಹಿಸಿದ್ದರು.

## ಮರೆಯಾಗುತ್ತಿರುವ ಸಾಹಿತ್ಯದ ಮೌಲ್ಯಗಳು

### ಹರಪನಹಳ್ಳಿ ಕಾರ್ಯಕ್ರಮದಲ್ಲಿ ಸಂಶೋಧಕ ಎಸ್. ಮಲ್ಲಿಕಾರ್ಜುನಪ್ಪ ವ್ಯಾಕುಲತೆ



ಹರಪನಹಳ್ಳಿ, ಜೂ. 7- ಯಾವುದೇ ಪುಸ್ತಕ ಒಂದು ಕಾಲದ ಸಂಸ್ಕೃತಿ, ಸಂಸ್ಕಾರವನ್ನು, ಇನ್ನೊಂದು ಕಾಲಕ್ಕೆ ಕೊಂಡೊಯ್ಯುವ ಸಂಸ್ಕೃತ ವಾಹಿನಿಯಾಗಿದೆ ಎಂದು ದಾವಣಗೆರೆಯ ಸಂಶೋಧಕರೂ, ಲೇಖಕರೂ ಆದ ಎಸ್. ಮಲ್ಲಿಕಾರ್ಜುನಪ್ಪ ಹೇಳಿದರು.

ತಾಲ್ಲೂಕಿನ ಮಜ್ಜಿಗೇರಿ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಬುಧವಾರ ತಾಲ್ಲೂಕು ಚುಟುಕು ಸಾಹಿತ್ಯ ಪರಿಷತ್ ನೇತೃತ್ವದಲ್ಲಿ ತಮ್ಮ 25ನೇ ಕೃತಿ ಅಸಂಗತ ಪುಸ್ತಕ ಲೋಕರ್ಪಣೆಗೊಳಿಸಿ ಅವರು ಮಾತನಾಡಿದರು. ಸಾಮಾಜಿಕ ಹಿತಕ್ಕೆ ಪೂರಕವಾಗಿರುವ ಬರವಣಿಗೆಯನ್ನು ಸಾಹಿತ್ಯ ಎನ್ನಲಾಗುತ್ತಿದೆ. ಒಬ್ಬ ಸಾಮಾನ್ಯ ವ್ಯಕ್ತಿಯ ದೃಷ್ಟಿಯಲ್ಲಿ ಸಹ ಸಾಹಿತ್ಯವನ್ನು ಕಾಣಬಹುದಾಗಿದೆ.

ಸಾಹಿತ್ಯದಲ್ಲಿ ಶುದ್ಧ ಮತ್ತು ನಿಖರತೆಯಿಂದ ಕೂಡಿರಬೇಕು. ಅಶುದ್ಧ ಸಾಹಿತ್ಯಕ್ಕೆ ಇಲ್ಲಿ ನೆಲೆಯಿರಬಾರದು. ಇತ್ತೀಚೆಗೆ ಕೆಲವರು ತಮ್ಮದೆ ಶೈಲಿಯಲ್ಲಿ ಇತಿಹಾಸವನ್ನು ತಿರುಚಿ ಬರೆಯುತ್ತಿದ್ದಾರೆ. ಇಂತವರನ್ನು ಸಾಹಿತಿ ಎಂದು ಒಪ್ಪಿಕೊಳ್ಳುವುದು ವಿಷಾದನೀಯ. ಇತ್ತೀಚಿನ ದಿನಗಳಲ್ಲಿ ರಾಜಕಾರಣದ ವ್ಯವಸ್ಥೆಯಿಂದಾಗಿ ಸಾಹಿತ್ಯದ ಮೌಲ್ಯಗಳು ಮರೆಯಾಗುತ್ತಿವೆ ಎಂದು ವಿಷಾದ ವ್ಯಕ್ತಪಡಿಸಿದರು.

ನಿವೃತ್ತ ಪಶು ವೈದ್ಯಾಧಿಕಾರಿ ಪೂಜಾರ ಷಣ್ಮುಖಪ್ಪ ಪುಸ್ತಕ ಕುರಿತು ಮಾತನಾಡಿ, ಸಾಮಾಜಿಕ ಹಿತಕ್ಕೆ ಧಕ್ಕೆ ತರುವಂತಹ ಪುಸ್ತಕಗಳು ಇದ್ದಲ್ಲಿ ಲೇಖಕನ ಗಮನಕ್ಕೆ ತಂದು ತಪ್ಪುಗಳನ್ನು ಸರಿಪಡಿಸುವ ಕೆಲಸವಾಗಬೇಕು. ಈ ನಿಟ್ಟಿನಲ್ಲಿ ಮಲ್ಲಿಕಾರ್ಜುನಪ್ಪನವರು ಶುದ್ಧ ಸಾಹಿತ್ಯದ ಕಡೆ ಇತಿಹಾಸದ ದಾಖಲೆಗಳನ್ನು ಕಲೆ ಹಾಕಿ ಜನರಿಗೆ ಶುದ್ಧವಾದ ಸಾಹಿತ್ಯ ಪರಿಚಯವನ್ನು ಮಾಡುತ್ತಿದ್ದಾರೆ. ಇವರು ಸಾಮಾಜಕ್ಕೆ ಪ್ರೇರಣೆಯಾಗಿದ್ದಾರೆ ಎಂದರು.

ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಸಲಹೆಗಾರ ಜಿ.ಮಹಾದೇವಪ್ಪ ಉದ್ಘಾಟಿಸಿದರು. ಚು.ಸಾ.ಪ ಅಧ್ಯಕ್ಷ ಬಣಕಾರ ರಾಜಶೇಖರ ಅಧ್ಯಕ್ಷತೆ ವಹಿಸಿದ್ದರು.

ಚು.ಸಾ.ಪ. ಪ್ರ.ಕಾರ್ಯದರ್ಶಿ ಪಿ. ಕರಿಬಸಪ್ಪ, ಗ್ರಾಪಂ ಅಧ್ಯಕ್ಷೆ ಸುಗಂಧಮ್ಮ ರೇವಣಸಿದ್ದಪ್ಪ, ಕೆ.ಯಲ್ಲಪ್ಪ, ಅರ್ಚಕ ಕೊಟ್ರೇಶ, ದೇವಸ್ಥಾನ ಸಮಿತಿ ಅಧ್ಯಕ್ಷ ರಾಮಣ್ಣ, ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎಸ್.ಬಿ. ಪಾಟೀಲ್, ನೀಲಗುಂದ ನಾಗರಾಜ ಪಾಟೀಲ್, ಪತ್ರಕರ್ತರಾದ ಎಚ್.ದೇವೇಂದ್ರಪ್ಪ, ಕು. ಶಾಂತಮ್ಮ, ರುದ್ರೇಗೌಡ, ಕಾಳಪ್ಪ, ಮಂಜುನಾಥ, ಸೇರಿದಂತೆ ಇತರರು ಇದ್ದರು.

## ರಾಣೇಬೆನ್ನೂರು ವ್ಯಾಪ್ತಿಯಲ್ಲಿ ಇಂದು ವಿದ್ಯುತ್ ವ್ಯತ್ಯಯ

220 ಕೆವಿ ರಾಣೇಬೆನ್ನೂರು ವಿದ್ಯುತ್ ಕೇಂದ್ರದಲ್ಲಿನ ಎಲ್ಲಾ 33/11ಕೆವಿ ಮಾರ್ಗಗಳ ನಿರ್ವಹಣೆ ಕಾರ್ಯ ಹಮ್ಮಿಕೊಂಡಿರುವುದರಿಂದ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಈ ಕೆಳಕಾಣಿಸಿದ ಭಾಗಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

**220 ಕೆವಿ ರಾಣೇಬೆನ್ನೂರು ವಿದ್ಯುತ್ ಕೇಂದ್ರ** :11ಕೆವಿ ಎಫ್9- ರಿಲೈಯನ್ಸ್ ಮಾರ್ಗಕ್ಕೆ ವಿದ್ಯುತ್ ಸರಬರಾಜು ಇರುವುದಿಲ್ಲ. ಹುಣಸಿಕಟ್ಟಿ ಮತ್ತು ಕಮದೋಡ ವ್ಯಾಪ್ತಿಯ ಎಲ್ಲಾ ಸ್ಟೋನ್ ಕ್ರಷರ್, ಭವಾನಿ ರೈಸ್ ಮಿಲ್, ಯುಟಿಪಿ, ನಿಟ್ಟೂರ ಸ್ಕೂಲ್, ಕೆ.ಎಸ್.ಆರ್.ಟಿ.ಸಿ ಡಿಪೊ, ರಿಲೈಯನ್ಸ್ ಪೆಟ್ರೋಲ್ ಬಂಕ್, ರೈನ್ ಬೊ ಸ್ಕೂಲ್, ಬಳ್ಳಾರಿ ಸ್ಕೂಲ್, ಜೈನ್ ಸ್ಕೂಲ್ ಗ್ರಾಹಕರಿಗೆ.

**33 ಕೆವಿ ಹಲಗೇರಿ ವಿ. ಕೇಂದ್ರ** : ಎಫ್-2 ಆನಂದ ಮಿಲ್, ಹಲಗೇರಿ, ಬಿಲ್ಲಹಳ್ಳಿ, ದಂಡಗಿಹಳ್ಳಿ, ಹಾರೋಗೊಪ್ಪ, ಆಲದಕಟ್ಟಿ, ಅಂತರವಳ್ಳಿ, ನಂದಿಹಳ್ಳಿ, ಲಿಂಗದಹಳ್ಳಿ, ಮಣಕೂರ, ನಿಟ್ಟೂರು, ಕೋಣನತಲಿ, ಯಲಬಡಗಿ, ಗೊಡಿಹಾಳ ಗ್ರಾಮಗಳಿಗೆ.

**33 ಕೆವಿ ಸುಣಕಲ್ಲಬಿದರಿ ವಿ. ಕೇಂದ್ರ** : ಗುಡ್ಡದಬೇವಿನಹಳ್ಳಿ, ಗುಡ್ಡದಹೊಸಳ್ಳಿ, ಹೆಡಿಯಾಲ, ಜೋಯಿಸರ ಹರಳಳ್ಳಿ, ಬೆನಕನಕೊಂಡ, ಉಕ್ಕುಂದ, ಸುಣಕಲ್ಲಬಿದರಿ, ತಿರುಮಲ ದೇವರಕೊಪ್ಪ, ಕುಸಗೂರ, ಸರವಂದ ಗ್ರಾಮಗಳಿಗೆ.

**33 ಕೆವಿ ಮುದೇನೂರು ವಿ. ಕೇಂದ್ರ** : ನಾಗೇನಹಳ್ಳಿ, ಹೊಳೆಆನ್ವೇರಿ, ಮಲ್ಕನಹಳ್ಳಿ, ಮುದೇನೂರು, ಹನುಮನಹಳ್ಳಿ ತೆರದಹಳ್ಳಿ, ಕೃಷ್ಣಾಪುರ, ಮುಷ್ಟೂರು, ಇಟಗಿ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ಹುದ್ದೆಗಳಿಗೆ 2 ವರ್ಷ ವಯೋಮಿತಿ ಸಡಿಲಿಕೆ

**(1ನೇ ಪುಟದಿಂದ)** ಅನುದಾನಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ, ಖಾಸಗಿ ಅನುದಾನಿತ ಪ್ರಾಥಮಿಕ ಪ್ರೌಢ ಶಿಕ್ಷಕರ ಹುದ್ದೆಗಳ ಮೊದಲ ನೇಮಕಾತಿಗೆ ಮಾತ್ರ ಅನ್ವಯವಾಗುವಂತೆ 2022ರ ಜೂನ್ 23 ರಿಂದ ಒಂದು ವರ್ಷದ ಅವಧಿಗೆ ಮಾತ್ರ ಸೀಮಿತವಾಗಿ ಗರಿಷ್ಠ ವಯೋಮಿತಿಯಲ್ಲಿ 2 ವರ್ಷಗಳ ಸಡಿಲಿಕೆ ನೀಡಿ ರಾಜ್ಯ ಸರ್ಕಾರ ಆದೇಶಿಸಿದೆ.

## ಹರಿಹರ : ಭಾರೀ ಗಾಳಿಯಿಂದ ಮರ ಧರೆಗೆ



ಹರಿಹರ, ಜೂ.7- ನಗರದಲ್ಲಿ ಸಂಜೆ ದಿಢೀರ್ ಬೀಸಿದ ಗಾಳಿಯಿಂದಾಗಿ ಹೊಸ ಭರಂಪುರ ಬಡಾವಣೆಯ ಮನೆಯ ಮುಂದೆ ಇದ್ದ ಬೃಹದಾಕಾರದ ಬೇವಿನ ಮರವೊಂದು ನೆಲಕ್ಕೆ ಉರುಳಿದ ಪರಿಣಾಮವಾಗಿ ಪಕ್ಕದ ರಸ್ತೆಯಲ್ಲಿ ಇದ್ದ ವಿದ್ಯುತ್ ಕಂಬವು ವಾಲಿ ಕೊಂಡು ಸ್ವಲ್ಪದರಲ್ಲೇ ನಿಂತಿದ್ದರಿಂದ ಬಾರಿ ಅನಾಹುತ ತಪ್ಪಿದಂತಾಗಿದ್ದು, ನಂತರ ಸ್ಥಳಕ್ಕೆ ಬೆಸ್ಕಾಂ ಸಿಬ್ಬಂದಿಗಳು ಹಾಜರಾಗಿ ವಾಲಿಕೊಂಡಿದ್ದ ವಿದ್ಯುತ್ ಕಂಬವನ್ನು ತಾತ್ಕಾಲಿಕವಾಗಿ ದುರಸ್ತಿ ಮಾಡಿದ್ದಾರೆ.

ಮತ್ತೆ ಪುನಃ ಗಾಳಿ ದೂಳಿನ ರಭಸವು ಹೆಚ್ಚಾದರೆ, ಮತ್ತೆ ವಿದ್ಯುತ್ ಕಂಬವು ನೆಲಕ್ಕೆ ಉರುಳುವ ಸಾಧ್ಯತೆ ಇರುವುದರಿಂದ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರಿಗೆ ತೊಂದರೆಗಳು ಆಗುವ ಲಕ್ಷಣಗಳು ಇರುವುದರಿಂದ ಬೆಸ್ಕಾಂ ಇಲಾಖೆಯವರು ಬರುವ ದಿನದಂದು ವಿದ್ಯುತ್ ಕಂಬವನ್ನು ಬೇಗನೇ ದುರಸ್ತಿ ಪಡಿಸುವಂತೆ ಸ್ಥಳೀಯ ನಿವಾಸಿಗಳು ಆಗ್ರಹಿಸಿದರು.

ಮರ ನೆಲಕ್ಕೆ ಉರುಳಿದಾಗ ಮರದ ಕೆಳಗೆ ನಿಲ್ಲಿಸಲಾಗಿದ್ದ ಎರಡು ಬೈಕ್ ಒಂದು ಕಾರ್ ಯಾವುದೇ ರೀತಿಯ ಹಾನಿಯಾಗದೇ ಸುರಕ್ಷಿತವಾಗಿ ಇರುವುದು ಕಂಡುಬಂದಿದೆ.

ಈ ಸಂದರ್ಭದಲ್ಲಿ ಬೆಸ್ಕಾಂ ಸಿಬ್ಬಂದಿಗಳಾದ ಪ್ರಕಾಶ್, ನಾಗರಾಜ್, ಇಮ್ತಿಯಾಜ್, ತಿಮ್ಮಣ್ಣ, ಶ್ರೀಶೈಲಾ, ಪ್ರವೀಣ್ ಹಾಗೂ ಇತರರಿದ್ದರು.

## ಬಾಡಿಗೆದಾರರಿಗೆ ಕರಾರು ಕಡ್ಡಾಯವಲ್ಲ

**(1ನೇ ಪುಟದಿಂದ)** ನಿಭಾಯಿಸಲು ಅನುಕೂಲವಾಗುವಂತೆ ಸರ್ವರ್ ಅನ್ನು ಮೇಲ್ದರ್ಜೆಗೇರಿಸಲಾಗುವುದು ಎಂದು ತಿಳಿಸಿದರು.

ಜೂನ್ 15ರಿಂದ ಜುಲೈ 15ರೊಳಗೆ ಗ್ರಾಹಕರು ನೋಂದಣಿ ಮಾಡಿಕೊಳ್ಳಬಹುದು. ಸ್ವಂತ ಲ್ಯಾಪ್‌ಟಾಪ್, ಕಂಪ್ಯೂಟರ್, ಮೊಬೈಲ್ ಬಳಸಬಹುದು ಎಂದು ಹೇಳಿದರು.

ಒಂದು ವೇಳೆ ತಾಂತ್ರಿಕತೆಯ ಅನುಭವವಿಲ್ಲದಿದ್ದವರು ಬೆಂಗಳೂರು ಒನ್, ಕರ್ನಾಟಕ ಒನ್, ಗ್ರಾಮ ಒನ್ ಕೇಂದ್ರಗಳಲ್ಲಿ ನೋಂದಾಯಿಸಿಕೊಳ್ಳಬೇಕು. ಇದಕ್ಕಾಗಿ ಬೆಸ್ಕಾಂನಿಂದ ವಿಶೇಷ ಶಿಬಿರಗಳನ್ನು ಕೂಡ ಆಯೋಜನೆ ಮಾಡಲಾಗುತ್ತದೆ ಎಂದು ಸಚಿವರು ಹೇಳಿದರು.

ನೋಂದಣಿ ಪೂರ್ಣಗೊಂಡ ಬಳಿಕ ಎಸ್‌ಎಂಎಸ್ ಮತ್ತು ಇ-ಮೇಲ್ ಮೂಲಕ ಗ್ರಾಹಕರಿಗೆ ಸಂದೇಶ ರವಾನೆಯಾಗುತ್ತದೆ ಎಂದು ತಿಳಿಸಿದರು.

ಸರ್ಕಾರ ದಾಖಲಾತಿಯ ನೆಪದಲ್ಲಿ ಜನರು ಸೌಲಭ್ಯ ವಂಚಿತರಾಗುವುದನ್ನು ಬಯಸುವುದಿಲ್ಲ. ಆದಷ್ಟು ಸರಳ ವ್ಯವಸ್ಥೆಯನ್ನು ರೂಪಿಸಲು ಕ್ರಮ ಕೈಗೊಳ್ಳುತ್ತಿದೆ.

ಹೊಸ ಸಂಪರ್ಕ ಪಡೆಯುವವರು ಮತ್ತು ಇತ್ತೀಚೆಗಷ್ಟೇ ಮನೆ ಬಾಡಿಗೆಗೆ ಬಂದವರಿಗೆ ವಾರ್ಷಿಕ ಸರಾಸರಿಯನ್ನು ಲೆಕ್ಕ ಹಾಕುವ ಬಗ್ಗೆ ಸ್ಪಷ್ಟತೆ ಇಲ್ಲ. ಹೀಗಾಗಿ ಮುಖ್ಯಮಂತ್ರಿಯವರ ಜೊತೆ ಚರ್ಚಿಸಿ ಒಂದೆರಡು ದಿನಗಳಲ್ಲೇ ಸ್ಪಷ್ಟ ನಿರ್ಧಾರವನ್ನು ಪ್ರಕಟಿಸುವುದಾಗಿ ತಿಳಿಸಿದರು.

ಸಂಪುಟ ಸಭೆಯ ನಿರ್ಣಯದಂತೆ ವಾರ್ಷಿಕ ಬಳಕೆಯ ಸರಾಸರಿಯೊಂದಿಗೆ ಶೇ.10 ರಷ್ಟು ವಿದ್ಯುತ್ ಅನ್ನು ಹೆಚ್ಚು ಬಳಕೆಗೆ ಅನುಮತಿಸಿ, ಯೋಜನೆ ಜಾರಿಗೊಳಿಸಲಾಗುತ್ತಿದೆ.

ಒಂದು ವೇಳೆ ಮುಂದಿನ 12 ತಿಂಗಳೊಳಗೆ 200 ಯೂನಿಟ್‌ಗಿಂತ ಕಡಿಮೆ ವಿದ್ಯುತ್ ಬಳಕೆ ಮಾಡಿದವರಾದರೆ ಅವರಿಗೆ ಮುಂದಿನ ವರ್ಷದಿಂದ ಸೌಲಭ್ಯ ದೊರೆಯಲಿದೆ ಎಂದು ತಿಳಿಸಿದರು.

ಗೃಹಜ್ಯೋತಿ ಯೋಜನೆಯಡಿ ಈಗಾಗಲೇ 200 ಯೂನಿಟ್‌ವರೆಗೆ ಶುಲ್ಕ ವಿನಾಯಿತಿ ನೀಡುವಾಗಲೇ ಫಿಕ್ಸೆಡ್ ಚಾರ್ಜಸ್ ಅನ್ನು ಮನ್ನಾ ಮಾಡಲಾಗಿದೆ. ಹಾಗಾಗಿ ಹೆಚ್ಚುವರಿ ಯೂನಿಟ್‌ಗೆ ಮತ್ತೆ ಫಿಕ್ಸೆಡ್ ಚಾರ್ಜ್ ವಸೂಲಿ ಮಾಡಲಾಗುವುದಿಲ್ಲ. ಆದರೆ ಹೆಚ್ಚುವರಿ ಯೂನಿಟ್‌ಗಳಿಗೆ ಶೇ.9ರಷ್ಟು ಬಡ್ಡಿ ಪಾವತಿಸಬೇಕಾಗುತ್ತದೆ ಎಂದು ಹೇಳಿದರು.

## ಹರಿಹರ: ಕಾಂಗ್ರೆಸ್ ಚುಕ್ಕಾಣಿಗೆ ತ್ರಿಮೂರ್ತಿಗಳ ಪೈಪೋಟಿ

**ಚಿದಾನಂದ ಎಂ. ಕಂಚಿಕೇರಿ**





ಹರಿಹರ ತಾಲ್ಲೂಕಿನ ಕಾಂಗ್ರೆಸ್ ಪಕ್ಷದ ಚುಕ್ಕಾಣಿ ಹಿಡಿಯಲು ಮೂವರು ಕಾಂಗ್ರೆಸ್ ನಾಯಕರು ಪೈಪೋಟಿ ನಡೆಸಿದ್ದು, ಅದಕ್ಕಾಗಿ ರಾಜ್ಯದ ಹಿರಿಯ ನಾಯಕರ ದುಬಾಲು ಬಿದ್ದಿರುವ ಸಂಗತಿ ಚಾಲ್ತಿಯಲ್ಲಿದೆ.

ಈಗಾಗಲೇ ವಿಧಾನಸಭಾ ಚುನಾವಣೆ ನಡೆದು ಹರಿಹರ ತಾಲ್ಲೂಕಿನಲ್ಲಿ ಕಾಂಗ್ರೆಸ್ ಪಕ್ಷವು ಕಡಿಮೆ ಮತಗಳ ಅಂತರದಿಂದ ಸೋತಿದೆ. ಆದರೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿದೆ.

ಹರಿಹರ ತಾಲ್ಲೂಕಿನಲ್ಲಿ ಬಿಜೆಪಿಯ ಬಿ.ಪಿ. ಹರೀಶ್ ಶಾಸಕರಾಗಿ ಆಯ್ಕೆಯಾಗಿದ್ದು, ಆದರೆ ರಾಜ್ಯದಲ್ಲಿ ಅವರ ಪಕ್ಷ ಅಧಿಕಾರಕ್ಕೆ ಬಾರದೇ ಇರುವುದರಿಂದ ಇಲ್ಲಿನ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳು ಅಷ್ಟೊಂದು ಸಲೀಸಾಗಿ ನಡೆಯುವ ಲಕ್ಷಣಗಳು ಕಾಣದಾಗಿವೆ.

ಕಾರಣ ಹಿಂದೆ ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿದ್ದ ರಾಮಪ್ಪನವರ ಆಡಳಿತದ ಕಾಲದಲ್ಲಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇದ್ದುದರಿಂದ ಹರಿಹರ ತಾಲ್ಲೂಕಿನಲ್ಲಿ ಯಾವುದೇ ರೀತಿಯ ಕೆಲಸ ಕಾರ್ಯಗಳು ಆಗುವ ಸಮಯದಲ್ಲಿ ಹರೀಶ್ ತಮ್ಮ ಹಸ್ತಕ್ಷೇಪವನ್ನು ಮಾಡುತ್ತಾ ಜೊತೆಗೆ ತಮಗೆ ಬೇಕಾದಂತಹ ಅಧಿಕಾರಿಗಳನ್ನು ತಾಲ್ಲೂಕಿನ ವಿವಿಧ ಇಲಾಖೆಯಲ್ಲಿ ಹಾಕಿಸಿಕೊಂಡು ಬಂದು, ತಮ್ಮ ಅಧಿಕಾರವನ್ನು ನಡೆಸಿಕೊಂಡು ಬಂದಿದ್ದು ಕ್ಷೇತ್ರದ ಜನಕ್ಕೆ ತಿಳಿದಿರುವ ವಿಚಾರ.

ಈ ನಿಟ್ಟಿನಲ್ಲಿ ಹರಿಹರ ತಾಲ್ಲೂಕಿನಲ್ಲಿ ಕಾಂಗ್ರೆಸ್ ಪಕ್ಷವು ಸೋತಿದ್ದರೂ, ಸಹ ತಾಲ್ಲೂಕಿನಲ್ಲಿ ವಿವಿಧ ಇಲಾಖೆಯಲ್ಲಿ ನಾವು ಹೇಳಿದಂತೆ, ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅಧಿಕಾರಿಗಳು ಮುಂದಾಗಬೇಕು ಎಂಬ ಆಲೋಚನಾ ಅಡಿಯಲ್ಲಿ ಈಗಾಗಲೇ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿದ್ದ, ನಂದಿಗಾವಿ ಶ್ರೀನಿವಾಸ್, ಕೊನೆಯಲ್ಲಿ ಟಿಕೆಟ್ ಕೈ ತಪ್ಪಿರುವ ಮಾಜಿ ಶಾಸಕ ಎಸ್.ರಾಮಪ್ಪ ಮತ್ತು ಟಿಕೆಟ್‌ಗಾಗಿ ಪ್ರಬಲ ಪೈಪೋಟಿ ನೀಡಿದ್ದ ಎಂ. ನಾಗೇಂದ್ರಪ್ಪ ಇವರುಗಳು, ತಮ್ಮ ಪ್ರಭಾವವನ್ನು ರಾಜ್ಯದ ನಾಯಕರ ಮುಂದೆ ಪ್ರದರ್ಶನವನ್ನು ಮಾಡುತ್ತಿರುವುದಕ್ಕೆ ಮುಂದಾಗಿ ಹಲವು ದಿನಗಳಿಂದ ಬೆಂಗಳೂರಿನಲ್ಲಿ ಠಿಕಾಣಿ ಹೂಡಿದ್ದಾರೆ.

ಆತ್ಮಾವಲೋಕನ ಸಭೆಯಲ್ಲಿ ಜಿಲ್ಲಾ ಅಧ್ಯಕ್ಷ ಹೆಚ್.ಮಂಜಪ್ಪ ಮಾತನಾಡಿ, ಇನ್ನು ಮುಂದೆ ಹರಿಹರ ತಾಲ್ಲೂಕಿನಲ್ಲಿ ಯಾವುದೇ ರೀತಿಯ ಪಕ್ಷದ ಕೆಲಸ ಕಾರ್ಯಗಳು ನಂದಿಗಾವಿ ಶ್ರೀನಿವಾಸ್ ನೇತೃತ್ವದಲ್ಲಿ ನಡೆಯುತ್ತವೆ ಅದಕ್ಕೆ ಎಲ್ಲರೂ ಕೈ ಜೋಡಿಸುವಂತೆ ಹೇಳಿದ್ದಾರೆ.

ಅಲ್ಲದೇ ಶ್ರೀನಿವಾಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ರವರಿಂದ ಒಂದು ಆದೇಶ ಪತ್ರವನ್ನು ಮಾಡಿಸಿಕೊಂಡು ಬಂದಿದ್ದಾರೆ. ಅದರಂತೆ ಈಗಾಗಲೇ ಹರಿಹರ ತಾಲ್ಲೂಕಿನಲ್ಲಿ ಕೆಲವೊಂದು ಇಲಾಖೆಯ ಅಧಿಕಾರಿಗಳು ಇವರ ಸಂಪರ್ಕವನ್ನು ಮಾಡಲು ಮುಂದಾಗಿದ್ದೇ ತಡ, ಇತ್ತ ಮಾಜಿ ಶಾಸಕ ಎಸ್. ರಾಮಪ್ಪ ಮತ್ತು ಎಂ. ನಾಗೇಂದ್ರಪ್ಪ ಇವರು ತಮ್ಮ ಪ್ರಭಾವ ಬೀರುವ ದೃಷ್ಟಿಯಿಂದ ನಂದಿಗಾವಿ ಶ್ರೀನಿವಾಸ್‌ರನ್ನು ದೂರ ಇಟ್ಟು, ಎಸ್. ಎಸ್. ಮಲ್ಲಿಕಾರ್ಜುನ್ ಮತ್ತು ಶಾಮನೂರು ಶಿವಶಂಕರಪ್ಪನವರಿಗೆ ಮಂತ್ರಿ ಸ್ಥಾನವನ್ನು ಕೊಡುವಂತೆ ಆಗ್ರಹಿಸಿ, ಪತ್ರಿಕಾಗೋಷ್ಠಿಯನ್ನು ಮಾಡಿದರು. ಈ ಸಂದರ್ಭವನ್ನು ಗಮನಿಸಿದಾಗ ತಾಲ್ಲೂಕಿನ ಕಾಂಗ್ರೆಸ್ ಪಕ್ಷದಲ್ಲಿ ಎಲ್ಲವೂ ಸರಿ ಇಲ್ಲವೇನೋ ಎಂಬಂತೆ ಕಂಡುಬರುತ್ತದೆ.

ತಾಲ್ಲೂಕಿನಲ್ಲಿ ಮತ್ತೆ ಐದು ವರ್ಷಗಳ ಕಾಲ ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆ ಆಗುವ ಲಕ್ಷಣಗಳು ಹೆಚ್ಚಾಗಿರುತ್ತದೆ. ಕಾರಣ ಹಿಂದೆ ಹೆಚ್.ಎಸ್. ಶಿವಶಂಕರ್ ಶಾಸಕರಾಗಿದ್ದ ಸಮಯದಲ್ಲಿ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಎಸ್. ರಾಮಪ್ಪ ಅಡ್ಡಿಯಾದರು. ಎಸ್. ರಾಮಪ್ಪ ಶಾಸಕರಾಗಿದ್ದ ಸಮಯದಲ್ಲಿ ಬಿ.ಪಿ. ಹರೀಶ್ ಅಡ್ಡಿಯಾದರು. ಈಗ ಮತ್ತೆ ಬಿ.ಪಿ. ಹರೀಶ್ ಶಾಸಕರಾಗಿದ್ದಾರೆ. ಇವರಿಗೆ ಕಾಂಗ್ರೆಸ್‌ನ ಈ ಮೂವರೂ ನಾಯಕರು ಅಡ್ಡಿಯಾದರೆ ಮತ್ತೊಮ್ಮೆ ಐದು ವರ್ಷಗಳ ಕಾಲ ಕ್ಷೇತ್ರದ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳು ನಡೆಯದೇ ಹೀಗೇ ಸಾಗಿದರೆ ಕ್ಷೇತ್ರದ ಗತಿ ಅಧೋಗತಿಯಾಗುತ್ತದೆ.

ಈ ನಾಯಕರು ಹಿಂದಿನ ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗುತ್ತಾರೋ ಅಥವಾ ಇತಿಶ್ರೀ ಹಾಡುತ್ತಾರೋ ಮುಂದಿನ ದಿನಗಳಲ್ಲಿ ಕಾದು ನೋಡಬೇಕಾಗಿದೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಯೋಗ: ಅಂತರರಾಷ್ಟ್ರೀಯ ಮಟ್ಟದಲ್ಲೂ ದಾವಣಗೆರೆಯ ಕೀರ್ತಿಪತಾಕೆ ಹಾರಿಸಲಿ




ದಾವಣಗೆರೆ, ಜೂ. 1- ರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಿ, ಚಿನ್ನ ಮತ್ತು ಬೆಳ್ಳಿ ಪದಕ ಪಡೆದಿರುವ ಸ್ಥಳೀಯ ಸ್ಪರ್ಧಾಳುಗಳು ಮುಂಬರುವ ದಿನಗಳಲ್ಲಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಿ ಉತ್ತಮ ಸಾಧನೆ ಮಾಡಬೇಕಾಗಿದೆ ಮಾತ್ರವಲ್ಲದೆ, ಅವರಿಗೆ ಮಾರ್ಗದರ್ಶನ ನೀಡುವ, ಯೋಗ ತರಬೇತಿ ನೀಡುವ ಯೋಗ ಗುರುಗಳಾದ ಪರಶುರಾಮ್ ಅವರೂ ಸಹ ಅಂತರರಾಷ್ಟ್ರೀಯ ಮಟ್ಟದಲ್ಲೂ ಕೀರ್ತಿ ಪತಾಕೆ ಹಾರಿಸಲಿ ಎಂದು ಶಬರಿಮಲೆ ಅಯ್ಯಪ್ಪ ಸೇವಾ ಸಮಿತಿ ಯೋಗ ಫೆಡರೇಶನ್ ಅಧ್ಯಕ್ಷ ರುದ್ರಪ್ಪ ಆಶಿಸಿದರು.

ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ನಡೆದ 6ನೇ ರಾಷ್ಟ್ರೀಯ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಸ್ಪರ್ಧೆ ಮಾಡಿ ಚಿನ್ನ ಹಾಗೂ ಬೆಳ್ಳಿ ಪದಕ ಪಡೆದ ಸಂಜನಾ ಹಾಗೂ ಲಾವಣ್ಯ ಅವರಿಗೆ ಅಭಿನಂದನೆ ಸಲ್ಲಿಸಲು ನಗರದ ಎಂಸಿಸಿ ಬಿ ಬ್ಲಾಕ್‌ನಲ್ಲಿರುವ ಶಬರಿಮಲೆ ಅಯ್ಯಪ್ಪ ಸೇವಾ ಸಮಿತಿ ಯೋಗ ಫೆಡರೇಶನ್ ವತಿಯಿಂದ ನಿನ್ನೆ ಆಯೋಜಿಸಲಾಗಿದ್ದ ಆಯೋಜನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಂತರರಾಷ್ಟ್ರೀಯ ಯೋಗಪಟು ಎನ್. ಪರಶುರಾಮ್ ಪ್ರಾಸ್ತಾವಿಕವಾಗಿ ಮಾತನಾಡಿ, ರೋಗ ಮುಕ್ತ ಸಮಾಜಕ್ಕಾಗಿ ಯೋಗಾಭ್ಯಾಸ ಅಗತ್ಯ. ಯೋಗದಿಂದ ಧೀರ್ಘ ಕಾಲದ ಕಾಯಿಲೆಗಳನ್ನು ಸಹ ಗುಣಪಡಿಸಬಹುದು. ಕಾರಣ ಯಾವುದೇ ಹಿಂಜರಿಕೆ, ಕೀಳರಿಮೆ ಇಲ್ಲದೇ ಯೋಗಾಭ್ಯಾಸ ಮಾಡಿ ಉತ್ತಮ ಆರೋಗ್ಯ ಪಡೆಯಿರಿ ಎಂದ ಅವರು, ಸಂಸ್ಥೆ ಬೆಳೆದು ಬಂದ ಬಗ್ಗೆ ಮಾಹಿತಿ ನೀಡಿ, ಚಾಂಪಿಯನ್ ಶಿಪ್‌ನಲ್ಲಿ ಗೆದ್ದ ಸ್ಪರ್ಧಾರ್ಥಿಗಳಿಗೆ ಶುಭಾಶಯ ಕೋರಿದರು.

ಈ ವೇಳೆ ಫೆಡರೇಷನ್ ಪದಾಧಿಕಾರಿಗಳಾದ ಗೋಪಾಲ್ ರಾವ್, ರಾಘವೇಂದ್ರ ಚವ್ಹಾಣ್, ಅಜಯ್, ಎಸ್.ರಾಜಶೇಖರ್, ಪತ್ರಕರ್ತರಾದ ಎಂ.ವೈ. ಸತೀಶ್, ವೀರೇಶ್, ಬಾತಿ ಶಂಕರ್, ನವೀನ್ ಸೇರಿದಂತೆ ಇತರರು ಇದ್ದರು.

# ಪಕ್ಷಿ ಸಂಕುಲ ಸಂರಕ್ಷಣೆ ಎಲ್ಲರ ಹೊಣೆ

## 'ಗಿಳಿವಿಂಡು ನೋಡೋಣ ಬನ್ನಿ' ಕಾರ್ಯಕ್ರಮದಲ್ಲಿ ಪ್ರೊ. ಶಿಶುಪಾಲ್





ದಾವಣಗೆರೆ, ಜೂ. 7- ದೇಶದಲ್ಲಿ 11 ಪ್ರಭೇದದ ಹಾಗೂ ಕರ್ನಾಟಕದಲ್ಲಿ 4 ಪ್ರಭೇದದ ಗಿಳಿಗಳಿವೆ. ದಾವಣಗೆರೆಯಲ್ಲಿ ಕೂಡ ಗಿಳಿಗಳ ಗುಂಪು ಇರುವುದು ಕೌತುಕದ ಸಂಗತಿಯಾಗಿದೆ. ಅವುಗಳನ್ನು ಸಂರಕ್ಷಣೆ ಮಾಡುವ ಹೊಣೆಗಾರಿಕೆ ಎಲ್ಲರ ಮೇಲಿದೆ ಎಂದು ದಾವಣಗೆರೆ ವಿವಿ ಪ್ರಾಧ್ಯಾಪಕ ಪ್ರೊ. ಶಿಶುಪಾಲ್ ಹೇಳಿದರು.

ನಗರದ ಜನತಾ ಬಜಾರ್ ಟೆರೇಸ್ ಮೇಲೆ ದಾವಣಗೆರೆ ಗಿಳಿವಿಂಡು ಬಳಗದ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಏರ್ಪಡಿಸಿದ್ದ 'ಗಿಳಿವಿಂಡು ನೋಡೋಣ ಬನ್ನಿ' ಕಾರ್ಯಕ್ರಮದಲ್ಲಿ ಮಾತನಾಡಿದರು.

ದಾವಣಗೆರೆಯಲ್ಲಿ 262 ಪ್ರಭೇದದ ಹಕ್ಕಿಗಳನ್ನು ಗುರುತಿಸಲಾಗಿದೆ. ಈ ಬಗ್ಗೆ ಹಕ್ಕಿಗಳ ವಿವರ, ಪಟ್ಟಿ, ಛಾಯಾಚಿತ್ರಗಳು ಸಹ ಇವೆ. ಅರಣ್ಯ ಇಲಾಖೆ ಲೆಕ್ಕದಲ್ಲಿ ಕೇವಲ 20 ಪ್ರಭೇದಗಳನ್ನು ದಾಖಲಿಸಲಾಗಿದೆ. ಮಧ್ಯಕರ್ನಾಟಕದಲ್ಲಿರುವ ವಿಶೇಷ ಗಿಳಿವಿಂಡು ವಾಸಸ್ಥಾನ ದಾವಣಗೆರೆ ಎಂದರು.

ಕರ್ನಾಟಕ ರಾಜ್ಯ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ನಾಲ್ಕು ಬಗೆಯ ಗಿಳಿಗಳು ಕಂಡು ಬರುತ್ತವೆ. ರಿಂಗ್ ನೆಕ್ಡ್ ಪ್ಯಾರಕೀಟ್, ಅಲೆಗ್ಝಾಂಡರಿ ಪ್ಯಾರಕೀಟ್, ಮಲಬಾರ್ ಪ್ಯಾರಾಕೀಟ್, ಕೆಂದಲೆ ಪ್ಯಾರಾಕೀಟ್ ಎಂದು ಕರೆಯಲ್ಪಡುತ್ತವೆ ಎಂದು ಹೇಳಿದರು.

ದಾವಣಗೆರೆ ರೈಲ್ವೆ ನಿಲ್ದಾಣ, ಮಹಾನಗರ ಪಾಲಿಕೆ ಆವರಣ, ಅಂಚೆಕಚೇರಿ ಸುತ್ತಮುತ್ತ, ಗಡಿಯಾರ ಕಂಬದ ಬಳಿ ಇರುವ ಮರಗಳೇ ಗಿಳಿಗಳ ವಾಸಸ್ಥಾನಗಳಾಗಿದ್ದು, ಇವುಗಳ ಆಯಸ್ಸು 20 ರಿಂದ 30 ವರ್ಷಗಳು ಮಾತ್ರ. ಪಕ್ಷಿಗಳ ಸಂಕುಲ ಉಳಿಸಲು ನಾವುಗಳು ಮರಗಳನ್ನು ಸಂರಕ್ಷಣೆ ಮಾಡಲೇ ಬೇಕಾಗಿದೆ ಎಂದರು.

ಪರಿಸರದ ಜೊತೆ ಹೊಂದಾಣಿಕೆ ಮಾಡಿಕೊಳ್ಳುವ ಪ್ರಭೇದಗಳು ಉಳಿದುಕೊಳ್ಳುತ್ತವೆ. ಗಿಳಿಗಳು ಪೊಟರೆಯಲ್ಲಿ ವಾಸಿಸುತ್ತವೆ. ಇವು ಗೂಡು ಕಟ್ಟುವುದಿಲ್ಲ ಎಂದು ಮಾಹಿತಿ ನೀಡಿದರು.

ಮನುಷ್ಯನ ದುರಾಸೆಗೆ ಪ್ರಾಣಿ-ಪಕ್ಷಿ ಸಂಕುಲ ವಿನಾಶದ ಅಂಚಿಗೆ ಹೋಗುವ ಆತಂಕ ವ್ಯಕ್ತಪಡಿಸಿದ ಅವರು, ಪರಿಸರ ಹಾಳು ಮಾಡದೇ ಪ್ರಾಣಿ-ಪಕ್ಷಿ ಸಂಕುಲವನ್ನು ಉಳಿಸಲು ನಾವುಗಳು ಮರಗಳನ್ನು ಕಡಿಯದೇ ರಕ್ಷಣೆ ಮಾಡುವ ಕೆಲಸವನ್ನು ಮಾಡಬೇಕಾಗಿದೆ. ಇದಕ್ಕೆ ಜಿಲ್ಲಾಡಳಿತ, ಅರಣ್ಯ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಪರಿಸರ ಪ್ರೇಮಿಗಳ ಸಹಕಾರ ಅತ್ಯಗತ್ಯ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಮಹಾನಗರ ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್ ಮಾತನಾಡಿ, ನಾವೆಲ್ಲರೂ ಪ್ರಾಣಿ, ಪಕ್ಷಿ ಪ್ರಿಯರೇ ಆಗಿದ್ದೇವೆ. ಉಳಿಸಿ, ಬೆಳೆಸುವ ಕೆಲಸವನ್ನು ಮಾಡೋಣ ಎಂದು ಹೇಳಿದರು.

ಮಾಜಿ ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ, ಇವತ್ತು ಭೂಮಿ ಇರುವಂತಹದ್ದು ಕೇವಲ ಮನುಷ್ಯನಿಗೆ ಮಾತ್ರವಲ್ಲ. ಸಾವಿರಾರು ಪ್ರಭೇದಗಳ ಪ್ರಾಣಿ, ಪಕ್ಷಿಗಳಿಗೂ ಸೇರಿದೆ. ಆದರೆ ನಾವುಗಳು ಅವುಗಳನ್ನು ಸಂರಕ್ಷಣೆ ಮಾಡದೇ, ಅನ್ಯಾಯ ಮಾಡುತ್ತಿದ್ದೇವೆ. ಮರಗಳನ್ನು ಕಡಿಯದೇ ಪಕ್ಷಿ ಸಂಕುಲವನ್ನು ರಕ್ಷಣೆ ಮಾಡಲು ಮತ್ತು ಅವುಗಳಿಗೆ ಆಹಾರ, ನೀರು ಒದಗಿಸುವ ಬಗ್ಗೆ ಪಾಲಿಕೆ ವತಿಯಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು.

ಜನತಾ ಬಜಾರ್ ಅಧ್ಯಕ್ಷ ಗುರುಸ್ವಾಮಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಎಸ್‌ಬಿಎಂ ನಿವೃತ್ತ ಅಧಿಕಾರಿ ಅಜಿತ್ ಕುಮಾರ್, ಹಿರಿಯ ಪತ್ರಕರ್ತ ಕೆ. ಚಂದ್ರಣ್ಣ ಮತ್ತಿತರರು ಉಪಸ್ಥಿತರಿದ್ದರು.

ಗಿಳಿವಿಂಡು ಬಳಗದ ರಾಜಶೇಖರ ಸಕ್ಕಟ್ಟು ನಿರೂಪಿಸಿದರು. ಎಂ.ಜಿ. ಶ್ರೀಕಾಂತ್ ಪ್ರಾಸ್ತಾವಿಕವಾಗಿ ಮಾತನಾಡಿದರು. ನಂತರ ಗಿಳಿಗಳ ವೀಕ್ಷಣೆ ಮಾಡಲಾಯಿತು.

# ಎಚ್.ಡಿ. ದೇವೇಗೌಡರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ'

ಬೆಂಗಳೂರು, ಜೂ. 7- ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿಷ್ಠಿತ ದತ್ತಿ ಪ್ರಶಸ್ತಿಗಳಲ್ಲಿ ಒಂದಾಗಿರುವ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ ಪ್ರಕಟವಾಗಿದೆ. ಮಾಜಿ ಪ್ರಧಾನಮಂತ್ರಿ ಹೆಚ್.ಡಿ.ದೇವೇಗೌಡ ಅವರು 2022ನೇ ಸಾಲಿನ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ದತ್ತಿಪ್ರಶಸ್ತಿಗೆ ಭಾಜನರಾಗಿರುತ್ತಾರೆ ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ. ಮಹೇಶ್ ಜೋಶಿ ತಿಳಿಸಿದ್ದಾರೆ.

ನಾಲ್ವಡಿಯವರು ನಾಡಿನ ಅಭ್ಯುದಯದ ಕನಸು ಕಂಡವರು. ಅವರ ಆಶಯದಂತೆ ನಾಡಿನಲ್ಲಿ ಕೈಗಾರಿಕಾ ಕ್ಷೇತ್ರ, ಕೃಷಿ, ನೀರಾವರಿ, ವಿದ್ಯುಚ್ಛಕ್ತಿ, ಹಿಂದುಳಿದ ವರ್ಗಗಳ ಕಲ್ಯಾಣ, ಸಾಮಾಜಿಕ ನ್ಯಾಯ, ಮಹಿಳಾ ಸಬಲೀಕರಣ, ಗ್ರಾಮ ನೈರ್ಮಲ್ಯೀಕರಣ, ವೈದ್ಯಕೀಯ ಕ್ಷೇತ್ರ, ನೀರಿನ ಸೌಕರ್ಯ, ಸಾರಿಗೆ ಸೌಲಭ್ಯ, ವ್ಯಾಪಾರ ಸೇರಿದಂತೆ ನಾಡಿನ ಸರ್ವತೋಮುಖ ಅಭಿವೃದ್ಧಿಯಲ್ಲಿ ಗಣನೀಯ ಸಾಧನೆ ಮಾಡಿರುವ ಗಣ್ಯರೊಬ್ಬರಿಗೆ ಪ್ರತಿ ವರ್ಷ ಪ್ರಸ್ತುತ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿಯನ್ನು ನೀಡಬೇಕು ಎನ್ನುವ ಮೂಲ ಆಶಯ ಈ ದತ್ತಿ ಪ್ರಶಸ್ತಿಯದ್ದಾಗಿದೆ. ಪ್ರಶಸ್ತಿಯು 51,000 (ಐವತ್ತೊಂದು ಸಾವಿರ) ರೂ. ನಗದು, ಸ್ಮರಣಿಕೆ, ಫಲ ತಾಂಬೂಲಗಳನ್ನು ಒಳಗೊಂಡಿರುತ್ತದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ. ಮಹೇಶ್ ಜೋಶಿ ತಿಳಿಸಿದ್ದಾರೆ.



ಇದುವರೆಗೂ ನಾಡಿನ 12 ಜನ ಗಣ್ಯರಿಗೆ ಪರಿಷತ್ತಿನ ಪ್ರತಿಷ್ಠಿತ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಈ ಬಾರಿಯ ಆಯ್ಕೆ ಸಮಿತಿಯು ಮಾಜಿ ಪ್ರಧಾನಿಯಾಗಿದ್ದ ಎಚ್.ಡಿ.ದೇವೇಗೌಡ ಅವರಿಗೆ ಈ 2022ನೆಯ ಸಾಲಿನ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿಗಾಗಿ ಆಯ್ಕೆ ಮಾಡಿದೆ. ನಾಡಿನ ನೀರಾವರಿ ಕ್ಷೇತ್ರ, ಕೃಷಿ ಕ್ಷೇತ್ರ, ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ ಸೇರಿದಂತೆ ಸಮಗ್ರ ಕನ್ನಡ ನಾಡಿನ ಸರ್ವತೋಮುಖ ಅಭಿವೃದ್ಧಿಗಾಗಿ ಸಂಪೂರ್ಣವಾಗಿ ತಮ್ಮನ್ನು ತಾವು ತೊಡಗಿಸಿಕೊಂಡು, ರಾಜ್ಯದಲ್ಲಿ ರೈತನ ಮಗನಾಗಿ, ಸಿವಿಲ್ ಇಂಜಿನಿಯರ್ ಆಗಿದ್ದು, ರಾಜಕೀಯದಲ್ಲಿ ಸಂಪೂರ್ಣ ತಮ್ಮನ್ನು ತಾವು ತೊಡಗಿಸಿಕೊಂಡು, ತಮಗೆ ದಕ್ಕಿದ ವಿವಿಧ ಸ್ಥಾನಮಾನಗಳಿಗೆ ಸೂಕ್ತವಾದ ನ್ಯಾಯವನ್ನು ನೀಡಿ, ಮುಖ್ಯಮಂತ್ರಿ ಪಟ್ಟದಿಂದ ದೇಶದ ಉನ್ನತ ಸ್ಥಾನವಾಗಿರುವ ಪ್ರಧಾನಿ ಪಟ್ಟಕ್ಕೆ ಏರಿದ ಮೊದಲ ಕನ್ನಡಿಗರು ಎಚ್.ಡಿ. ದೇವೇಗೌಡ ಅವರು. ಸಮಗ್ರ ಕನ್ನಡ ನಾಡಿನ ಅಭಿವೃದ್ಧಿಯ ಕನಸು ಕಂಡ ಅವರು ಬಡ ರೈತರು, ಸೌಲಭ್ಯ ವಂಚಿತರು ಹಾಗೂ ಸಮಾಜದ ದುರ್ಬಲ ವರ್ಗಗಳ ಒಳಿತಿಗಾಗಿ ಹೋರಾಟ ಮಾಡುತ್ತಲೇ ಬಂದವರು. ಈ ಎಲ್ಲಾ ಹಿನ್ನೆಲೆಯಲ್ಲಿ ಎಚ್.ಡಿ. ದೇವೇಗೌಡ ಅವರನ್ನು ಆಯ್ಕೆ ಸಮಿತಿ 2022ನೇ ಸಾಲಿನ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿಗೆ ಆಯ್ಕೆ ಮಾಡಿದೆ ಎಂದು ಮಹೇಶ್ ಜೋಶಿ ಹೇಳಿದ್ದಾರೆ

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ನಾಡಿನ ಮುಖ್ಯಮಂತ್ರಿ ಸ್ಥಾನದಲ್ಲಿ ಇರುವಾಗ ಕನ್ನಡ ಸಾಹಿತ್ಯ ಪರಿಷತ್ತಿಗೂ ಅಪಾರ ಕೊಡುಗೆಗಳನ್ನು ನೀಡಿದ್ದರು. ಪರಿಷತ್ತಿನ ಇತಿಹಾಸದಲ್ಲಿ ಮೊದಲ ಬಾರಿಗೆ ಇಲ್ಲಿನ ಸಿಬ್ಬಂದಿಗಳನ್ನು ಖಾಯಂಮಾತಿ ಮಾಡಿದ್ದರು. ಇದರೊಂದಿಗೆ ಪರಿಷತ್ತಿಗೆ ಸರ್ಕಾರ ಖಾಯಂ ಅನುದಾನ ನೀಡಬೇಕು ಎನ್ನುವ ಸರ್ಕಾರಿ ಆದೇಶವನ್ನೂ ಹೊರಡಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಬಗ್ಗೆ ಕಾಳಜಿ ಹೊಂದಿದ್ದ ಅವರು ಕಾಲ ಕಾಲಕ್ಕೆ ಪರಿಷತ್ತಿಗೆ ತಮ್ಮ ಸಲಹೆ, ಸೂಚನೆಗಳನ್ನು ನೀಡುವುದರ ಜೊತೆ ಪರಿಷತ್ತಿನ ಇತ್ತೀಚಿನ ಬೆಳವಣಿಗೆಗೆ ಮೆಚ್ಚುಗೆ ವ್ಯಕ್ತ ಪಡಿಸಿದ್ದರು. 2022ನೇ ಸಾಲಿನ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿಗಾಗಿ ಅವರನ್ನು ಆಯ್ಕೆ ಮಾಡಿರುವ ಸಂಗತಿಯನ್ನು ಅವರ ನಿವಾಸಕ್ಕೆ ತೆರಳಿ ತಿಳಿಸಿ, ಪ್ರಶಸ್ತಿ ಸ್ವೀಕರಿಸುವಂತೆ ಮನವಿ ಮಾಡಿದಾಗ, ತುಂಬು ಮನಸ್ಸಿನಿಂದ ದೇವೇಗೌಡರು ಒಪ್ಪಿಕೊಂಡು ಪ್ರಶಸ್ತಿಗಾಗಿ ಸಂತಸ ವ್ಯಕ್ತಪಡಿಸಿದ್ದಾರೆ ಎಂದು ಮಹೇಶ ಜೋಶಿ ತಿಳಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ. ಮಹೇಶ ಜೋಶಿ ಅವರ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿಯಲ್ಲಿ ಇತಿಹಾಸ ತಜ್ಞ ಹಾಗೂ ಸಂಶೋಧಕ ಡಾ. ತಲಕಾಡು ಚಿಕ್ಕರಂಗೇಗೌಡ, ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿಗಳಾದ ನೇ.ಭ. ರಾಮಲಿಂಗ ಶೆಟ್ಟಿ, ಡಾ. ಪದ್ಮಿನಿ ನಾಗರಾಜು ಹಾಗೂ ಗೌರವ ಕೋಶಾಧ್ಯಕ್ಷ ಡಾ. ಬಿ.ಎಂ. ಪಟೇಲ್ ಪಾಂಡು ಅವರು ಉಪಸ್ಥಿತರಿದ್ದರು.

# ಜಿಎಸ್ಟಿ, ತೆರಿಗೆದಾರರಿಗೆ ಗ್ಯಾರಂಟಿ ಕಟ್

**(1ನೇ ಪುಟದಿಂದ)** ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜನರ ಮನಸ್ಸಿನಲ್ಲಿ ಕೆಲವು ಗೊಂದಲಗಳಿವೆ. ಆ ಗೊಂದಲವನ್ನು ಸರಿಪಡಿಸುತ್ತೇವೆ. ಎಲ್ಲಾ ಅರ್ಹರಿಗೂ ನಮ್ಮ ಭರವಸೆಗಳು ದೊರೆಯುತ್ತವೆ ಎಂದು ಶಿವಕುಮಾರ್ ಹೇಳಿದರು.

ಬಿಜೆಪಿ, ಜನತಾ ದಳದವರಿಗೆ ಈ ಯೋಜನೆ ಜಾರಿ ಸಹಿಸಿಕೊಳ್ಳಲಾಗುತ್ತಿಲ್ಲ. ಅವರ ಅಸೂಯೆಗೆ ಮದ್ದಿಲ್ಲ. ಅದರಲ್ಲೂ ಬಿಜೆಪಿಯವರು ತಮ್ಮ ಆಡಳಿತದಲ್ಲಿ ನೀಡಿದ ಭರವಸೆ ಈಡೇರಿಸಲಾಗದೆ, ಇದೀಗ ಸಾರ್ವಜನಿಕವಾಗಿ ಜನರಲ್ಲಿ ಗೊಂದಲ ಸೃಷ್ಟಿಸುವ ಕೆಲಸ ಮಾಡುತ್ತಿದ್ದಾರೆ ಎಂದವರು ಆರೋಪಿಸಿದರು.

ಸರ್ಕಾರದಿಂದ ಯಾರಿಗೆ ಒಂದು ರೂಪಾಯಿ ಹಣ ಕೊಟ್ಟರೂ ಅದಕ್ಕೆ ಲೆಕ್ಕ, ಹೊಣೆಗಾರಿಕೆ ಇರಬೇಕು. ಫಲಾನುಭವಿ ಆಗುವವರು ಮತದಾರರ ಗುರುತಿನ ಚೀಟಿ, ಬ್ಯಾಂಕ್ ಖಾತೆ, ಆಧಾರ್ ಕಾರ್ಡ್ ಹೊಂದಿರಬೇಕು. ಬೇರೆಯವರ ಬ್ಯಾಂಕ್ ಖಾತೆಗೆ ಹಣ ನೀಡಲಾಗುವುದಿಲ್ಲ.

ಮನೆ ಯಜಮಾನಿ ಯಾರು ಎಂದು ಮನೆಯವರೇ ತೀರ್ಮಾನ ಮಾಡಬೇಕು. ಅವರ ಮನೆ ವಿಚಾರದಲ್ಲಿ ನಾವು ಹಸ್ತಕ್ಷೇಪ ಮಾಡುವುದಿಲ್ಲ. ಮತದಾರರ ಗುರುತಿನ ಚೀಟಿ, ಎಪಿಎಲ್, ಬಿಪಿಎಲ್ ಕಾರ್ಡ್‌ಗಳಲ್ಲಿ ಯಾವ ಮನೆಯಲ್ಲಿ ಯಾರೆಲ್ಲಾ ಇದ್ದಾರೆ ಎಂದು ಮಾಹಿತಿ ಇದೆ ಎಂದು ಹೇಳಿದರು. ವಿದ್ಯುತ್ ಗ್ಯಾರಂಟಿ ವಿಚಾರದಲ್ಲಿ ಬಾಡಿಗೆ ಮನೆಯವರ ಬಗ್ಗೆ ಅಧಿಕಾರಿಗಳು ಒಂದು ಆಯಾಮ ನೀಡಿದ್ದರು. ಆದರೆ ನಾವು ಆ ಬಗ್ಗೆ ಸ್ಪಷ್ಟನೆ ನೀಡಿದ್ದೇವೆ ಎಂದೂ ಅವರು ಹೇಳಿದರು.

# ದೊಡ್ಡಬಾತಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಕೆ.ಜಿ. ಉಮೇಶ್

**(1ನೇ ಪುಟದಿಂದ) ರಾಜಕೀಯ ಮನೆತನದ ಉಮೇಶ್ :** ಸಾಮಾಜಿಕ ಸೇವಾ ಕಾರ್ಯಕರ್ತರಾದ ಕೆ.ಜಿ. ಉಮೇಶ್ ಮೂಲತಃ ರಾಜಕೀಯ ಮನೆತನದಿಂದ ಬಂದವರು. ಮಾಜಿ ಗೃಹ ಸಚಿವ ದಿ.ಹೆಚ್. ಸಿದ್ದವೀರಪ್ಪ ಅವರ ಮೊಮ್ಮಗ, ಎಪಿಎಂಸಿ ಮಾಜಿ ಛೇರ್ಮನ್ ಬಾತಿ ಕೆ.ಜಿ. ಚಂದ್ರಪ್ಪ ಅವರ ಪುತ್ರ, ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಸಮೀಪ ಸಂಬಂಧಿಗಳಾಗಿದ್ದಾರೆ. ಹಳೇಬಾತಿ ಗ್ರಾಮದ ಅಳಿಯಂದಿರಾದ ಉಮೇಶ್, ಶಿಕ್ಷಣ ತಜ್ಞ ಪ್ರೊ. ಬಾತಿ ಬಸವರಾಜ್ ಅವರ ಮಾರ್ಗದರ್ಶನದಲ್ಲಿ ಬೆಳೆದ ಗ್ರಾಮೀಣ ಪ್ರತಿಭೆ.

ಕೆ.ಜಿ. ಉಮೇಶ್ ತಾಲ್ಲೂಕು ಪಂಚಾಯ್ತಿ ಸದಸ್ಯರಾಗಿ, ಗ್ರಾಮ ಪಂಚಾಯ್ತಿ ಸದಸ್ಯರಾಗಿ ಇದೀಗ ಅಧ್ಯಕ್ಷರಾಗಿದ್ದಾರೆ. ಅವರ ಧರ್ಮಪತ್ನಿ ಶ್ರೀಮತಿ ಮಮತಾ ಉಮೇಶ್ ಅವರು ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

**ಡಬಲ್ ಧಮಾಕ :** ಕೆ.ಜಿ. ಉಮೇಶ್ ಅವರು 60ನೇ ವಸಂತಕ್ಕೆ ಪಾದಾರ್ಪಣೆ ಮಾಡಿದ ದಿನದಂದೇ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ಕಾಕತಾಳೀಯ ಎಂಬಂತೆ ಡಬಲ್ ಧಮಾಕದ ಸಂಭ್ರಮದಲ್ಲಿದ್ದಾರೆ.

ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಕೆ.ಜಿ. ಉಮೇಶ್ ಅವರನ್ನು ನೀಲಾನಹಳ್ಳಿಯ ಹಿರಿಯ ಮುಖಂಡರೂ, ನ್ಯಾಯವಾದಿಯೂ ಆಗಿರುವ ಎನ್.ಎಂ. ಆಂಜನೇಯ ಗುರೂಜಿ ಅಭಿನಂದಿಸಿದ್ದಾರೆ.

# ಪಂಚಮಸಾಲಿ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ದಾವಣಗೆರೆ, ಜೂ. 7-ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ದಾವಣಗೆರೆ ಜಿಲ್ಲಾ ಘಟಕದ ವತಿಯಿಂದ 2023ನೇ ಸಾಲಿನಲ್ಲಿ ನಡೆದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿ.ಯು.ಸಿ. ಯಲ್ಲಿ ಅತಿ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾದ ದಾವಣಗೆರೆ ಜಿಲ್ಲೆಯ ಪಂಚಮಸಾಲಿ ಸಮಾಜದ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಂದ 'ಸ್ವಾಭಿಮಾನ ಪ್ರತಿಭಾ ಪುರಸ್ಕಾರ'ಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಶೇ.90 ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿಗಳು ದಾವಣಗೆರೆ ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಕಛೇರಿ ಯಲ್ಲಿ ಅಥವಾ ಸಮಾಜದ ಅಂತರ್ಜಾಲವಾದ ವೆಬ್‌ಸೈಟ್ www.panchamasali.org ನಲ್ಲಿ ಅರ್ಜಿ ಪಡೆದು, ಅರ್ಜಿಯಲ್ಲಿ ಕೇಳಿರುವ ಅಗತ್ಯ ಮಾಹಿತಿಗಳೊಂದಿಗೆ ಮೇಲ್ಕಂಡ ಕಛೇರಿಗಳಿಗೆ ಇದೇ ದಿನಾಂಕ 25 ರೊಳಗಾಗಿ ಸಲ್ಲಿಸಬೇಕು. ಮಾಹಿತಿಗಾಗಿ ದೂರವಾಣಿ (08192) 222008 ಸಂಪರ್ಕಿಸಬಹುದು.

# ಬೆಂಗಳೂರು-ದಾವಣಗೆರೆಗಳಲ್ಲಿ ಇ.ಡಿ. ದಾಳಿ

**(1ನೇ ಪುಟದಿಂದ)** ಆಫ್ ಇಂಡಿಯಾದ ಬೆಂಗಳೂರು ನಗರ ಶಾಖೆಯಿಂದ ಸಾಲ ಪಡೆದಿತ್ತು. ಸಾಲ ಮರು ಪಾವತಿಯಾಗದೇ 17.01.2017 ರಂದು ಸಾಲವನ್ನು ನಿಷ್ಕ್ರಿಯ ಆಸ್ತಿ ಎಂದು ಪ್ರಕಟಿಸಲಾಗಿತ್ತು. ಆಗ ಸಾಲ ಬಾಕಿ 113.38 ಕೋಟಿ ರೂ. ಆಗಿತ್ತು. ನಂತರ ಜಾರಿ ನಿರ್ದೇಶನಾ ಲಯವು ತನಿಖೆ ನಡೆಸಿದಾಗ, ನಕಲಿ ದಾಖಲೆಗಳನ್ನು ಸೃಷ್ಟಿಸಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ ಸಾಲ ಪಡೆದಿರುವುದು ಪತ್ತೆಯಾಗಿತ್ತು. ತನಿಖೆ ಮುಂದುವರೆಸಿದಾಗ ಹತ್ತು ಎಲ್.ಸಿ.ಗಳನ್ನು ಬಳಸಿ 101.18 ಕೋಟಿ ರೂ.ಗಳನ್ನು ಅಕ್ರಮವಾಗಿ ಪಡೆದಿರುವುದು ಪತ್ತೆಯಾಗಿತ್ತು. ಈ ಪ್ರಕರಣದಲ್ಲಿ ಆರಾಧ್ಯ ವೈರ್ ರೋಪ್ಸ್ ಪ್ರೈ, ಕಂಪನಿ ಹಾಗೂ ಕೆಲ ಸರಕು ಸಾಗಣೆದಾರರೂ ಭಾಗಿಯಾಗಿರುವುದು ಕಂಡು ಬಂದಿತ್ತು.

ಕೆಲ ಪ್ರಕರಣಗಳಲ್ಲಿ ಸಾಗಣೆ ಗುತ್ತಿಗೆದಾರರು ಹಾಗೂ ಏಜೆಂಟರುಗಳಿಗೆ ಹಣ ನೀಡಲಾಗಿತ್ತು. ಇವರು ಸರಕು ಸಾಗಣೆ ಮಾಡದೇ ಇದ್ದರೂ ಸಹ, ಸರಕು ರವಾನಿಸಿರುವುದಾಗಿ ನಕಲಿ ದಾಖಲೆ ಹಾಗೂ ಇನ್ವಾಯ್ಸ್‌ಗಳನ್ನು ಸೃಷ್ಟಿಸಿದ್ದರು. ಶೋಧ ಕಾರ್ಯದ ವೇಳೆ ಸುಮಾರು 100 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿ ಪತ್ತೆ ಮಾಡಲಾಗಿದೆ ಹಾಗೂ 14.5 ಲಕ್ಷ ರೂ.ಗಳ ನಗದನ್ನು ವಶಪಡಿಸಿಕೊಳ್ಳಲಾಗಿದೆ. ಅಕ್ರಮ ಹಣ ಪ್ರಕರಣದಡಿ ತನಿಖೆ ಮುಂದುವರೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಪ್ಲಾಸ್ಟಿಕ್ ಮುಕ್ತ ಪರಿಸರ ಅವಶ್ಯ

## ವಿಶ್ವಚೇತನ ವಿದ್ಯಾನಿಕೇತನ ಶಾಲೆಯಲ್ಲಿ ಪರಿಸರ ದಿನಾಚರಣೆ



ದಾವಣಗೆರೆ, ಜೂ. 7- ಪರಿಸರ ನಮಗೆ ದೇವರು ಕೊಟ್ಟ ವರ.ಅದನ್ನು ಕಾಪಾಡುವುದು ಪ್ರತಿಯೊಬ್ಬ ನಾಗರಿಕರ ಕರ್ತವ್ಯ. ಪ್ಲಾಸ್ಟಿಕ್ ಮುಕ್ತ ಪರಿಸರವನ್ನು ಮಾಡಬೇಕಾದ ಅಗತ್ಯವಿದೆ ಎಂದು ಶ್ರೀನಿವಾಸಮೂರ್ತಿ ಹೇಳಿದರು.

ನಗರದ ಚೇತನ ವಿದ್ಯಾಸಂಸ್ಥೆಯ ವಿಶ್ವಚೇತನ ವಿದ್ಯಾನಿಕೇತನ ವಸತಿಯುತ ಶಾಲೆಯಲ್ಲಿ ಪ್ಲಾಸ್ಟಿಕ್ ಮುಕ್ತ ಧ್ಯೇಯ ವಾಕ್ಯದಡಿಯಲ್ಲಿ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ಲಾಸ್ಟಿಕ್ ವಿಲೇವಾರಿ ಒಂದು ಜಾಗತಿಕ ಸಮಸ್ಯೆಯಾಗಿ ಬೆಳೆದು ನಿಂತಿದೆ. ಇದು ಜೀವ ವೈವಿಧ್ಯತೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಆದ್ದರಿಂದ ನಾವುಗಳು ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಬೇಕು. ತ್ಯಾಜ್ಯ ವಸ್ತುಗಳ ಮರುಬಳಕೆ ಮಾಡಬೇಕು. ಈ ನಿಟ್ಟಿನಲ್ಲಿ ಎಲ್ಲರಿಗೂ ಜಾಗೃತಿ ಮೂಡಿಸಬೇಕೆಂದು ಕರೆ ನೀಡಿದರು.

ಸಂಸ್ಥೆಯ ಸಂಸ್ಥಾಪಕರಾದ ವಿಜಯಲಕ್ಷ್ಮಿ ವೀರಮಾಚಿನೇನಿ ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ನಮ್ಮನ್ನು ರಕ್ಷಿಸುವ ತಾಯಿ ಪರಿಸರ, ಆ ತಾಯಿಯನ್ನು ಮಲಿನವಾಗದಂತೆ ಸಂರಕ್ಷಿಸುವುದು ನಮ್ಮೆಲ್ಲರ ಹೊಣೆ ಎಂದು ತಮ್ಮ ಇಂಗಿತ ವ್ಯಕ್ತಪಡಿಸಿದರು.

ಶಿಕ್ಷಕಿ ಬನಶಂಕರಿ ಮಾತನಾಡಿ, ಪರಿಸರ ದಿನಾಚರಣೆ ಕೇವಲ ಆಚರಣೆಗೆ ಸೀಮಿತವಾಗದೇ, ನಮ್ಮ ನಿತ್ಯ ಜೀವನದಲ್ಲಿ ಸ್ವಚ್ಛತೆಯನ್ನು ಅಳವಡಿಸಿಕೊಂಡು, ಸ್ವಚ್ಛ ಪರಿಸರವನ್ನು ಕಾಯ್ದುಕೊಂಡು, ಪ್ರತಿದಿನ ಪರಿಸರ ದಿನಾಚರಣೆಯಾಗಲಿ ಎಂದು ಆಶಿಸಿದರು.

ಶಾಲಾ ವಿದ್ಯಾರ್ಥಿಗಳಾದ ಶ್ರೇಯಾ, ಹರ್ಷಿಣಿ, ಜಾನ್ವಿ, ಜೈನಿಲ್, ಸೌರಭ್ ಮಾತನಾಡಿ, ಪ್ರಕೃತಿ ನಮ್ಮ ತಾಯಿ ಅದನ್ನು ಕಾಪಾಡಬೇಕು, ಭಿತ್ತಿಚಿತ್ರ ಹಾಗೂ ಬೀದಿ ನಾಟಕಗಳ ಮೂಲಕ ಪರಿಸರದ ಅರಿವನ್ನು ಮೂಡಿಸಬೇಕೆಂದರು.

ಚಂದನ ಮತ್ತು ತಂಡದವರಿಂದ 'ತಿಳಿಯೋ ಮಾನವ ಜಗವೇ ಪ್ರಕೃತಿ' ಎಂಬ ಗೀತೆಯನ್ನು ಹಾಡಿ ಪರಿಸರ ಜಾಗೃತಿಯನ್ನು ಮೂಡಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ವಿನೋದ್, ಶಾಲಾ ಪ್ರಾಂಶುಪಾಲ ಬಸವರಾಜಯ್ಯ, ಉಪ ಪ್ರಾಂಶುಪಾಲರಾದ ಯುವರಾಜ್, ರೇವಣಸಿದ್ದಪ್ಪ ಹಾಗೂ ಶಾಲಾ ಸಿಬ್ಬಂದಿಯವರು ಉಪಸ್ಥಿತರಿದ್ದರು.

ಇಂಗ್ಲಿಷ್ ಶಿಕ್ಷಕ ಪ್ರಶಾಂತ್ ಸ್ವಾಗತಿಸಿದರು. ವಿನಾಯಕ್ ಕೆ.ಬಿ. ನಿರೂಪಿಸಿದರು. ಶಿಕ್ಷಕಿ ಶ್ರೀಮತಿ ಸೌಭಾಗ್ಯ ವಂದಿಸಿದರು.

# ಜೂನ್‌ನಲ್ಲಿ ಕರೆಂಟ್ ಶಾಕ್

**(1ನೇ ಪುಟದಿಂದ)** ಬೆಸ್ಕಾಂ ಅಧಿಕಾರಿಗಳು, ಹೊಸ ಬಿಲ್ ಅನ್ವಯ, ಮೊದಲ 100 ಯೂನಿಟ್‌ಗಳಿಗೆ 4.75 ರೂ. ದರ ಇದೆ. ಅದಕ್ಕೂ ಹೆಚ್ಚಿನ ವಿದ್ಯುತ್ ಬಳಸಿದರೆ, ಎಲ್ಲಾ ಯುನಿಟ್‌ಗಳಿಗೂ ತಲಾ 7 ರೂ. ದರ ವಿಧಿಸಲಾಗುವುದು ಎಂದಿದ್ದಾರೆ.

ಒಂದು ವೇಳೆ ತಾಂತ್ರಿಕ ದೋಷದಿಂದ ಏನಾದರೂ ಬಿಲ್‌ನಲ್ಲಿ ವ್ಯತ್ಯಾಸವಾಗಿದ್ದರೆ ಗ್ರಾಹಕರು ಸಂಬಂಧಿಸಿದ ಬೆಸ್ಕಾಂ ಉಪ ವಿಭಾಗಕ್ಕೆ ಸಂಪರ್ಕಿಸಿದರೆ ಸಮಸ್ಯೆ ಬಗೆಹರಿಸಿಕೊಡಲಾಗುವುದು ಎಂದೂ ಅಧಿಕಾರಿಗಳು ಹೇಳಿದ್ದಾರೆ.

ಮೂರು ತಿಂಗಳಲ್ಲಿ ವಿದ್ಯುತ್ ಬಾಕಿ ವಸೂಲಿ ಮಾಡುವಂತೆ ಸರ್ಕಾರದಿಂದ ಸೂಚನೆ ಬಂದಿರುವುದು ಜನರ ಹಾಗೂ ಬಿಲ್ ವಸೂಲಿ ಸಿಬ್ಬಂದಿಯ ಟೆನ್ಷನ್ ಮತ್ತಷ್ಟು ಹೆಚ್ಚಾಗುವಂತೆ ಮಾಡಿದೆ.

ಅತ್ತ ಗೃಹ ಜ್ಯೋತಿ ಯೋಜನೆಗೆ ಸಂಬಂಧಿಸಿದಂತೆ ಅಧಿಕಾರಸ್ಥರು ದಿನಕ್ಕೊಂದು ಹೇಳಿಕೆ ನೀಡುತ್ತಿದ್ದರೆ, ಇತ್ತ ಬಿಲ್ ಏರುಪೇರಾಗಿ ಜನ ಗೊಂದಲಕ್ಕೀಡಾಗುವಂತಾಗಿದೆ.

ರಿ.ಸಂ. : ಎಸ್.ಆರ್. 26/1982

**ಶ್ರೀ ಲಿಂಗೇಶ್ವರ ವಿದ್ಯಾಸಂಸ್ಥೆ (ರಿ.)**
**ತೋಳಹುಣಸೆ, ದಾವಣಗೆರೆ ತಾ||, ಜಿ||.**

**'ವಿಶೇಷ ಶಾಲಾ ದಾಖಲಾತಿ ಪ್ರಕಟಣೆ'**

**ಶ್ರೀ ಲಿಂಗೇಶ್ವರ ವಿದ್ಯಾಸಂಸ್ಥೆ (ರಿ.) ತೋಳಹುಣಸೆ, ದಾವಣಗೆರೆ ತಾಲ್ಲೂಕು ದಾವಣಗೆರೆ ಜಿಲ್ಲೆ ಈ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ಲಿಂಗೇಶ್ವರ ಪ್ರೌಢಶಾಲೆ (ಅನುದಾನಿತ) ಈ ಶಾಲೆಯಲ್ಲಿ 2023-24ನೇ ಶೈಕ್ಷಣಿಕ ವರ್ಷದ ದಾಖಲಾತಿಗೆ ಅಭಿಲಾಷೆ ಇರುವ ವಿದ್ಯಾರ್ಥಿಗಳು 8, 9 ಮತ್ತು 10ನೇ ತರಗತಿಗೆ ದಾಖಲಾತಿಗೆ ಅವಶ್ಯಕತೆ ಇರುತ್ತದೆ. ವಿದ್ಯಾರ್ಥಿಗಳಿಗೆ ಊಟ, ವಸತಿಯ ಉಚಿತ ಸೌಲಭ್ಯ ಇರುತ್ತದೆ. ಮೊದಲು ಬಂದ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು. SC, ST ವಿದ್ಯಾರ್ಥಿಗಳಿಗೂ ಆದ್ಯತೆ. ಶಾಲೆ ಉತ್ತಮ ಬೋಧನೆ, ಸುಸಜ್ಜಿತ ಕಟ್ಟಡ, ಉತ್ತಮ ಪರಿಸರ ಹೊಂದಿರುತ್ತದೆ.**

**ಸರ್ಕಾರದ ಸುತ್ತೋಲೆ ಅನುಮತಿಯಂತೆ, 2015ಕ್ಕಿಂತ ಮುಂಚಿತವಾಗಿ ನಿವೃತ್ತಿ ಹೊಂದಿದ ಈ ಕೆಳಕಂಡ ಹುದ್ದೆಗಳಿಗೆ ಹುದ್ದೆಗಳ ವಿದ್ಯಾರ್ಹತೆ ಅನುಸಾರ ಶಿಕ್ಷಕರು ಬೇಕಾಗಿರುತ್ತಾರೆ.**

| | | | | |
|---|---|---|---|---|
| 1 | ಕನ್ನಡ | BA, B.Ed. | ಕನ್ನಡ | ಐಚ್ಛಿಕ ವಿಷಯ |
| 2 | ಇಂಗ್ಲಿಷ್ | BA, B.Ed. | ಇಂಗ್ಲಿಷ್ | ---"--- |
| 3 | ಹಿಂದಿ | BA, B.Ed. | ಹಿಂದಿ | ---"--- |
| 4 | ಸಮಾಜ | BA, B.Ed. | ಸಮಾಜ | ---"--- |
| 5 | ಗಣಿತ | B.Sc., B.Ed. | ಗಣಿತ | ---"--- |
| 6 | ವಿಜ್ಞಾನ | B.Sc., B.Ed. CBZ | ವಿಜ್ಞಾನ | ---"--- |

ಸಂಪರ್ಕಿಸಬೇಕಾದ ಫೋನ್ ಸಂಖ್ಯೆ :
**63638 27225, 99450 80696**

ಸಹಿ/- ಕಾರ್ಯದರ್ಶಿ
ಶ್ರೀ ಲಿಂಗೇಶ್ವರ ವಿದ್ಯಾಸಂಸ್ಥೆ (ರಿ.)
ತೋಳಹುಣಸೆ, ದಾವಣಗೆರೆ ಜಿಲ್ಲೆ.

ತಾಲ್ಲೂಕು ಪಂಚಾಯತ್, ಹೊನ್ನಾಳಿ
**ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹೊನ್ನಾಳಿ.**
(ದಾವಣಗೆರೆ ಜಿಲ್ಲೆ)
E-mail:bcm.hon@gmail.com, ದೂ. ಸಂಖ್ಯೆ: 08188251053

ಸಂ. ತಾ.ಹಿಂ.ವ.ಕ.ಇ.ಹೊ/ವಾಹನ ಬಾಡಿಗೆ/ಸಿಆರ್–1/2023–24
ದಿನಾಂಕ: 31.05.2023

**ಟೆಂಡರ್ ಪ್ರಕಟಣೆ**

ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹೊನ್ನಾಳಿ ಇವರು ಅಭಿವೃದ್ಧಿ ಕಾರ್ಯಕ್ರಮಗಳ ಮೇಲ್ವಿಚಾರಣೆ ಮಾಡುವುದು, ಸಿಂಧುತ್ವ ಪರಿಶೀಲನೆಗೆ ಸ್ಥಳ ಪರಿಶೀಲನೆ ಮಾಡುವುದು, ಸರ್ಕಾರದ ಅನುದಾನದ ಬಳಕೆ, ವಿದ್ಯಾರ್ಥಿನಿಲಯಗಳ ಆಹಾರ ಪದಾರ್ಥ, ವಿದ್ಯಾರ್ಥಿಗಳ ಹಾಜರಾತಿಯನ್ನು ಆಗಿಂದಾಗ್ಗೆ ಪರಿಶೀಲನೆ ಮಾಡುವ ಅತ್ಯಗತ್ಯವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿರುವುದರಿಂದ 2023–24 ಸಾಲಿಗೆ ಅಧಿಕೃತ ಸರ್ಕಾರಿ ಕರ್ತವ್ಯಕ್ಕಾಗಿ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನವನ್ನು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–2000ರ ಪ್ರಕಾರ ಸ್ವಿಫ್ಟ್ ಡಿಸೈರ್ ಕಾರು, ಈಟಿಯೋಸ್ ಕಾರು ಅಥವಾ ಅದರ ಸಮಾನಾಂತರದ ವಾಹವನ್ನು ಬಾಡಿಗೆ ರೂಪದಲ್ಲಿ ಪೂರೈಸುವ ಅರ್ಹ ಪೂರೈಕೆದಾರರಿಂದ ದ್ವಿ–ಲಕೋಟೆ (Two Cover System) ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

(1) ಟೆಂಡರ್ ಪ್ರಕಟಣೆ ಹೊರಡಿಸಿದ ದಿನಾಂಕ: 31.05.2023. (2) ಟೆಂಡರ್ ಅರ್ಜಿ ವಿತರಿಸುವ ಸ್ಥಳ ಈ ಮೇಲ್ಕಂಡ ಕಛೇರಿಯಲ್ಲಿ ದಿನಾಂಕ: 31.05.2023 ರಿಂದ 15.06.2023 ಮಧ್ಯಾಹ್ನ 12.00 ರವರೆಗೆ (ಸರ್ಕಾರಿ ರಜೆ ಹೊರತುಪಡಿಸಿ) (3) ಟೆಂಡರ್ ಬಗ್ಗೆ ವಿಚಾರಣೆ/ಸ್ಪಷ್ಟೀಕರಣ ಕೇಳುವ ಅಂತಿಮ ದಿನಾಂಕ: 15.06.2023 ಮಧ್ಯಾಹ್ನ 12.00ವರೆಗೆ. (4) ಟೆಂಡರ್ ಅರ್ಜಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: 15.06.2023 ಮಧ್ಯಾಹ್ನ 1.00 ಗಂಟೆವರೆಗೆ. (5) ಟೆಂಡರ್ ತೆರೆಯುವ ದಿನಾಂಕ: 15.06.2023 ಮಧ್ಯಾಹ್ನ 3.00 ಗಂಟೆ. (6) ಟೆಂಡರ್ ಫಾರಂ ಅರ್ಜಿ ಶುಲ್ಕ ರೂ. 300.00 ಮಾತ್ರ. (7) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ. 4.20 ಲಕ್ಷ. (8) ಇಎಂಡಿ ಮೊತ್ತ ರೂ. 5000=00 (9) ಟೆಂಡರ್ ಲಕೋಟೆ ಮೇಲೆ ನಮೂದಿಸಬೇಕಾದ ವಿಳಾಸ ಮತ್ತು ಟೆಂಡರ್ ತೆರೆಯುವ ಸ್ಥಳ:– ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬಿ.ಎಸ್.ಎನ್.ಎಲ್. ಕಛೇರಿ ಮುಂಭಾಗ, ಹೊನ್ನಾಳಿ ದೂ.ಸಂಖ್ಯೆ: 08188–251053 ಷರತ್ತು ಹಾಗೂ ಮತ್ತಿತರ ಮಾಹಿತಿಗಾಗಿ ಈ ಮೇಲ್ಕಂಡ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ವಾಸಾಇ/ಡಿವಿಜಿ/53 /ಕೆಎಸ್‌ಎಂಸಿಎ/2023–24

ಸಹಿ/–ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಹೊನ್ನಾಳಿ,

# ರಾಣೇಬೆನ್ನೂರು : ಇತಿಹಾಸವನ್ನು ಮೆಲಕು ಹಾಕಿದ ಕೋಳಿವಾಡ

ರಾಣೇಬೆನ್ನೂರು, ಜೂ.7- 1969 ರಲ್ಲಿ ಕಾಂಗ್ರೆಸ್ ಒಡೆದು, ನಿಜಲಿಂಗಪ್ಪ, ಸಂಜೀವ ರೆಡ್ಡಿ ಸೇರಿದಂತೆ ದೇಶದ ಎಲ್ಲ ಘಟಾನುಘಟಿಗಳದ್ದು ಸಿಂಡಿಕೇಟಾಯಿತು, ಧೃತಿಗೆಡದ ಇಂದಿರಾ ಗಾಂಧಿ ಒಬ್ಬರೇ ಇರುವದು ಇಂಡಿಕೇಟ್ ಎಂದಾಗಿ ಕಾಂಗ್ರೆಸ್ ಹೋಳಾಯಿತು. ಆಗ ನಡೆದ ರಾಷ್ಟ್ರಪತಿ ಚುನಾವಣೆಯಲ್ಲಿ ಸಿಂಡಿಕೇಟ್‌ನಿಂದ ಸಂಜೀವರೆಡ್ಡಿ ಅವರನ್ನು, ವಿ.ವಿ. ಗಿರಿ ಅವರನ್ನು ಇಂಡಿಕೇಟ್‌ನಿಂದ ನಿಲ್ಲಿಸಲಾಯಿತು. ವಿ.ವಿ.ಗಿರಿ ಅವರು ರಾಷ್ಟ್ರಪತಿಗಳಾದರು. ಇಂದಿರಾಗಾಂಧಿ ಅವರ ಧೈರ್ಯ ಇಮ್ಮಡಿಗೊಂಡಿತು.

ಆಗ ಕಾನೂನು ಪದವಿ ಪಡೆದು ಬಂದ ನಾನು ಇಂಡಿಕೇಟ್ ಸೇರಿದೆ. ಆಗ ಇಲ್ಲಿ ಅತ್ಯಂತ ಪ್ರಭಾವಿ ಗುಂಪುಗಳಾಗಿದ್ದ ಬಣಗಾರ ಸಾಹುಕಾರ ಹಾಗೂ ಹರಪನಹಳ್ಳಿ ವಕೀಲರು ಸಿಂಡಿಕೇಟ್ ನತ್ತ ನಡೆದರು. ಹಲಗೇರಿಯ ಡಾ. ಬಿ.ಜಿ. ಪಾಟೀಲ (83 ರಲ್ಲಿ ಶಾಸಕರು, 85 ರಲ್ಲಿ ಧಾರವಾಡ ಜಿ.ಪಂ ಅಧ್ಯಕ್ಷರಾದವರು) ಅವರು ನಾನು ಸೇರಿ ತಾಲ್ಲೂಕಿನಲ್ಲಿ ಪಕ್ಷದ ಸಂಘಟನೆ ಮಾಡಿದೆವು.

ಬಿ.ಜಿ ಪಾಟೀಲರ ಸಹಕಾರದಿಂದಲೇ 1972 ರ ವಿಧಾನಸಭೆ ಚುನಾವಣೆಗೆ ದೆಹಲಿಗೆ ಹೋಗಿ ಇಂದಿರಾಗಾಂಧಿ ಅವರನ್ನು ಕಂಡು ಟಿಕೆಟ್ ತೆಗೆದುಕೊಂಡು ಬಂದು ಬಿ.ಜಿ. ಪಾಟೀಲರ ಮನೆಯಲ್ಲಿ ಹೋಳಿಗೆ ಸೀಕರಣಿ ಊಟ ಮಾಡಿ ಮರುದಿನ ನಾಮಪತ್ರ ಸಲ್ಲಿಸಲು ಬಂದಾಗ, ನನಗೆ ಮಗಳನ್ನು ಮದುವೆ ಮಾಡಿಕೊಟ್ಟ ನಮ್ಮ ಮಾವ ಸಕ್ರಿ ವೆಂಕಣ್ಣ (ವಿ. ಕೆ.ಸಾವುಕಾರ) ಸೇರಿದಂತೆ ತಾಲ್ಲೂಕಿನ ಎಲ್ಲ ಘಟಾನುಘಟಿಗಳು ಸೇರಿ ಡಾ. ಬಿ.ಜಿ. ಪಾಟೀಲರನ್ನೇ ನನ್ನೆದುರು ಸಿಂಡಿಕೇಟ್ ಅಭ್ಯರ್ಥಿಯನ್ನಾಗಿ ಮಾಡಿದರು.

ಇಂತಹ ತಂತ್ರಗಾರಿಕೆ, ಆಶ್ಚರ್ಯಗಳು, ಅವಘಡಗಳು ರಾಜಕೀಯದಲ್ಲಿ ಸಾಮಾನ್ಯ ಎಂಬುದನ್ನು ಆಗಿನಿಂದಲೇ ಅರಿತು, ಒಬ್ಬಂಟಿಯಾಗಿ ಚುನಾವಣೆ ಎದುರಿಸಿ ಮೊದಲ ಪ್ರಯತ್ನದಲ್ಲಿಯೇ ವಿಧಾನಸಭೆ ಪ್ರವೇಶಿಸಿದೆ ಎಂದ ಕೆ.ಬಿ.ಕೋಳಿವಾಡರು ಅಂದಿನಿಂದ ಇಂದಿನವರೆಗೂ ಅನೇಕ ವಿಚಿತ್ರಗಳನ್ನು ಕಂಡಿದ್ದೇನೆ. ಅನುಭವಿಸಿದ್ದೇನೆ. ರಾಣೇಬೆನ್ನೂರು ವಿಧಾನಸಭಾ ಕ್ಷೇತ್ರದ ಜನ ನನ್ನನ್ನು ರಾಜಕೀಯವಾಗಿ ಜೀವಂತವಿಟ್ಟಿದ್ದಾರೆ. ಐದು ಬಾರಿ ಆಯ್ಕೆಯಾಗಿ ಮಂತ್ರಿ, ಸಭಾಪತಿ ಆದೆ. ಇದೆಲ್ಲ ಈ ಜನರ ಆಶೀರ್ವಾದ ಎಂದು ಇತಿಹಾಸ ನೆನಪಿಸಿಕೊಂಡು ಭಾವುಕರಾದರು. ಅವರು ಕಾರ್ಯಕ್ರಮದ ಅಧ್ಯಕ್ಷೀಯ ಭಾಷಣ ಮಾಡುತ್ತಿದ್ದರು.

### ಮಂತ್ರಿ ಮಗನ ಸೊಕ್ಕು....

ಮಂತ್ರಿ ಮಕ್ಕಳಿಗೆ ಸೊಕ್ಕು ಇರುತ್ತೆ. ಸೊಕ್ಕಿನಲ್ಲಿ ಮೆರೆದಾಡುತ್ತಾರೆ ಎನ್ನುವ ಮಾತುಗಳು ಸಾಮಾನ್ಯವಾಗಿ ರಾಜಕೀಯದಲ್ಲಿ ಅಲ್ಲಲ್ಲಿ ಕಾಣುವ, ಕೇಳಿಬರುವ ಮಾತುಗಳು. ನಮ್ಮ ತಂದೆ ಮಂತ್ರಿಗಳಾದಾಗ, ಸಭಾಪತಿಗಳಾದಾಗ ನನಗೆ ಸೊಕ್ಕೇ ಬರಲಿಲ್ಲ. ಪಿಕೆಕೆ ಮೂಲಕ ಜನರ ಭಾವನೆಗಳಿಗೆ ಸ್ಪಂದಿಸುವಲ್ಲಿ ನಿರತನಾದೆ. ಆಗ ಬರದ 'ಸೊಕ್ಕು' ಈಗ ಶಾಸಕನಾದಾಗ ನನಗೆ ಬರುತ್ತಾ? ಎಂದು ಮತದಾರರಿಗೆ ಕೃತಜ್ಞತೆ ಅರ್ಪಿಸಿದ ಶಾಸಕ ಪ್ರಕಾಶ ಕೋಳಿವಾಡ ನೆರೆದ ಪಕ್ಷದ ಕಾರ್ಯಕರ್ತರನ್ನು ಪ್ರಶ್ನಿಸಿದರು

# ಮಲೇಬೆನ್ನೂರು : 'ಜನ್ ಭಾಗಿದಾರ್ ಇವೆಂಟ್' ಕಾರ್ಯಕ್ರಮದ ಉದ್ಘಾಟನೆ



ಮಲೇಬೆನ್ನೂರು, ಜೂ.7- ಜಿ ಬೇವಿನಹಳ್ಳಿಯ ವಾಲ್ಮೀಕಿ ಸಮುದಾಯ ಭವನದಲ್ಲಿ ದಾವಣಗೆರೆಯ ಜನ ಶಿಕ್ಷಣ ಸಂಸ್ಥಾನದ ವತಿಯಿಂದ ಹಮ್ಮಿಕೊಂಡಿದ್ದ 'ಜನ್ ಭಾಗಿದಾರ್ ಇವೆಂಟ್' ಕಾರ್ಯಕ್ರಮವನ್ನು ಶಾಸಕ ಬಿ. ಪಿ. ಹರೀಶ್ ಉದ್ಘಾಟನೆ ಮಾಡಿದರು. ಕಾರ್ಯಕ್ರಮದ ಅಂಗವಾಗಿ ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಗ್ರಾ ಪಂ ಮಾಜಿ ಅಧ್ಯಕ್ಷ ಬಿ. ಕೆ. ಮಹೇಶ್ವರಪ್ಪ ಅಧ್ಯಕ್ಷತೆ ವಹಿಸಿದ್ದರು. ಗ್ರಾ ಪಂ ಸದಸ್ಯ ದೇವರಾಜ್, ಕೆ. ಜಿ. ರವಿಗೌಡ, ಬಿ. ಕೆ. ರಂಗನಾಥ್, ಎ. ಕೆ. ಸೋಮಶೇಖರ್ ಮತ್ತು ಸಂಪನ್ಮೂಲ ವ್ಯಕ್ತಿಗಳಾದ ಸರೋಜಮ್ಮ, ಮಂಜುಳಾ ಹಾಗೂ ಇತರರು ಈ ವೇಳೆ ಹಾಜರಿದ್ದರು.

# ಪರಿಸರ ಸ್ವಚ್ಛತೆಯಿಂದ ಕಾಯಿಲೆಗಳನ್ನು ದೂರ ಮಾಡಬಹುದು

## ಹಾಲಿವಾಣದಲ್ಲಿ ಮಲೇರಿಯಾ ವಿರೋಧಿ ಮಾಸಾಚರಣೆ ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ರಾಜಪ್ಪ

ಮಲೇಬೆನ್ನೂರು, ಜೂ. 7- ಹಾಲಿವಾಣ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಆರೋಗ್ಯ ಇಲಾಖೆ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಹಾಗೂ ಮಲೇರಿಯಾ ವಿರೋಧಿ ಮಾಸಾಚಾರಣೆ ಆಚರಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಎಸ್‌ಡಿಎಂಸಿ ಅಧ್ಯಕ್ಷ ರಾಜಪ್ಪ ಮಾತನಾಡಿ, ಪರಿಸರ ಸ್ವಚ್ಛತೆಯಿಂದ ಕಾಯಿಲೆಗಳನ್ನು ದೂರ ಮಾಡಿ ಆರೋಗ್ಯವಂತರಾಗಿ ರಬಹುದು. ಶಾಲೆಗಳು ಪ್ರಾರಂಭವಾಗಿರುವುದರಿಂದ ಶಾಲಾ ಮೈದಾನದಲ್ಲಿ ಮಕ್ಕಳು ಆಟವಾಡುತ್ತಾ ಬಿದ್ದು ಗಾಯಮಾಡಿಕೊಳ್ಳ ಬಹುದು. ಹಾಗಾಗಿ ಆರೋಗ್ಯ ಇಲಾಖೆ ಪ್ರಥಮ ಚಿಕಿತ್ಸೆ ಕಿಟ್ ನೀಡುವಂತೆ ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ, ಮಲೇರಿಯಾ ಪರಾವಲಂಬಿಯಿಂದ ಉಂಟಾಗುವ ಕಾಯಿಲೆಯಾಗಿದೆ. ಸೊಳ್ಳೆಗಳ ಕಡಿತದ ಮೂಲಕ ಮನುಷ್ಯರಿಂದ ಮನುಷ್ಯರಿಗೆ ಹರಡುತ್ತದೆ. ಮಲೇರಿಯಾ ಹೊಂದಿರುವ ಜನರು ಸಾಮಾನ್ಯವಾಗಿ ತೀವ್ರ ಜ್ವರ ಮತ್ತು ನಡುಗುವ ಚಳಿಯಿಂದ ತುಂಬಾ ಅಸ್ವಸ್ಥರಾಗುತ್ತಾರೆ. ಪ್ರತಿ



ವರ್ಷ ಸುಮಾರು 290 ಮಿಲಿಯನ್ ಜನರು ಮಲೇರಿಯಾ ಸೋಂಕಿಗೆ ಒಳಗಾಗುತ್ತಾರೆ. ಆದುದರಿಂದ ಯಾವುದೇ ಜ್ವರ ಇರಲಿ ರಕ್ತ ಪರೀಕ್ಷೆ ಮಾಡಿಸಿ ಎಂದು ಹೇಳಿದರು.

ಕಾರ್ಯಕ್ರಮ ಕುರಿತು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ನಾಗರಾಜ್ ಮಾತನಾಡಿ, ಮಲೇರಿಯಾ ಸಾಮಾನ್ಯವಾಗಿ ನಡುಗುವಿಕೆ ಮತ್ತು ಶೀತದಿಂದ ಪ್ರಾರಂಭವಾಗುತ್ತದೆ, ನಂತರ ಹೆಚ್ಚಿನ ಜ್ವರ, ಬೆವರುವಿಕೆ ಮತ್ತು ಸಾಮಾನ್ಯ ತಾಪಮಾನಕ್ಕೆ ಮರಳುತ್ತಾರೆ. ಮಲೇರಿಯಾ ರೋಗ ಲಕ್ಷಣಗಳು ಸಾಮಾನ್ಯವಾಗಿ ಸೋಂಕಿತ ಸೊಳ್ಳೆಯಿಂದ ಕಚ್ಚಿದ ನಂತರ ಕೆಲವೇ ವಾರಗಳಲ್ಲಿ ಪ್ರಾರಂಭವಾಗುತ್ತದೆ. ಈ ರೋಗದ ಲಕ್ಷಣಗಳು ಚಳಿ ಜ್ವರ, ಅಸ್ವಸ್ಥತೆ, ತಲೆನೋವು, ವಾಕರಿಕೆ ಮತ್ತು ವಾಂತಿ, ಅತಿಸಾರ, ಹೊಟ್ಟೆ ನೋವು, ಕೆಮ್ಮು ಇತ್ಯಾದಿ ಲಕ್ಷಣಗಳನ್ನು ಹೊಂದಿರುತ್ತಾರೆ. ನಮ್ಮ ಇಲಾಖೆಯವರು ಶೀಘ್ರ ಪತ್ತೆ, ತ್ವರಿತ ಚಿಕಿತ್ಸೆಗಾಗಿ ಮನೆ ಮನೆಗೆ ಭೇಟಿ ನೀಡಿದ ಸಮಯದಲ್ಲಿ ಯಾವ ಮನುಷ್ಯನಿಗೆ ಚಳಿ ಜ್ವರ ಕಂಡು ಬರುತ್ತದೆಯೋ ಅಂತಹ ವ್ಯಕ್ತಿಗಳ ರಕ್ತ ಸಂಗ್ರಹಣೆ ಮಾಡಿ ರಕ್ತ ಪರೀಕ್ಷಾ ಕೇಂದ್ರಕ್ಕೆ ಕಳಿಸಿಕೊಡುತ್ತಾರೆ. ಈ ವೇಳೆ ಕಾಯಿಲೆ ಕಂಡು ಬಂದರೆ ಶೀಘ್ರವಾಗಿ ಚಿಕಿತ್ಸೆ ನೀಡಲಾಗುತ್ತದೆ ಎಂದು ಹೇಳಿದರು.

ಜಿಲ್ಲಾ ಎಸ್.ಡಿ.ಎಂಸಿ ಒಕ್ಕೂಟದ ಅಧ್ಯಕ್ಷ ಶಿವಕ್ಕಳ ಆಂಜನೇಯ ಮಾತನಾಡಿ, ಮಕ್ಕಳ ಆರೋಗ್ಯದ ಹಿತ ದೃಷ್ಟಿಯಿಂದ ಆರೋಗ್ಯ ತಪಾಸಣೆಯನ್ನು ಮಾಡಿಸಿ, ಆರೋಗ್ಯವನ್ನು ವೃದ್ಧಿಪಡಿಸಿ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮುಖ್ಯೋಪಾಧ್ಯಾಯ ಹನುಮಂತಪ್ಪ ಮಾತನಾಡಿ, ಪರಿಸರ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ. ಆರೋಗ್ಯವೇ ನಮ್ಮೆಲ್ಲರ ರಕ್ಷಾ ಕವಚ ಇದ್ದ ಹಾಗೆ ಎಂದು ಹೇಳಿದರು.

ಆರೋಗ್ಯ ನಿರೀಕ್ಷಣಾಧಿಕಾರಿ ಕಿರಣ್, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ನಳಿನಾಕ್ಷಿ, ಸಮುದಾಯ ಆರೋಗ್ಯ ಅಧಿಕಾರಿ ದೀಕ್ಷಿತ, ಆಶಾ ಕಾರ್ಯಕರ್ತೆಯರಾದ ಪ್ರೇಮ ಲೀಲಾ, ವನಜಾಕ್ಷಿ, ಮಂಜಮ್ಮ, ವನಜಾಕ್ಷಮ್ಮ ಈ ಸಂದರ್ಭದಲ್ಲಿ ಹಾಜರಿದ್ದರು. ಶಿಕ್ಷಕರಾದ ಮಾಲತೇಶ್ ಸ್ವಾಗತಿಸಿದರು. ಆಶಾ ನಿರೂಪಿಸಿದರೆ, ಮರುಳಸಿದ್ದಮ್ಮ ವಂದಿಸಿದರು.

# ಅಣಜಿಯಲ್ಲಿ ಮದ್ಯವರ್ಜನೆ ಶಿಬಿರ

ದಾವಣಗೆರೆ, ಜೂ. 7- ಮದ್ಯ ವ್ಯಸನದಿಂದ ಜನ ಮುಕ್ತರಾಗುವಲ್ಲಿ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಕಾರ್ಯ ಶ್ಲಾಘನೀಯ ಎಂದು ಶಾಸಕ ಕೆ.ಎಸ್.ಬಸವಂತಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.



**ಧರ್ಮಸ್ಥಳ ಸಂಸ್ಥೆಯ ಸೇವೆಗೆ ಶಾಸಕ ಬಸವಂತಪ್ಪ ಶ್ಲಾಘನೆ**

ತಾಲ್ಲೂಕಿನ ಅಣಜಿಯ ವಾಲ್ಮೀಕಿ ಸಮುದಾಯ ಭವನದಲ್ಲಿ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ವತಿಯಿಂದ ಆಯೋಜಿಸಿದ್ದ ಮದ್ಯವರ್ಜನೆ ಶಿಬಿರದಲ್ಲಿ ಅವರು ಮಾತನಾಡಿದರು.

ಅತಿಯಾದ ಮದ್ಯ ವ್ಯಸನದಿಂದ ಇಡೀ ಕುಟುಂಬವೇ ಬೀದಿಗೆ ಬರುತ್ತದೆ. ಇದನ್ನು ಮದ್ಯ ವ್ಯಸನಿಗಳು ಮೊದಲು ಅರ್ಥ ಮಾಡಿಕೊಳ್ಳಬೇಕು. ಅಲ್ಲದೇ ಕುಡಿತದ ದಾಸ್ಯಕ್ಕೆ ಒಳಗಾಗಿ ಸಮಾಜದಲ್ಲಿ ಅತ್ಯಂತ ನಿಕೃಷ್ಟವಾದ ಜೀವನ ನಡೆಸಿದ್ದೀರಿ. ಮುಂದಿನ ದಿನಗಳಲ್ಲಿ ಉತ್ತಮ ಜೀವನ ನಡೆಸಬೇಕೆಂದು ಶಿಬಿರಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕುಡಿತದ ಚಟ ಬಿಟ್ಟು ಹೊಸ ಜೀವನ ಆರಂಭಿಸಲು ಇನ್ಮುಂದೆ ಕುಡಿತಕ್ಕೆ ಬಲಿಯಾಗುವುದಿಲ್ಲ, ತಂದೆ-ತಾಯಿ, ಪತ್ನಿ, ಮಕ್ಕಳನ್ನು ಕಣ್ಣೀರು ಹಾಕಿಸುವುದಿಲ್ಲ ಎಂದು ದೇವರಲ್ಲಿ ಸಂಕಲ್ಪ ಮಾಡಿ ಹೊಸ ಜೀವನಕ್ಕೆ ಕಾಲಿರಿಸಬೇಕೆಂದು ಮದ್ಯ ವ್ಯಸನಿಗಳಿಗೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ಚಂದ್ರಣ್ಣ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಜನಜಾಗೃತಿ ಅಧಿಕಾರಿ ನಾಗರಾಜ್, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಶಿಬಿರದ ಯೋಜನಾಧಿಕಾರಿ ದೇವಿಪ್ರಕಾಶ್, ಶಿಬಿರದ ಮೇಲ್ವಿಚಾರಕ ಕೊಟ್ರೇಶ್ ಸೇರಿದಂತೆ ಇತರರಿದ್ದರು.

# ಪರಿಸರ ದಿನಾಚರಣೆ : ಜಾಥಾಕ್ಕೆ ಚಾಲನೆ

ದಾವಣಗೆರೆ, ಜೂ. 7 - ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆಡಳಿತ, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಇಂಡಿಯಾ ಪ್ರಾದೇಶಿಕ ಕೇಂದ್ರ, ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಇವರ ಸಂಯುಕ್ತ ಆಶ್ರಯದಲ್ಲಿ ನಗರದ ಡಾ. ಎಂ.ಸಿ. ಮೋದಿ ವೃತ್ತದಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರಗಳು ಎಂಬ ಘೋಷಣೆಯೊಂದಿಗೆ ಪರಿಸರ ಜಾಗೃತಿ ಜಾಥಾ ಆಯೋಜಿಸಲಾಗಿತ್ತು.

ಜಾಥಾಕ್ಕೆ ದಾವಣಗೆರೆ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್. ಅರುಣಕುಮಾರ್ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಜಿ.ಆರ್.ತಿಪ್ಪೇಶಪ್ಪ, ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಅಧಿಕಾರಿ ಹೆಚ್.ಲಕ್ಷ್ಮಿ ಕಾಂತ್ ಇತರರು ಇದ್ದರು.



# ಪ್ರೋತ್ಸಾಹ ಧನಕ್ಕಾಗಿ ಅರ್ಜಿ

ದಾವಣಗೆರೆ, ಜೂ.7- ಮೆಟ್ರಿಕ್ ನಂತರದ ಕೋರ್ಸ್‌ಗಳ ಪಬ್ಲಿಕ್ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ ಪ್ರೋತ್ಸಾಹ ಧನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 31 ಕೊನೆಯ ದಿನವಾಗಿದೆ. ದ್ವಿತೀಯ ಪಿ.ಯು.ಸಿ, ಡಿಪ್ಲೋಮಾ, ಪದವಿ, ಸ್ನಾತಕೋತ್ತರ, ಬಿ.ಇ, ಮೆಡಿಕಲ್ ಕೋರ್ಸ್‌ಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಆನ್‌ಲೈನ್ ಅರ್ಜಿ ಹಾಕಿದ ಪ್ರತಿಯನ್ನು ಪ್ರಾಂಶುಪಾಲರ ದೃಢೀಕರಣದೊಂದಿಗೆ ಸಂಬಂಧಿಸಿದ ತಾಲ್ಲೂಕುಗಳ ಸಹಾಯಕ ನಿರ್ದೇಶಕರ ಕಛೇರಿ ಅಥವಾ ಉಪನಿದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೊಠಡಿ ಸಂಖ್ಯೆ 37, ಮೊದಲನೇ ಮಹಡಿ, ಜಿಲ್ಲಾಡಳಿತ ಭವನ, ದಾವಣಗೆರೆ ಇಲ್ಲಿಗೆ ಸಲ್ಲಿಸಬಹುದಾಗಿದೆ ಎಂದು ದಾವಣಗೆರೆ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.


**ವಾಸದ ಮನೆ ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕ್ವೆಯರ್ ಡ್ಯೂ ಪ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು, ಹಾಗೂ ಎಲ್ಲಾ ಸೌಕರ್ಯವಿರುವ ವಾಸದ ಮನೆ ಭೋಗ್ಯಕ್ಕಿದೆ. ಬಿ.ಎಸ್. ಸಂತೋಷ್
96322 67555

**ಕಛೇರಿ ಬಾಡಿಗೆಗೆ ಇದೆ**
ಕೆ.ಬಿ ಬಡಾವಣೆಯ ಲಾಯರ್ ರಸ್ತೆಯಲ್ಲಿ 40x40=1600 ಅಡಿ ಅಳತೆಯ ಜಾಗ ಕಛೇರಿಗೆ ಅನುಕೂಲವಾಗಿದ್ದು ಬಾಡಿಗೆಗಿದೆ. ಸಂಪರ್ಕಿಸಿ.
96201 41318

**ಬೇಕಾಗಿದ್ದಾರೆ**
ACE ಟ್ರ್ಯಾಕ್ಟರ್ ಶೋ ರೂಂನಲ್ಲಿ ಕೆಲಸ ಮಾಡಲು B.Com / BCA / MBA ಪದವಿ ಆಗಿರುವವರು ಮ್ಯಾನೇಜರ್ ಹುದ್ದೆಗೆ ಬೇಕಾಗಿದ್ದಾರೆ.
ಯು & ಟಿ ಎಂಟರ್‌ಪ್ರೈಸಸ್
ಎಕೆಎಸ್ ಕನ್ವೆನ್ಷನ್ ಹಾಲ್ ಪಕ್ಕ ಹರಿಹರ ರಸ್ತೆ, ದಾವಣಗೆರೆ.
91085 12030, 82777 47785

**SHOP FOR RENT**
MCC 'B' BLOCK
MAMA'S JOINT ROAD
82177 72482

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗರು/ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಆಸಕ್ತರು ಬಯೋಡಾಟಾ ಹಾಗೂ ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166
ಆಕರ್ಷಕ ವೇತನ ನೀಡಲಾಗುವುದು.

**ಸೈಟುಗಳು ಮಾರಾಟಕ್ಕೆ**
ಬನಶಂಕರಿ ಬಡಾವಣೆ, ಡಾಲರ್ಸ್ ಕಾಲೋನಿ, ಶಿವ-ಪಾರ್ವತಿ, ಸಿದ್ದವೀರಪ್ಪ, ಗ್ಲಾಸ್ ಹೌಸ್ ಲೇಔಟ್ ಹಾಗೂ ದಾವಣಗೆರೆಯ ಎಲ್ಲಾ ಬಡಾವಣೆಯಲ್ಲಿ 30x40, 30x50, 40x60, 50x80, ಸೈಟುಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ ಹಾಗೂ ಹೊಲಗಳಿಗೆ ವಿಚಾರಿಸಿ:
97315 12365

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**WANTED**
PHARMASIST
CONTACT :
SHILPA DIAGNOSTICS PVT LTD.,
MCC B BLOCK, NEAR SWIMMING POOL, DAVANGERE.
98440 65638

**ಕೆಲಸಗಾರರು ಬೇಕಾಗಿದ್ದಾರೆ**
ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸಕ್ಕೆ ನುರಿತ AC, Ref, Tv, Washing Machine Tecnician ಬೇಕಾಗಿದ್ದಾರೆ. Salary + Incetives ಸಹ ನೀಡುತ್ತೇವೆ.
98805 31599

**HOUSE FOR LEASE**
Independent house 3 BHK 5th main, 5th cross,St. Pauls Convent Road, PJ Extension , Davangere.
88616 89590

**ಬಾಡಿಗೆಗೆ ಇದೆ**
2 BHK Independent ಮನೆ ಬಾಡಿಗೆಗೆ ಇದೆ.
(Only Veg) ಸಂಪರ್ಕಿಸಿ :
99006 17813
70198 99814

**ಬೇಕಾಗಿದ್ದಾರೆ**
ಪೈಪ್ ಡಿಸ್ಟ್ರಿಬ್ಯೂಷನ್‌ನಲ್ಲಿ ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಕಡ್ಡಾಯವಾಗಿ ಹೊಂದಿರಬೇಕು.
ವಿದ್ಯಾರ್ಹತೆ : ಬಿ.ಕಾಂ.
7406740635, 7406396332

**ಹಾಲ್ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರಸ್ತೆಯಲ್ಲಿರುವ ಶಿಲ್ಪ ಡಯಾಗ್ನಸ್ಟಿಕ್ಸ್ ಪಕ್ಕದಲ್ಲಿರುವ ಶ್ವೇತ ಬಿಲ್ಡಿಂಗ್‌ನ ಮೊದಲನೇ ಮಹಡಿಯಲ್ಲಿ ಹಾಲ್ ಬಾಡಿಗೆಗೆ ಇದೆ.
98440 65638

**ಜಮೀನು ಮಾರಾಟಕ್ಕಿದೆ**
10 / 20 / 30 ಗುಂಟೆಗಳ ಹರಿಹರ ಶಿವಮೊಗ್ಗ ರಸ್ತೆಗೆ.
contcat Buyers Only.
Sharma :
63608 66997

**EC / ಇಸಿ,**
E-swathu, Khatha Change Building Licence & Other Property Documents
96118-66449

**FOR SALE**
60x44 Prime Property in MCC B Block, 2nd Cross 8th Main Near S S House.
for Details Contact
88849 76550

**ಬೇಕಾಗಿದ್ದಾರೆ**
ಸೇಲ್ಸ್ ಮಾರ್ಕೆಟಿಂಗ್ ಮಾಡಲು ಪಿಯುಸಿವರೆಗೆ ಓದಿದ ಅಭ್ಯರ್ಥಿ ಬೇಕಾಗಿದ್ದಾರೆ. ಸಂಪರ್ಕಿಸಿರಿ :
ಆನಂದ ಹಾರ್ಡ್‌ವೇರ್ಸ್ & ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**SSLC/PUC ಪಾಸ್ /ಫೇಲ್ ಮುಂದೇನು?**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್- 2 ವರ್ಷ.
ವಿದ್ಯಾರ್ಹತೆ: SSLC/PUC Pass / Fail.
ನೇರ ಪರೀಕ್ಷೆಗಳು: PUC : ARTS / COMM/SCIENCE.
ಸಂಪರ್ಕಿಸಿ:
ಗಂಗೋತ್ರಿ ಕಮ್ಯುನಿಟಿ ಕಾಲೇಜ್
ಲಾಯರ್ ರಸ್ತೆ, ದಾವಣಗೆರೆ.
86602 35013

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಅರ್ಥರೈಟಿಸ್) ಬೆಂಗಳೂರು ಇವರು
ಇಂದು 8.6.2023ರಂದು ಗುರುವಾರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮನೆ ಮಾರಾಟಕ್ಕಿದೆ**
ಕೆ.ಬಿ.ಬಡಾವಣೆ ಬಳ್ಳಾರಿ ಸಿದ್ದಮ್ಮ ಪಾರ್ಕ್-ಪಕ್ಕ. ದಕ್ಷಿಣ ಭಾಗದ 15x45 ಅಳತೆ.
ಆಸಕ್ತರು ಸಂಪರ್ಕಿಸಿ. ಮಾಲೀಕರು :
98440 25005

**ಸೈಟುಗಳು ಮಾರಾಟಕ್ಕಿವೆ**
ಶಿವಗಂಗಾ ಚೌಟ್ರಿ ಹಿಂಭಾಗ ಬಂಗ್ಲೆ ಸೈಟು 40 ಅಡಿ ರಸ್ತೆಗೆ 60x83 ದಕ್ಷಿಣ, KHB ಕಾಲೋನಿಯಲ್ಲಿ 40x60 ಪಶ್ಚಿಮ, ಅಮರನಾಥ ಲೇಔಟ್‌ನಲ್ಲಿ 30x35.5 ಪೂರ್ವಕ್ಕೆ, ಗ್ಲಾಸ್ ಹೌಸ್ ಪಕ್ಕದಲ್ಲಿ 30x50 ಉತ್ತರ.
ಬಸವರಾಜ N
98440 84229

**ಬೇಕಾಗಿದ್ದಾರೆ**
ವಿಶ್ವ ಮಾನವ ವಿದ್ಯಾ ಪೀಠ (ರಿ)
ಶಿವರಾಮ ಕಾರಂತ ನರ್ಸರಿ ಮತ್ತು ಪ್ರಾ. ಶಾಲೆ, ದಾವಣಗೆರೆ. 2 ಶಿಕ್ಷಕಿಯರು, ವಿದ್ಯಾರ್ಹತೆ B.A, B.Ed or B.Sc, B.Ed
ವಿಳಾಸ : ಶಿವರಾಮ ಕಾರಂತ ನರ್ಸರಿ ಪ್ರಾ. ಶಾಲೆ, ಬಸವೇಶ್ವರ ಕಾಲೇಜ್ ರಸ್ತೆ, ಇಂಡಸ್ಟ್ರಿಯಲ್ ಏರಿಯಾ, ಲೋಕಿಕೆರೆ ರಸ್ತೆ,
95353 53855, 89715 68897

**ನೊಂದವರಿಗೆ ಮೊದಲ ಆದ್ಯತೆ**
ಶಿರಡಿ ಸಾಯಿಬಾಬಾ ಜ್ಯೋತಿಷ್ಯಾಲಯ
ಇವರು ನುಡಿದಂತೆ ನಡೆಯುವವರು, ಪಂ.ಬಿ.ಹೆಚ್. ರಾವ್. ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವ್ಯಾಪಾರದಲ್ಲಿ ಲಾಭ -ನಷ್ಟ, ಲೈಂಗಿಕ ಸಮಸ್ಯೆ, ಸ್ತ್ರೀ-ಪುರುಷ ವಶೀಕರಣ, ನಿಮ್ಮ ಮನ ಇಚ್ಛೆ ಗುಪ್ತ ಸಮಸ್ಯೆಗಳಿಗೆ 1 ದಿನದಲ್ಲಿ ಪರಿಹಾರ. ಇಂದೇ ಕರೆ ಮಾಡಿ. ಶಿರಡಿ ಸಂಸ್ಥಾನದಿಂದ ನೇರ ಪರಿಹಾರ.
ಮೊ : 99807 70791

**ಲೋನ್ ಕೊಡಲಾಗುತ್ತದೆ**
ಪ್ರಾವಿಜನ್ ಸ್ಟೋರ್, ಬಟ್ಟೆ ಅಂಗಡಿ, ಫ್ಯಾನ್ಸಿ ಸ್ಟೋರ್, ಸಣ್ಣ ವ್ಯಾಪಾರಿಗಳಿಗೆ ಸಾಲ ಸೌಲಭ್ಯವಿದೆ. ಹೋಮ್ ಲೋನ್, ಮನೆ ರಿಪೇರಿ ರಿ ಫೈನಾನ್ಸ್‌ಗೂ ಸಾಲ ಸೌಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
74835 24662

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, ಡ್ಯುರೋಫ್ಲೆಕ್ಸ್ ಬೆಡ್, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
ಸ್ವಪ್ನ ಕುಷನ್ ವರ್ಕ್ಸ್
ವಿಠಲ ದೇವಸ್ಥಾನದ ಹಿಂಭಾಗ, ಮಹಾರಾಜಪೇಟೆ, ದಾವಣಗೆರೆ.
98445 81966

**ಮನೆ ಬಾಡಿಗೆಗೆ ಅಥವಾ ಲೀಸ್‌ಗೆ**
2BHK 2nd ಫ್ಲೋರ್, ನೀರು ಕಾರ್ಪೋರೇಷನ್ ಮತ್ತು ಬೋರ್‌ವೆಲ್ 24x7 ಕೆ.ಬಿ. ಬಡಾವಣೆ, ತ್ರಿಶೂಲ್ ಕಾನ್ವೆಂಟ್ ಹತ್ತಿರ.
97411 01041

**2 BHK ಮನೆ ಬಾಡಿಗೆಗಿದೆ**
ಡಿಸಿಎಂ ಟೌನ್‌ಶಿಪ್‌ನಲ್ಲಿ 24 ಗಂಟೆ ನೀರಿನ ವ್ಯವಸ್ಥೆ ಇರುವ ಸುಸಜ್ಜಿತ 2BHK ಮನೆ ಬಾಡಿಗೆಗೆ ಇದೆ. ಆದ್ಯತೆ ಸಸ್ಯಹಾರಿಗಳಿಗೆ ಮಾತ್ರ.
9481625435, 9379268038

**2 BHK HOUSE FOR RENT/LEASE**
Near Podar international in J.H. Patel Badavane, Davangere.
95358 41058

**ಲೇಡಿಸ್ ಬೇಕಾಗಿದ್ದಾರೆ**
ಕಂಪ್ಯೂಟರ್ ಅನುಭವವಿರುವ ಶ್ರೀ ಧರ್ಮಸ್ಥಳ ಇಂಡೇನ್ ಗ್ಯಾಸ್ ಏಜೆನ್ಸಿ ಎಸ್.ಎಸ್. ಹಾಸ್ಪಿಟಲ್ ರೋಡ್, ಕಾಳಿದಾಸ ಸರ್ಕಲ್, ಜಯನಗರ, ದಾವಣಗೆರೆ.
94481 66175

**ಬೇಕಾಗಿದ್ದಾರೆ**
ಮಹಿಳಾ ಶಿಕ್ಷಕರು, ಪಾರ್ಟ್ ಟೈಂ ಮಹಿಳೆಯರು, ಸೆಕ್ಯೂರಿಟಿ ಹಾಗೂ ಆಯಾ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
88614 38237

**ROOM TO - LET**
Well furnished Room Vacant near swimming pool, MCC B block, Ground floor with attached bathroom
99721 02927

**ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಹೊಸ RTO ಕಚೇರಿ ಹಿಂಭಾಗದಲ್ಲಿರುವ ನಂದಗೋಕುಲ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಗೆ BA B. Ed/ BA D.Ed/B.Sc/BA/ ತರಬೇತಿ ಹೊಂದಿದ ಶಿಕ್ಷಕಿಯರು ಬೇಕಾಗಿದ್ದಾರೆ. ಸಂಪರ್ಕಿಸಿ.
99640 17729

**ಬೇಕಾಗಿದ್ದಾರೆ**
ಬೆಂಗಳೂರಿನ ಕೆಫೆ ಶಾಪ್‌ನಲ್ಲಿ ಟೀ, ಕಾಫಿ ಮಾಡಲು ಹುಡುಗರು ಬೇಕಾಗಿದ್ದಾರೆ. ರೂಮ್ ಸೌಲಭ್ಯವಿರುತ್ತದೆ.
87110 04905

**ಶಿಕ್ಷಕ/ಕಿ ಯರು ಬೇಕಾಗಿದ್ದಾರೆ**
BA B.Ed -1 (social science)
B.Sc, B.Ed (PCM) -1
MA (Sociology)
D.Ed / Tch. - 3
BA. B.Com, B.Sc - 2
8970321855, 8296502675

**ಕಲಿಕೆಯಲ್ಲಿ ಹಿಂದುಳಿದ**
ನಿಯಂತ್ರಿಸಲಾಗದ ಮಕ್ಕಳಿಗಾಗಿ ವಿಶೇಷ ಹಾಗೂ ಚಟುವಟಿಕೆಯುಕ್ತ ಶಿಕ್ಷಣದ ಅವಶ್ಯಕತೆಯಿದ್ದಲ್ಲಿ ಸಂಪರ್ಕಿಸಿ :
95903 80251
86184 09987

**Wanted Marketing**
MALE OR FEMALE
* Visiting Engineering colleges
* Meeting HOD and students
* Good in English
Payment 500/- per day
Ph: 70220 76255

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**SIRINTEL TECHNOLOGIES**
* AUTOCAD 2D, PYTHON
* CATIA, ANSYS
* BASIC COMPUTER
* DIPLOMA COACHING
89712 79127

**ಬೇಕಾಗಿದ್ದಾರೆ**
ಕನ್ನಡದಲ್ಲಿ ಮಾತನಾಡುವ ಪುರುಷ-ಮಹಿಳಾ ಟೆಲಿಕಾಲರ್ಸ್ ಬೇಕಾಗಿದ್ದಾರೆ.
ವಿದ್ಯಾರ್ಹತೆ : II PUC ಯಾವುದೇ ಪದವಿ, ಸಂಬಳ : 8000+Incentives
(ವಯೋಮಿತಿ : 32 ವರ್ಷದೊಳಗೆ)
90608 88667

**ಅಡಿಕೆ ಸಸಿಗಳಿಗಾಗಿ ಸಂಪರ್ಕಿಸಿರಿ**
ಫೋ. :99866 17127

**ಮನೆ ಬಾಡಿಗೆಗಿದೆ**
ಶಿವಕುಮಾರಸ್ವಾಮಿ ಬಡಾವಣೆ ಮೊದಲನೇ ಹಂತಲ್ಲಿ 4 ಬೆಡ್ ರೂಂ ಇರುವ ಮೊದನೇ ಮಹಡಿಯಲ್ಲಿ ಮುನ್ಸಿಪಲ್, ಬೋರ್‌ವೆಲ್, ಕಾರ್ ಪಾರ್ಕಿಂಗ್ ಸೌಲಭ್ಯವಿರುವ ಮನೆ ಬಾಡಿಗೆಗಿದೆ. ಸಂಪರ್ಕಿಸಿ.
94802 82894, 88840 40911

**ಸೈಟು ಮಾರಾಟಕ್ಕೆ**
1) ಸಿದ್ದವೀರಪ್ಪ ಬಡಾವಣೆ 30x40 ಪಶ್ಚಿಮ
2) ಆಂಜನೇಯ ಬಡಾವಣೆ 30x60 ಪೂರ್ವ
3) ಬಸವೇಶ್ವರ 40x60 ಪಶ್ಚಿಮ
4) ವಿವೇಕಾನಂದ ಬಡಾವಣೆ 30x50 ಉತ್ತರ.
95385 65909

**Required**
B.Com Male Graduates are required for canvasing TATA Power Solar Systems. Office boy required to an auditors office contact no.
99001 42052

**ಸಾಯಂಕಾಲ ಟ್ಯೂಷನ್ ಮಾಡಲು ಶಿಕ್ಷಕಿಯರು ಬೇಕಾಗಿದ್ದಾರೆ**
ವಿಳಾಸ : Little Champs, Gurukulam School, Near H.K.R. Circle, College Road, Nittuvalli, Davanagere.
90609 06039, 98443 32559

**FOR SALE**
32.5x20.5 (3 BHK) and 15.5x20.5 (Duplex) 2nd Main, 1st Cross, PJ Extension, Raithara Beedi, Davangere.
99165 95733
87479 44084

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಆಫೀಸ್ ನಲ್ಲಿ ಕೆಲಸ ಮಾಡಲು ಡ್ರೈವರ್ ಬೇಕಾಗಿದ್ದಾರೆ ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು ಅಸಕ್ತಿ ಇದ್ದಲ್ಲಿ ಮೂಲ ದಾಖಲಾತಿಯೊಂದಿಗೆ ಸಂಪರ್ಕಿಸಿ.
9880042597, 89711 19130
what's App no 70199 83025


**ರಕ್ತ ದಾನ ಶ್ರೇಷ್ಠ ದಾನ**


**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2&3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಜಮೀನು ಬಾಡಿಗೆಗೆ / ಲೀಸ್‌ಗೆ**
ಹರಿಹರದ ಆಶ್ರಯ ಕಾಲೋನಿ ಹಿಂದುಗಡೆಯ ರಸ್ತೆಗೆ ಇಟ್ಟಿಗೆ ಭಟ್ಟಿಗಳಿಗೆ / ಇತರೆ ಉದ್ಯಮಿಗಳಿಗೆ
ಸಂಪರ್ಕಿಸಿ.
93410 10582

**Wanted**
Seeds-Davangere
Post : Techincal Officer for Spirulina Cultivation Project
Quli : BSc., MSc.,/Microbiology/ Biotechnology. Experience : 1 year
Work Place : Neelagunda Cross, Harapanahalli (Tq)
Mahesh - 89044 56566, Sanjeevaiah 94483 73997

**SEQUIRITY GUARD**
ಬೇಕಾಗಿದ್ದಾರೆ
ಉತ್ತಮ ವೇತನ, ESI, PF ಸೌಲಭ್ಯವಿರುತ್ತದೆ.
70012 87756
97409 77785

**ಬಸವೇಶ್ವರ ಬೋರ್‌ವೆಲ್ಸ್**
4 1/2 ಬೋರ್ ವೆಲ್ 300 ರಿಂದ 350 ಅಡಿ ಮನೆಯ ಹೊಳಗು-ಹೊರಗು ಹಾಗೂ 6 1/2 ಬೋರ್ ಜಮೀನು ಸೈಟ್‌ನಲ್ಲಿ ಕೊರೆದು ಕೊಡಲಾಗುವುದು.
99008 92916

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ
(ಕೋರಿಯರ್ ಸೌಲಭ್ಯವಿದೆ)
87490 98879

**WANTED (Lady Tecahers)**
BA, B.Ed - English Major-1, B.Sc, B.Ed, PCMB - 1, D.Ed - 1 NTC - 1 English Fluency must.
JNANABHARATHI VIDYALAYA
Ring Road, Opp. New Shakti Gas Office, Nittuvalii, Davanagere.
Office Time : 10 AM to 1 PM
91644 91132, 90087 35218

**House for Sale**
30x60 3BHK Revenue Site open Duplex house (2 years) behind HP Gas Godown Yaragunte Village. Contact :
90608 05343
(Jadhav)

**A-Katha**
ಸೈಟುಗಳು ಮಾರಾಟಕ್ಕಿವೆ
ಅಳತೆ : 30x40 feet
ಜಗಳೂರು JMFC ಕೋರ್ಟ್ ಹತ್ತಿರ. ಸಂಪರ್ಕಿಸಿ :
83109 70469

**ಸನ್ನಿಧಿ ಟ್ರೇಡಿಂಗ್ ಕೋ**
ದಾವಣಗೆರೆ ವಿಭಾಗಕ್ಕೆ ಮಾರ್ಕೆಟಿಂಗ್ ಮತ್ತು ಪ್ರಮೋಶನ್ ಮಾಡಲು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾಭ್ಯಾಸ ಮಾಡುತ್ತಿರುವವರಿಗೆ ಆದ್ಯತೆ. ಸಂಪರ್ಕಿಸಿ :
89045 80039/89045 80032
89045 80033/35/36

**CHIRANJEEVI ACADEMY**
IBPS, RRB
CRASH COURSE
NEW BATCH STARTS ON 15th June.
Admissions started.
9490000406, 6301453621

**TEACHERS GOLDEN OPPORTUNITY**
ಶಿಕ್ಷಕರಿಗೆ ಸುವರ್ಣಾವಕಾಶ
ಹಣ ಮನೆಯಿಂದ ಗಳಿಸಿ
Earn from home
8073205423, 9591665911

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

# ಅಂತರ್ ರಾಷ್ಟ್ರೀಯ ಮಟ್ಟದ ಸ್ಪೆಷಲ್ ಒಲಂಪಿಕ್ಸ್ ಸೈಕ್ಲಿಂಗ್‌ಗೆ ನಗರದ ಸುಶ್ರುತ್



ದಾವಣಗೆರೆ, ಜೂ. 7- ಅಂತರ್ ರಾಷ್ಟ್ರೀಯ ಮಟ್ಟದ ಸ್ಪೆಷಲ್ ಒಲಂಪಿಕ್ಸ್ ಸೈಕ್ಲಿಂಗ್‌ಗೆ ದಾವಣಗೆರೆಯ ಸುಶ್ರುತ್ ಎಂ. ಎಸ್. ಆಯ್ಕೆಯಾಗಿದ್ದು, ಇದೇ ದಿನಾಂಕ 12 ರಿಂದ 26ರವರೆಗೆ ಜರ್ಮನಿಯ ಬರ್ಲಿನ್ ನಲ್ಲಿ ನಡೆಯಲಿರುವ ಅಂತರ್ ರಾಷ್ಟ್ರೀಯ ಮಟ್ಟದ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಮಂಜುನಾಥ ಹಾಗೂ ಮಮತ ಇವರ ಪುತ್ರ ಸುಶ್ರುತ್ ಅವರನ್ನು ವಿಶೇಷ ತರಬೇತಿಗಾಗಿ 2013ರಲ್ಲಿ ಸಂವೇದ ವಿಶೇಷ ಶಾಲೆ (ಬೌದ್ಧಿಕ ಸವಾಲನ್ನೆದುರಿಸುತ್ತಿರುವ ಮಕ್ಕಳ ಶಾಲೆ) ಪ್ರವೇಶ ಪಡೆದಿದ್ದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಸಂವೇದ ವಿಶೇಷ ಶಾಲೆಯ ಪ್ರಾಂಶುಪಾಲ ಎಸ್.ನಾಗರಾಜ್, ಶಾಲೆಯ ದೈಹಿಕ ಶಿಕ್ಷಕ ದಾದಾಪೀರ್ ಅವರು, ಈ ಹುಡುಗನಿಗೆ ತರಬೇತಿ ನೀಡುವಾಗ ಇವರಲ್ಲಿನ ಹೆಚ್ಚಿನ ಕ್ಷಮತೆ ಗಮನಿಸಿ ಸೈಕ್ಲಿಂಗ್ ತರಬೇತಿ ಕೊಡಲಾರಂಭಿಸಿದ್ದರು.

ಶ್ರಮದಿಂದ ಸೈಕ್ಲಿಂಗ್ ತರಬೇತಿ ಪಡೆದ ಸುಶ್ರುತ್, 2021ರ ನವೆಂಬರ್‌ನಲ್ಲಿ ಮಂಗಳೂರಿನಲ್ಲಿ ನಡೆದ ಸ್ಪೆಷಲ್ ಒಲಂಪಿಕ್ಸ್ ರಾಜ್ಯ ಮಟ್ಟದ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿ 5 ಕಿ.ಮೀ.ನಲ್ಲಿ ಪ್ರಥಮ ಸ್ಥಾನ ಪಡೆದಿದ್ದರು ಎಂದು ವಿವರಿಸಿದರು.

2022 ಜುಲೈ 21 ರಿಂದ 24ರವರೆಗೆ ಜಾರ್ಖಂಡ್‌ನ ಬಕಾರೋದಲ್ಲಿ ನಡೆದ ರಾಷ್ಟ್ರಮಟ್ಟದ ಸೈಕ್ಲಿಂಗ್ ಚಾಂಪಿಯನ್‌ಶಿಪ್‌ನಲ್ಲಿ 5 ಕಿ.ಮೀ.ನಲ್ಲಿ ಪ್ರಥಮ ಸ್ಥಾನ ಪಡೆದಿದ್ದರು. ನಂತರ 3 ನ್ಯಾಷನಲ್ ಕೋಚಿಂಗ್ ಕ್ಯಾಂಪ್‌ಗಳಲ್ಲಿ ಭಾಗಹಿಸಿ, ಇದೀಗ ಅಂತರ್ ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ ಎಂದರು.

**ಏನಿದು ಸ್ಪೆಷಲ್ ಒಲಂಪಿಕ್ಸ್** : ಇದೊಂದು ಅಂತರ್‌ರಾಷ್ಟ್ರೀಯ ಮಟ್ಟದ ವಿಶೇಷ ಮಕ್ಕಳ ಶ್ರೇಯೋಭಿಲಾಶೆಗಾಗಿರುವ ಸಂಸ್ಥೆ, ವಿಶೇಷ ಅಗತ್ಯತೆಯುಳ್ಳ ಮಕ್ಕಳಾದ ಬುದ್ಧಿ ಶಕ್ತಿಯಲ್ಲಿ ಕೊರತೆ, ಮೆದುಳಿನ ಪಾರ್ಶ್ವ ವಾಯು, ಆಟಿಸಂ ಮತ್ತು ಬಹು ವಿಧದ ನ್ಯೂನತೆಯುಳ್ಳ ವರಿಗೆ ಆಟೋಟಗಳನ್ನು ನಡೆಸುವ ಸಂಸ್ಥೆ, ಪ್ರತಿಯೊಂದು ದೇಶದಲ್ಲಿಯೂ ಇದರ ಅಂಗ ಸಂಸ್ಥೆಯಿರುತ್ತದೆ. ರಾಷ್ಟ್ರಮಟ್ಟದಲ್ಲಿ ಸ್ಪೆಷಲ್ ಒಲಂಪಿಕ್ಸ್ -ಭಾರತ್ ಈ ಆಟೋಟಗಳನ್ನು ನಡೆಸುತ್ತದೆ. ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಸ್ಪೆಷಲ್ ಒಲಂಪಿಕ್ಸ್ ಭಾರತ್-ಕರ್ನಾಟಕ ಈ ಆಟೋಟಗಳನ್ನು ನಡೆಸುತ್ತದೆ. ಸಂವೇದ ವಿಶೇಷ ಶಾಲೆಯು ಬೌದ್ಧಿಕ ಸವಾಲನ್ನೆದುರಿಸುತ್ತಿರುವ ಮಕ್ಕಳಿಗೆ ಸಂಶೋಧನಾಧಾರಿತ ತರಬೇತಿಯನ್ನು ಕಳೆದ 18 ವರ್ಷಗಳಿಂದ ನೀಡುತ್ತಾ ಬರುತ್ತಿದೆ. ಸುಮಾರು 150 ವಿದ್ಯಾರ್ಥಿಗಳು ಇಲ್ಲಿ ತರಬೇತಿ 25 ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಲಾಗುತ್ತದೆ.

ಪತ್ರಿಕಾಗೋಷ್ಠಿಯಲ್ಲಿ ತರಬೇತುದಾರ ದಾದಾಪೀರ್, ಎಂ.ಎಸ್. ಸುಶ್ರುತ್, ತಾಯಿ ಮಮತಾ, ತಂದೆ ಮಂಜುನಾಥ್, ಮಧುಸೂದನ್, ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

# ನಮನ ಅಕಾಡೆಮಿಯಿಂದ ಹೋ ಚಿ ಮಿನ್ ನಗರದಲ್ಲಿ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ




ದಾವಣಗೆರೆ, ಜೂ. 7 - ಪ್ರತಿಷ್ಠಿತ ಸಾಂಸ್ಕೃತಿಕ ಸಂಸ್ಥೆ 'ನಮನ ಅಕಾಡೆಮಿ'ಯು ಹೊರ ದೇಶದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜನೆ ಮಾಡುತ್ತಿದ್ದು ವಿಯೆಟ್ನಮ್ ದೇಶದ ವಿಯೋಗ ವರ್ಲ್ಡ್, ನಮನ ಅಕಾಡೆಮಿ ಹಾಗೂ ಅಷ್ಟಾಂಗ ವಿನ್ಯಾಸ ಇಂಟರ್ನ್ಯಾಷನಲ್ ಯೋಗ ಅಕಾಡೆಮಿ (ಏವಿಯ) ಸಹಭಾಗತ್ವದಲ್ಲಿ ವಿಶ್ವ ಯೋಗ ದಿನದ ಅಂಗವಾಗಿ ಇದೇ ದಿನಾಂಕ 11 ರಂದು ಹೋ ಚಿ ಮೀನ್ ನಗರದಲ್ಲಿ ನಡೆಯುತ್ತಿರುವ 'ದಿ ವಿಯೋಗ ವರ್ಲ್ಡ್ ಸ್ಟಾರ್ ಆರ್ಟಿಸ್ಟಿಕ್ ಯೋಗ ಅಂಡ್ ಇಂಟರ್ನ್ಯಾಷನಲ್ ಕಲ್ಚರಲ್ ಎಕ್ಸ್‌ಚೇಂಜ್' ಕಾರ್ಯಕ್ರಮವನ್ನು ಆಯೋಜನೆ ಮಾಡುತ್ತಿದ್ದಾರೆ.

ಈ ಕಾರ್ಯಕ್ರಮದಲ್ಲಿ ನಮನ ಅಕಾಡೆಮಿಯ ಕಲಾವಿದರಾದ ವಿದುಷಿ ಶ್ರೀಮತಿ ಮಾಧವಿ ಡಿ.ಕೆ, ಪೂಜಾ ಆರ್ ಧಾಗೆ, ಪವನ್ ಕುಮಾರ್ ಎನ್ ಟಿ, ಮಂದಿರ ಎಂ, ರಕ್ಷಾ ಹೆಚ್ ಎಂ, ಅಕ್ಷರ ಎನ್, ವಸುಂದರ ಎನ್, ಗೌರಿ ಬಿ ಟಿ, ಹಂಸಿಕ ರವಿಕುಮಾರ್, ರುಹಿಕ ಸತೀಶ್ ಶೆಟ್ಟರ್' 'ವಚನ ನೃತ್ಯ, ಜನಪದ ನೃತ್ಯ, ಲಘು ಶಾಸ್ತ್ರೀಯ ನೃತ್ಯ ಹಾಗೂ ಶಾಸ್ತ್ರೀಯ ನೃತ್ಯಗಳನ್ನು' ಪ್ರಸ್ತುತಪಡಿಸಲಿದ್ದಾರೆ. ಏವಿಯ ತಂಡದವರು 'ದಾಂಡಿಯ ನೃತ್ಯ' ಮಾಡಲಿದ್ದಾರೆ ಜೊತೆಗೆ ವಿವಿಧ ಯೋಗ ಸ್ಪರ್ಧೆಗಳಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲಿದ್ದಾರೆ.

ದಾವಣಗೆರೆ, ಹುಬ್ಬಳ್ಳಿ, ಬೆಂಗಳೂರಿನಲ್ಲಿನ ಯೋಗಾಪಟುಗಳು ಹಾಗೂ ಕಲಾವಿದರೊಂದಿಗೆ ಇನ್ನೂ ಅನೇಕ ದೇಶದ ಯೋಗಾಪಟುಗಳು ಹಾಗೂ ಕಲಾವಿದರು ಈ ಅಂತರಾಷ್ಟ್ರೀಯ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಪ್ರತಿಭಾ ಪ್ರದರ್ಶನವನ್ನು ನೀಡಲಿದ್ದಾರೆ.

ಏವಿಯ ತಂಡದ 'ಅಂತರರಾಷ್ಟ್ರೀಯ ಯೋಗ ರೆಫ್ರಿ' ಹಾಗೂ ಯೋಗ ಕೋಚ್ ಆದ ಯೋಗಾಚಾರ್ಯ ತೀರ್ಥರಾಜ್ ಹೋಲೂರ್ ಹಾಗೂ ನಮನ ಅಕಾಡೆಮಿಯ ಗುರು ವಿದುಷಿ ಶ್ರೀಮತಿ ಡಿ. ಕೆ. ಮಾಧವಿ ಅವರು ಈ ಸ್ಪರ್ಧೆಗಳಲ್ಲಿ ಅಂತರರಾಷ್ಟ್ರೀಯ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮಾಧವಿ ಅವರ ವಿದೇಶ ಪ್ರಯಾಣಕ್ಕೆ ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಡಾ. ಪ್ರಭಾ ಮಲ್ಲಿಕಾರ್ಜುನ್, ದಿನೇಶ್ ಕೆ. ಶೆಟ್ಟಿ ಅವರುಗಳು ಶುಭ ಹಾರೈಸಿದ್ದಾರೆ.

# ಮೌಲ್ಯಗಳ ಪುನರುತ್ಥಾನಕ್ಕೆ ಮಹಾತ್ಮರ ಕೊಡುಗೆ ಅಪಾರ



ಚಿಕ್ಕಮಗಳೂರು, ಜೂ.7- ಭಾರತೀಯ ಸಂಸ್ಕೃತಿಯಲ್ಲಿ ಅಧ್ಯಾತ್ಮ ಮತ್ತು ಧರ್ಮಕ್ಕೆ ವಿಶೇಷ ಮಹತ್ವವಿದೆ. ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳ ಪುನರುತ್ಥಾನಕ್ಕೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಹಾಗೂ ಬಸವಣ್ಣನವರ ಕೊಡುಗೆ ಅಪಾರವಾದುದೆಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಬುಧವಾರ ನಗರದ ಶ್ರೀ ಜಗದ್ಗುರು ರೇಣುಕಾಚಾರ್ಯ ಸಮುದಾಯ ಭವನದಲ್ಲಿ ಜರುಗಿದ ಶ್ರೀ ಜಗದ್ಗುರು ರೇಣುಕ - ಶ್ರೀ ಬಸವ ಜಯಂತ್ಯುತ್ಸವ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಸುಖ ಶಾಂತಿಯ ಬದುಕಿಗೆ ಧರ್ಮಾಚರಣೆ ಮುಖ್ಯ. ಸಂಸ್ಕಾರದಿಂದ ಸಂಸ್ಕೃತಿ ಬೆಳೆಯಲು ಸಾಧ್ಯ. ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಶ್ರೀ ಜಗದ್ಗುರು ರೇಣುಕಾಚಾರ್ಯರು ಮತ್ತು ಬಸವಣ್ಣನವರ ವಿಚಾರಧಾರೆಗಳು ಆಶಾಕಿರಣ. ಸತ್ಯ, ಶುದ್ಧವಾದ ಜೀವನ ಮಾರ್ಗ ಅನುಸರಿಸಿ ಬಾಳುವಂತಾಗಲು ಶ್ರೀ ಗುರುವಿನ ಮಾರ್ಗದರ್ಶನ ಹಾಗೂ ಬೋಧಾಮೃತ ಅವಶ್ಯಕ. ವೀರಶೈವ ಧರ್ಮದಲ್ಲಿ ಜೀವ ಶಿವನಾಗುವ, ಅಂಗ ಲಿಂಗವಾಗುವ, ನರ ಹರನಾಗುವ, ಭವಿ ಭಕ್ತನಾಗುವ ಆದರ್ಶ ದಾರಿಯನ್ನು ತೋರಿದವರು ಶ್ರೀ ಜಗದ್ಗುರು ರೇಣುಕಾಚಾರ್ಯರು. ಇದೇ ದಾರಿಯಲ್ಲಿ ಬಸವಣ್ಣನವರು ಮುನ್ನಡೆದು, ಸಕಲ ಜೀವಾತ್ಮರ ಒಳಿತಿಗಾಗಿ ಶ್ರಮಿಸಿದ್ದಾರೆ. ನೀರು ಎರೆಯ ಬಂದವರಿಗೂ, ಕಡಿಯ ಬಂದವರಿಗೂ ಮರ ನೆರಳು, ಹಣ್ಣು ಕೊಡುವಂತೆ ಮಹಾತ್ಮರು ನೋವು ನುಂಗಿ ಸಮಾಜಕ್ಕೆ ಬೆಳಕು ತೋರಿದರು.

ಮನುಷ್ಯ ಜೀವನದಲ್ಲಿ ಯಾವ ವಿಶ್ವಾಸ ಹೋದರೂ ಚಿಂತಿಸಬೇಕಾಗಿಲ್ಲ. ಆದರೆ ಆತ್ಮವಿಶ್ವಾಸವನ್ನು ಕಳೆದುಕೊಳ್ಳಬಾರದು. ಶ್ರೀ ಜಗದ್ಗುರು ರೇಣುಕಾಚಾರ್ಯರ ತತ್ವ, ಸಿದ್ಧಾಂತ ಬಸವಣ್ಣನವರ ಸಾಮಾಜಿಕ ನಿಲುವು ಸಮಾಜದ ಉನ್ನತಿಗೆ ಭದ್ರ ಬುನಾದಿಯಾಗಿದೆ ಎಂದು ಹರುಷ ವ್ಯಕ್ತಪಡಿಸಿದರು.

ಚಿಕ್ಕಮಗಳೂರು ಶಾಸಕ ಹೆಚ್.ಡಿ.ತಮ್ಮಯ್ಯ ಪೂಜಾ ಸಮಾರಂಭ ಉದ್ಘಾಟಿಸಿ, ಧರ್ಮ ಪರಿಪಾಲನೆಯಿಂದ ಶಾಂತಿ ನೆಲೆಸಲು ಸಾಧ್ಯ. ಶ್ರೀ ಗುರುವಿನ ಕಾರುಣ್ಯದ ಬಲ ಭಕ್ತ ಸಮುದಾಯಕ್ಕೆ ಸಂಜೀವಿನಿ. ಶ್ರೀ ರಂಭಾಪುರಿ ಜಗದ್ಗುರುಗಳ ಆಶೀರ್ವಾದ, ಶ್ರೀರಕ್ಷೆ ನಮ್ಮ ನಿಮ್ಮೆಲ್ಲರ ಮೇಲಿರಲೆಂದು ಬಯಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಹುಲಿಕೆರೆ ಶ್ರೀ ವಿರೂಪಾಕ್ಷಲಿಂಗ ಶಿವಾಚಾರ್ಯ ಸ್ವಾಮೀಜಿ ವಹಿಸಿ ಮಾತನಾಡಿದರು.

ಶಂಕರದೇವರ ಮಠದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಬೇರುಗಂಡಿ ಶ್ರೀ ರೇಣುಕ ಮಹಾಂತ ಶಿವಾಚಾರ್ಯ ಸ್ವಾಮೀಜಿ ಪಾಲ್ಗೊಂಡು ಉಪದೇಶಾಮೃತವನ್ನಿತ್ತರು.

ವಿಶೇಷ ಆಹ್ವಾನಿತರಾಗಿ ವಿಧಾನ ಪರಿಷತ್ ಮಾಜಿ ಸದಸ್ಯೆ ಗಾಯತ್ರಿ ಶಾಂತೇಗೌಡ ಹಾಗೂ ನಗರ ವೀರಶೈವ ಸಮಾಜದ ಅಧ್ಯಕ್ಷ ಮಲ್ಲೇಗೌಡರು ಪಾಲ್ಗೊಂಡಿದ್ದರು. ಮಾಜಿ ಶಾಸಕ ಸಿ.ಟಿ. ರವಿ ಆಗಮಿಸಿ, ಶ್ರೀ ರಂಭಾಪುರಿ ಜಗದ್ಗುರುಗಳ ದರ್ಶನಾಶೀರ್ವಾದ ಪಡೆದರು.

ಟ್ರಸ್ಟ್‌ನ ಸದಸ್ಯ ಬಿ.ಎ.ಶಿವಶಂಕರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಟ್ರಸ್ಟ್‌ನ ಸದಸ್ಯರಾದ ಎಂ.ಡಿ.ಪುಟ್ಟಸ್ವಾಮಿ, ಎಸ್. ಎಂ.ದೇವಣ್ಣಗೌಡ, ಹೆಚ್.ಎಸ್.ನಂಜೇಗೌಡ, ಜೆ.ಬಿ. ಶಿವಪ್ಪಗೌಡ ಉಪಸ್ಥಿತರಿದ್ದರು.

ಟ್ರಸ್ಟಿನ ಖಜಾಂಚಿ ಯು.ಎಂ.ಬಸವರಾಜ ಸ್ವಾಗತಿಸಿದರು. ಟ್ರಸ್ಟಿನ ಸದಸ್ಯ ಬಿ.ಬಿ. ರೇಣುಕಾರ್ಯ ನಿರೂಪಿಸಿದರು.

## ಸಾದರ ಸಾಧನ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜೂ. 7- 2022-23 ನೇ ಸಾಲಿನ ಎಸ್ಸೆಸ್ಸೆಲ್ಸಿ (ಸ್ಟೇಟ್, ಸಿಬಿಎಸ್‌ಇ, ಐಸಿಎಸ್‌ಇ) ಪಿಯುಸಿ ವಿಜ್ಞಾನ, ಕಲಾ ಮತ್ತು ವಾಣಿಜ್ಯ ವಿಭಾಗಗಳಲ್ಲಿ ಶೇ. 85 ಕ್ಕೂ ಹೆಚ್ಚು ಅಂಕ ಗಳಿಸಿದ ಸಾಧು ಲಿಂಗಾಯತ ಸಮಾಜದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಕರ್ನಾಟಕ ರಾಜ್ಯ ಮಟ್ಟದ ಸಾಧು ಲಿಂಗಾಯತ ಸಮಾಜ ಪ್ರತಿಭಾ ಪುರಸ್ಕಾರ ನೀಡಲು ಸಾದರ ನೌಕರರ ಬಳಗ ಮುಂದಾಗಿದೆ. ಆಸಕ್ತ ಸಾಧು ಲಿಂಗಾಯತ ಸಮಾಜದ ವಿದ್ಯಾರ್ಥಿಗಳು ಇದೇ ದಿನಾಂಕ 31 ರೊಳಗಾಗಿ ಅರ್ಜಿಯನ್ನು ಕೆ. ನಾಗಪ್ಪ, ಅಧ್ಯಕ್ಷರು, ಸಾದರ ನೌಕರರ ಬಳಗ, ಸಾದರ ಪತ್ತಿನ ಸಹಕಾರ ಬ್ಯಾಂಕ್, ಡೋರ್ ನಂ. 1645/145, ವಿದ್ಯಾನಗರ ಮುಖ್ಯರಸ್ತೆ, ದಾವಣಗೆರೆ ಇವರಿಗೆ ಸಲ್ಲಿಸಬೇಕು.

ವಿವರಕ್ಕೆ ಸಂಪರ್ಕಿಸುವ ಮೊಬೈಲ್ : 9844369744, 94484 39662, 9844501366, 9243312478, 9886339984.

## ದೇವಾಂಗ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವಧು-ವರರ ಸಮಾವೇಶ

ದಾವಣಗೆರೆ, ಜೂ.7- ಎಸ್ಸೆಸ್ಸೆಲ್ಸಿಯಲ್ಲಿ ಶೇ. 85 ಮತ್ತು ಪಿಯುಸಿಯಲ್ಲಿ ಶೇ. 80ಕ್ಕಿಂತ ಹೆಚ್ಚು ಅಂಕ ಪಡೆದಿರುವ ದಾವಣಗೆರೆ ಜಿಲ್ಲೆಯಲ್ಲಿ ವ್ಯಾಸಂಗ ಮಾಡಿರುವ ದೇವಾಂಗ ಸಮಾಜದ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕೆ ಇದೇ 30ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ.

ನಗರದ ದೇವಾಂಗ ಸಂಘದ ವತಿಯಿಂದ 5ನೇ ವರ್ಷದ ದೇವಾಂಗ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವು ಬರುವ ಜುಲೈ 16ರ ಬೆಳಿಗ್ಗೆ 9.30ಕ್ಕೆ ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಮಾಹಿತಿಗೆ ಶ್ರೀ ದೇವಾಂಗ ವಿದ್ಯಾರ್ಥಿ ನಿಲಯ, ಡಾ॥ ಪುರಂತರ ಆಸ್ಪತ್ರೆ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ (98806 62036, 99868 59030, 91648 29666, 94488 73489) ಇಲ್ಲಿಗೆ ಸಂಪರ್ಕಿಸಬಹುದು.

## ಜಗದ ಜನರ ದುಃಖ ನಿವಾರಣೆಗೆ ನಿರಂತರ ಜೀವಿಸಿದ ಜಿದ್ದು ಕೃಷ್ಣಮೂರ್ತಿ



ದಾವಣಗೆರೆ, ಜೂ. 7- 20ನೇ ಶತಮಾನದ ದಾರ್ಶನಿಕ ಚಿಂತಕ ಜಿದ್ದು ಕೃಷ್ಣಮೂರ್ತಿಯವರು ಸುಮಾರು 65 ವರ್ಷಗಳ ಕಾಲ ಜಗತ್ತಿನಾದ್ಯಂತ ಪ್ರವಾಸ ಮಾಡಿ ಜನರ ಮಾನಸಿಕ ದುಃಖ ನಿವಾರಣೆಗಾಗಿ ಪ್ರಾಯೋಗಿಕ ಮತ್ತು ಹಿಂದೆ ಕೇಳರಿಯದ ಅತ್ಯುಪಯುಕ್ತ ಚಿಂತನೆಗಳನ್ನು ವಿಶ್ವಕ್ಕೆ ನೀಡಿದ್ದಾರೆ. ದೈಹಿಕವಾಗಿ ಎಂತಹ ಭೀಕರ ಕಾಯಿಲೆ ಬಂದರೂ ಈಗಿನ ತಾಂತ್ರಿಕ ಪ್ರಗತಿಯಿಂದಾಗಿ ಅವುಗಳನ್ನೆಲ್ಲಾ ನಿವಾರಣೆ ಮಾಡಿಕೊಳ್ಳಬಹುದು. ಆದರೆ, ಮಾನಸಿಕ ಕಾಯಿಲೆಗಳಾದ ದ್ವೇಷ, ಅಹಂಕಾರ, ಅಸೂಯೆ, ಭ್ರಮೆಗಳು ದುರಾಸೆ ಮುಂತಾದವುಗಳನ್ನು ಯಾರೂ ನಿವಾರಣೆ ಮಾಡಲಾಗುವುದಿಲ್ಲ. ಸ್ವತಃ ನಮ್ಮನ್ನು ನಾವು ಅರಿಯುವುದರ ಮೂಲಕ ಮತ್ತು ಅವು ಉಂಟು ಮಾಡುವ ದುಷ್ಪರಿಣಾಮಗಳ ಅರಿವಿನಿಂದ ನಮ್ಮನ್ನು ನಾವೇ ಸರಿಪಡಿಸಿಕೊಳ್ಳಬೇಕು ಎಂದು ಶಿವನಕೆರೆ ಬಸವಲಿಂಗಪ್ಪ ತಿಳಿಸಿದರು.

ಅವರು ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ನಡೆದ ಚಿಂತನ-ಮಂಥನ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಮಾತನಾಡುತ್ತಿದ್ದರು.

ಜೆ.ಕೆ.ಯವರು ನಿಮಗೆ ನೀವೇ ಗುರು ಎಂದಿದ್ದಾರೆ. ಯಾವ ಜಗದ್ಗುರು, ಯಾವ ಸಂಪದ್ರಾಯಗಳು, ಯಾವ ಪುಸ್ತಕಗಳನ್ನೂ ನಂಬಬೇಡಿ. ಸ್ವತಃ ನನ್ನ ಚಿಂತನೆಗಳನ್ನೂ ಸಹ ಪ್ರಶ್ನೆ ಮಾಡದೆ ಒಪ್ಪಬೇಡಿ ಮತ್ತು ಪ್ರಯೋಗ ಮಾಡಿ ಸರಿ ಎನಿಸಿದರೆ ಮಾತ್ರ ನೀವೂ ಅಳವಡಿಸಿಕೊಳ್ಳಿ ಎಂದಿದ್ದಾರೆ. ನಮ್ಮ ದುಃಖವೇನು ಎಂದು ಪತ್ತೆ ಹಚ್ಚಿದರೆ ಅದಕ್ಕೆ ಪರಿಹಾರವೇನು ಎಂದು ನಾವೇ ತಿಳಿಯಬಹುದು.

ಜೆ.ಕೆಯವರು ಯುವ ಮನಸ್ಸುಗಳು ಜಾಗತಿಕ ಸತ್ ಚಿಂತನೆಯ ನಾಯಕರಾಗಿ ಸದಾಲೋಚನೆ, ಸತ್ಕಾರ್ಯಗಳನ್ನು ಹರಿಬಿಡಲೆಂದು ಪ್ರಪಂಚದಾದ್ಯಂತ ಶಾಲೆ, ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಿದರು. ತಾಂತ್ರಿಕವಾಗಿ ಮನುಷ್ಯ ಮುಂದುವರೆದಿದ್ದಾನೆಯೇ ಹೊರತು, ಪ್ರೀತಿ, ಕರುಣೆ, ಮೈತ್ರಿಯ ವಿಷಯಗಳಲ್ಲಿ ಸಾವಿರ ವರ್ಷದ ಹಿಂದೆ ಹೇಗಿದ್ದಾನೋ ಹಾಗೆಯೇ ಇದ್ದಾನೆ. ಮಾನಸಿಕವಾಗಿ ಏನೂ ಪ್ರಗತಿ ಸಾಧಿಸಿಲ್ಲ. ಜಗತ್ತಿನಾದ್ಯಂತ ಅರಿವೇ ಗುರು ಎಂದರಿಯದ ಕೋಟಿ ಕೋಟಿ ಜನ ದುಃಖದ ಅಗಾಧವಾದ ಭಾರ ಹೊತ್ತು ತಿರುಗುತ್ತಿದ್ದಾರೆ. ಆದ್ದರಿಂದ ಮನುಜರೆಲ್ಲರೂ ಜೆ.ಕೆ. ಯವರ ಚಿಂತನೆಗಳನ್ನು ಅರಿತು, ದುಃಖ ನಿವಾರಣೆ ಮಾಡಿಕೊಳ್ಳಬೇಕು ಎಂದು ಬಸವಲಿಂಗಪ್ಪನವರು ತಿಳಿಸಿದರು.

ಮಲ್ಲಾಬಾದಿ ಬಸವರಾಜ್ ಮಾತನಾಡಿ, ನಾವುಗಳು ಒಬ್ಬರ ಮೇಲೊಬ್ಬರು ಹೋಲಿಸಿಕೊಂಡು, ಹೊಟ್ಟೆಕಿಚ್ಚು ಪಟ್ಟುಕೊಂಡು, ಸ್ಪರ್ಧೆಗಿಳಿದು ಅಶಾಂತಿಯ ಸಮಾಜ ನಿರ್ಮಾಣ ಮಾಡುತ್ತಿದ್ದೇವೆ. ಈ ರೋಗಗಳಿಗೆಲ್ಲ ಜೆ.ಕೆ ಯವರ ಚಿಂತನೆಗಳಲ್ಲಿ ಪರಿಹಾರಗಳಿವೆ ಎಂದರು.

# ತೀವ್ರವಾದ ಚಂಡಮಾರುತ, ದುರ್ಬಲವಾದ ಮುಂಗಾರು



ನವದೆಹಲಿ, ಜೂ. 7 – ಅರಬ್ಬೀ ಸಮುದ್ರದಲ್ಲಿ ಕಾಣಿಸಿಕೊಂಡಿರುವ ಚಂಡಮಾರುತ ತೀವ್ರ ಸ್ವರೂಪ ಪಡೆದಿದೆ. ಇದರಿಂದಾಗಿ ಮುಂಗಾರಿನ ಮೇಲೆ ಪರಿಣಾಮವಾಗಲಿದೆ. ಕೇರಳಕ್ಕೆ ತಲುಪಲಿರುವ ಮುಂಗಾರು ದುರ್ಬಲವಾಗಿರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮುಂದಿನ ಎರಡು ದಿನಗಳಲ್ಲಿ ಮುಂಗಾರು ಕೇರಳ ತಲುಬಹದು. ಆದರೆ, ಚಂಡಮಾರುತದ ಕಾರಣದಿಂದ ಮುಂಗಾರು ದುರ್ಬಲವಾಗಿರಲಿದೆ. ಮುಂಗಾರು ಹೆಚ್ಚು ಪ್ರಗತಿಯನ್ನೂ ಮಾಡುವುದಿಲ್ಲ ಎಂದು ಹವಾಮಾನ ಇಲಾಖೆ ಹೇಳಿದೆ.

ಚಂಡಮಾರುತ ಮುಂದಿನ ಮೂರು ದಿನಗಳಲ್ಲಿ ತೀವ್ರವಾಗಿ ಉತ್ತರದ ಕಡೆ ಸಾಗಲಿದೆ. ಆದರೆ, ಇದರಿಂದ ಭಾರತ, ಓಮನ್, ಇರಾನ್ ಹಾಗೂ ಪಾಕಿಸ್ತಾನ ಸೇರಿದಂತೆ ಯಾವ ದೇಶಗಳ ಮೇಲೂ ಹೆಚ್ಚಿನ ಪರಿಣಾಮವಾಗುವುದಿಲ್ಲ ಎಂದು ಹವಾಮಾನ ಇಲಾಖೆ ಹೇಳಿದೆ.

ಚಂಡಮಾರುತ ಜೂನ್ 12ರವರೆಗೆ ಮುಂದುವರೆಯಲಿದೆ. ಅಲ್ಲಿಯವರೆಗೂ ಮುಂಗಾರು ದುರ್ಬಲವಾಗಿರಲಿದೆ ಎಂದು ಖಾಸಗಿ ಹವಾಮಾನ ಸಂಸ್ಥೆಯಾದ ಸ್ಕೈಮೆಟ್‌ನ ಉಪಾಧ್ಯಕ್ಷ ಮಹೇಶ್ ಪಲವತ್ ಹೇಳಿದ್ದಾರೆ.

ಸಾಮಾನ್ಯವಾಗಿ ಮುಂಗಾರು ಜೂನ್ 1ರಂದು ಕೇರಳಕ್ಕೆ ತಲುಪುತ್ತದೆ. ಈಗಾಗಲೇ ಮುಂಗಾರು ವಾರ ಕಾಲ ವಿಳಂಬವಾಗಿದೆ. ಈ ಹಿಂದೆ 1972ರಲ್ಲಿ ಮುಂಗಾರು ಆಗಮನ ಜೂನ್ 18ರವರೆಗೆ ವಿಳಂಬವಾಗಿತ್ತು. ಅದಕ್ಕೂ ಮುಂಚೆ 1918ರಲ್ಲಿ ಮುಂಗಾರು ಮೇ 11ರಂದು ತ್ವರಿತವಾಗಿ ಆಗಮಿಸಿತ್ತು.

ಮುಂಗಾರು ವಿಳಂಬದಿಂದ ದೇಶದಲ್ಲಿ ಒಟ್ಟಾರೆ ಮಳೆಯ ಮೇಲೆ ಪರಿಣಾಮವಾಗುವುದಿಲ್ಲ. ಈ ವರ್ಷ ಸಾಮಾನ್ಯ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

## ಓದುಗರ ಪತ್ರ

### ಗೃಹ ಬಳಕೆಯ ಸಿಲಿಂಡರ್ ಬೆಲೆ ಇಳಿಸಿ

**ಮಾನ್ಯರೇ,**

ಕಳೆದ 15-20 ದಿನಗಳಿಂದಲೂ ವಾಣಿಜ್ಯ ಬಳಕೆಯ ಸಿಲಿಂಡರ್ ಬೆಲೆ ಇಳಿಯುತ್ತಲೇ ಇದೆ ಸ್ವಾಗತಾರ್ಹ. ಅದೇ ರೀತಿ ಕೋಟ್ಯಂತರ ಜನರು ಬಳಸುವ ಗೃಹ ಬಳಕೆಯ ಸಿಲಿಂಡರ್ ಬೆಲೆಯನ್ನು ಕಡಿಮೆ ಮಾಡುವ ಮೂಲಕ, ದೇಶದ ಬಡ ಮತ್ತು ಮಧ್ಯಮ ವರ್ಗದವರ ಮೇಲಿನ ಹೊರೆಯನ್ನು ಕಡಿಮೆ ಮಾಡಿಸಬೇಕಾಗಿದೆ. ಈಗಾಗಲೇ ಬೆಲೆ ಏರಿಕೆಯ ಬಿಸಿಯಿಂದ ಬಡ ಮತ್ತು ಮಧ್ಯಮ ವರ್ಗದವರ ಬದುಕು ಬಹಳ ದುಸ್ತರವಾಗಿದೆ. ಪರಿಣಾಮ ಗ್ರಾಮೀಣ ಭಾಗಗಳಲ್ಲಿ ಜನರು! ಮತ್ತೆ ಸೌದೆ ಒಲೆಗಳತ್ತ ಮುಖ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರ ಈ ಕೂಡಲೇ ವಾಣಿಜ್ಯ ಬಳಕೆಯ ಸಿಲಿಂಡರ್ ನಂತೆ ಗೃಹಬಳಕೆಯ ಸಿಲಿಂಡರ್ ಬೆಲೆಯನ್ನು ಇಳಿಸಬೇಕಾಗಿದೆ.

**- ಮುರುಗೇಶ ಡಿ.**, ಹವ್ಯಾಸಿ ಬರಹಗಾರರು, ದಾವಣಗೆರೆ.

### ಪರಿಸರ ರಕ್ಷಣೆ ಆದ್ಯ ಕರ್ತವ್ಯವಾಗಬೇಕು..

ಮಾನ್ಯರೇ,

ಇತ್ತೀಚಿನ ದಿನಗಳಲ್ಲಿ ನಗರದ ಅಭಿವೃದ್ಧಿ ಕಾಮಗಾರಿಗಳಿಂದಾಗಿ ಸಿಮೆಂಟ್ ರಸ್ತೆ, ಟೈಲ್ಸ್ ಫುಟ್‌ಪಾತ್ ಆಗಿ ಗಿಡಗಳನ್ನು ನೆಡಲು ಜಾಗವಿಲ್ಲದಂತಾಗಿದೆ. ಹಿಂದಿನ ಕಾಲದಲ್ಲೆಲ್ಲಾ ಮನೆಯ ಆವರಣಗಳಲ್ಲಿ ಸಸಿಯನ್ನು ನೆಟ್ಟು ಮರವಾಗಿ ಬೆಳೆಸುತ್ತಿದ್ದರು. ಮಾವು, ಹಲಸು, ತೆಂಗು, ಸಂಪಿಗೆ ಈ ರೀತಿ ನಾನಾ ವಿಧದ ಗಿಡಮರಗಳನ್ನು ಹಾಕಿ ಪರಿಸರವನ್ನು ಬೆಳೆಸುತ್ತಿದ್ದರು.

ಗಿಡ ಮರಗಳಿಲ್ಲದ ಮನೆಯೇ ಇಲ್ಲ ಎನ್ನುವಂತಾಗಿತ್ತು. ಆದರೆ ಈಗ ಹಾಗಾಗುತ್ತಿಲ್ಲ. ಸಸಿಗಳನ್ನು ನೆಟ್ಟು ಬೆಳೆಸಿದ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ವಿಶೇಷ ಬಹುಮಾನ ಹಾಗೂ ಅಂಕಗಳಲ್ಲಿ ಬಡ್ತಿ ಕೊಡುವಂತಾಗಬೇಕು. ಹೀಗೆ ಮಕ್ಕಳಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸಿ, ನಾವು ಪರಿಸರವನ್ನು ರಕ್ಷಿಸಿದರೆ ನಮ್ಮನ್ನು ಪರಿಸರ ರಕ್ಷಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವನದಲ್ಲಿ ಒಂದಾದರೂ ಸಸಿಯನ್ನು ನೆಟ್ಟು ಮರವಾಗಿಸಬೇಕು ಇದು ಅವರು ದೇಶಕ್ಕೆ ನೀಡುವ ಅಮೂಲ್ಯ ಕೊಡುಗೆ ಆಗುತ್ತದೆ. ತಮ್ಮ ಕಟ್ಟಡದ ಸೌಂದರ್ಯ ಮರೆಮಾಚಿದೆ ಎನ್ನುವ ಕಾರಣಕ್ಕಾಗಿ ಮರಗಳನ್ನು ಕಡಿಯಬಾರದು. ನಾವು ಮುಂದಿನ ಪೀಳಿಗೆಗೆ ಏನನ್ನಾದರೂ ಕೊಡುಗೆ ಕೊಡಬೇಕೆಂದರೆ ಅದು ಫಲವತ್ತಾದ ಮಣ್ಣು ಹಾಗೂ ಶುದ್ಧ ನೀರು ಇವೆರಡನ್ನು ಕೊಟ್ಟರೆ ಸಾಕು, ಇದು ಬಹುದೊಡ್ಡ ಕೊಡುಗೆಯಾಗುತ್ತದೆ. ನೈಸರ್ಗಿಕ ಸಂಪತ್ತನ್ನು ಕಾಪಾಡಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

**- ಹೆಲ್ಪ್‌ಲೈನ್ ಸುಭಾನ್**, ದಾವಣಗೆರೆ.

## ನಗರದಲ್ಲಿ ಇಂದು ಚಿಂತನೆ -ಸಂವಾದ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ 'ಬುದ್ಧ ಬೋಧಿಸಿದ ಧಮ್ಮ' ವಿಚಾರವಾಗಿ ಚಿಂತನೆ ಮತ್ತು ಸಂವಾದವನ್ನು ಇಂದು ಸಂಜೆ ಸಂಜೆ 6 ರಿಂದ 7ರವರೆಗೆ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಬೋಧಿಸತ್ವ ಸೊಸೈಟಿ ಅಧ್ಯಕ್ಷ ನಲ್ಕುಂದ ಹಾಲೇಶಪ್ಪ 'ಬುದ್ಧ ಬೋಧಿಸಿದ ಧಮ್ಮ' ಕುರಿತು ಚಿಂತನೆ ನಡೆಸುವರು. ಕಾರ್ಯಕ್ರಮದಲ್ಲಿ ಶಿವನಕೆರೆ ಬಸವಲಿಂಗಪ್ಪ, ಗುರುಮೂರ್ತಿ, ಎಂ.ಗಂಗಾಧರಪ್ಪ, ಪ್ರೊ.ಎಂ.ಬಸವರಾಜ್, ಡಾ.ನಾಗರಾಜ್ ಆಚಾರ್, ಕೆ.ಆರ್.ಸಿದ್ದಪ್ಪ, ಮಹಾಂತೇಶ್ ಅಗಡಿ, ಲಾಯರ್ ಸಿದ್ದಯ್ಯ, ಮಲ್ಲಾಬಾದಿ ಬಸವರಾಜ್ ಭಾಗವಹಿಸುವರು.

## ಮನೆಗಳ್ಳತನ : 30.67 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ದೋಚಿದ ಕಳ್ಳರು

ದಾವಣಗೆರೆ, ಜೂ.7- ಸ್ಥಳೀಯ ಡಾಲರ್ಸ್ ಕಾಲೋನಿಯ ದಂತ ವೈದ್ಯರೊಬ್ಬರ ಮನೆಯಲ್ಲಿ ಮೊನ್ನೆ ಕಳ್ಳತನ ನಡೆದಿದ್ದು, ಸುಮಾರು 30.67 ಲಕ್ಷ ರೂ.ಗಳ ಮೌಲ್ಯದ ಬೆಳ್ಳಿ - ಬಂಗಾರದ ಆಭರಣ ಮತ್ತು ಇತರೆ ವಸ್ತುಗಳನ್ನು ಕಳ್ಳರು ದೋಚಿದ್ದಾರೆ. ಜಿಲ್ಲಾ ಚಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ದಂತ ವೈದ್ಯ ಡಾ. ಪಿ.ಎಂ.ತಿಪ್ಪೇಸ್ವಾಮಿ ಅವರ ಮನೆಯಲ್ಲಿ ಈ ಕಳ್ಳತನ ನಡೆದಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ತಿಪ್ಪೇಸ್ವಾಮಿ ನೀಡಿದ ದೂರಿನನ್ವಯ ವಿದ್ಯಾನಗರ ಠಾಣೆ ಪೊಲೀಸರು ಮೊಕದ್ದಮೆ ದಾಖಲಿಸಿದ್ದಾರೆ.

ಈ ವಿಷಯ 2023, ಜೂನ್ 7ರ 'ಜನತಾವಾಣಿ' ಸಂಚಿಕೆಯಲ್ಲಿ ಪ್ರಕಟಗೊಂಡಿದ್ದು, ಅದರಲ್ಲಿ ಕಳ್ಳತನವಾಗಿರುವ ವಸ್ತುಗಳ ಮೌಲ್ಯ 30.67 ಲಕ್ಷ ರೂ. ಎನ್ನುವ ಬದಲು 62.53 ಲಕ್ಷ ರೂ. ಎಂದು ಕಣ್ತಪ್ಪಿನಿಂದ ಪ್ರಕಟವಾಗಿತ್ತು.

## ಅತ್ಯಾಚಾರ: ಯುವಕನ ಮೇಲೆ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲು

ದಾವಣಗೆರೆ, ಜೂ. 7- ಹದಿನೇಳು ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿ ಗರ್ಭಿಣಿಯಾಗಲು ಕಾರಣನಾದ ತಾಲ್ಲೂಕಿನ ಯುವಕನೊಬ್ಬನ ಮೇಲೆ ಫೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ನಗರದ ಖಾಸಗಿ ಕಾಲೇಜಿನಲ್ಲಿ ಓದುತ್ತಿದ್ದ ಯುವತಿಗೆ ಕಳೆದೊಂದು ವರ್ಷದಿಂದ ಪರಿಚಯವಾಗಿದ್ದ ಯುವಕನನ್ನು, ಪ್ರೀತಿಸುವುದಾಗಿ ಹೇಳಿ, ಮದುವೆಯಾಗುವುದಾಗಿ ನಂಬಿಸಿ, ಕುಂದುವಾಡ ಕೆರೆ ಹತ್ತಿರದ ನಿರ್ಜನ ಪ್ರದೇಶಕ್ಕೆ ಐದಾರು ಬಾರಿ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದಾನೆ.

ಆರೋಗ್ಯ ಸರಿ ಇಲ್ಲ ಎಂದು ಚಿಕಿತ್ಸೆಗಾಗಿ ಯುವತಿ ಪೋಷಕರೊಂದಿಗೆ ಆಸ್ಪತ್ರೆಗೆ ಬಂದಾಗ ಯುವತಿ ಗರ್ಭಿಣಿಯಾಗಿರುವುದಾಗಿ ವೈದ್ಯರು ಹೇಳಿದ್ದಾರೆ. 18 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಮಗಳನ್ನು ಬಲವಂತವಾಗಿ ಕರೆದುಕೊಂಡು ಹೋಗಿ ಲೈಂಗಿಕ ಅಚ್ಯಾಚಾರ ಮಾಡಿದ ಯುವಕನ ಮೇಲೆ ಕ್ರಮ ಕೈಗೊಳ್ಳುವಂತೆ ಯುವತಿಯ ತಂದೆ ಮಹಿಳಾ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

## ರಾಣೇಬೆನ್ನೂರು : ಎನ್.ಪಿ.ಎಸ್. ಶಾಲೆಯಲ್ಲಿ ಕೋಡಿಂಗ್ ಕಲಿಕೆ

ರಾಣೆಬೆನ್ನೂರು, ಜೂ. 7 – ಇಲ್ಲಿನ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನಲ್ಲಿ (ಎನ್.ಪಿ.ಎಸ್.) ಕಂಪ್ಯೂಟರ್ ಕೋಡಿಂಗ್ ಶಿಕ್ಷಣಕ್ಕೆ ಚಾಲನೆ ನೀಡಲಾಗಿದೆ. ಯು.ಒ.ಎಲ್.ಒ. - ಟೆಕಿ ಸಂಸ್ಥೆ ಸಹಭಾಗಿ ತ್ವದಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ತಂತ್ರಜ್ಞಾನ ನಮ್ಮ ಜೀವನಕ್ಕೆ ಅತ್ಯಗತ್ಯ ವಾಗಿದೆ. ಹೀಗಾಗಿ ವಿದ್ಯಾರ್ಥಿಗಳು ಕೋಡಿಂಗ್ ಕಲಿಯುವ ಅಗತ್ಯವಿದೆ ಎಂದು ಶಾಲೆಯ ಪ್ರಾಂಶುಪಾಲ ಪ್ರಕಾಶ್ ಸಂಗ್ಯೆ ತಿಳಿಸಿದ್ದಾರೆ.

1ರಿಂದ 8ನೇ ತರಗತಿಯ ವಿದ್ಯಾರ್ಥಿಗಳಿಗೆ ಕೋಡಿಂಗ್ ಕಲಿಸಲು ವಿಶೇಷ ರೀತಿಯಲ್ಲಿ ಕಂಪ್ಯೂಟರ್ ರೂಪಿಸಲಾಗಿದೆ ಎಂದು ಶಾಲೆಯ ಅಧ್ಯಕ್ಷ ವಾಸುದೇವ ಸಾ ಲಾದ್ವಾ ತಿಳಿಸಿದ್ದಾರೆ.

## ಬ್ಯೂಟಿ ಪಾರ್ಲರ್‌ಗೆ ಆರ್ಡರ್ ಕೊಡಿಸುವುದಾಗಿ ಹೇಳಿ ಮಹಿಳೆಗೆ ದೈಹಿಕ, ಮಾನಸಿಕ ಹಿಂಸೆ

ದಾವಣಗೆರೆ, ಜೂ. 7- ಬ್ಯೂಟಿ ಪಾರ್ಲರ್‌ಗೆ ಆರ್ಡರ್ ಕೊಡಿಸುವುದಾಗಿ ಹೇಳಿ ಬ್ಯೂಟಿ ಪಾರ್ಲರ್ ನಡೆಸುತ್ತಿದ್ದ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿ, ವಿಡಿಯೋ ಚಿತ್ರೀಕರಿಸಿ, ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಲಾಗಿದೆ ಎಂದು ಕೆ.ಟಿ.ಜೆ. ನಗರದ ವಕೀಲರೊಬ್ಬರ ಮೇಲೆ ಮಂಗಳವಾರ ನಗರ ಮಹಿಳಾ ಠಾಣೆಯಲ್ಲಿ ದೂರು ದಾಖಲಾಗಿದೆ.

**ದೂರು ದಾಖಲು**

ಎಂ.ಸಿ.ಸಿ. ಎ ಬ್ಲಾಕ್‌ನಲ್ಲಿ ಬ್ಯೂಟಿ ಪಾರ್ಲರ್ ನಡೆಸುತ್ತಿದ್ದ ಬ್ಯೂಟಿ ಪಾರ್ಲರ್ ಬಳಿ ವಕೀಲರಾದ ಪ್ರಕಾಶ್ ಬಂದು ಆರ್ಡರ್‌ಗಳನ್ನು ಕೊಡಿಸುವುದಾಗಿ ಹೇಳಿ ಸ್ನೇಹ ಬೆಳೆಸಿದ್ದರು. ನಂತರ ಕೆಟಿಜೆ ನಗರದ ಮನೆಗೆ ಕರೆದುಕೊಂಡು ಹೋಗಿ ಅತ್ಯಾಚಾರ ಮಾಡಿ, ಖಾಸಗಿ ವಿಡಿಯೋ ಮಾಡಿದ್ದಾರೆ.

ನಾನು ವಿಚ್ಛೇದಿತೆಯಾಗಿದ್ದು, ನನ್ನ ಅಸಹಾಯಕತೆ ಅರಿತ ಪ್ರಕಾಶ್, ವೇಶ್ಯಾವಾಟಿಕೆಗೆ ಪ್ರಚೋದಿಸಿದರು. ನಾನು ನಿರಾಕರಿಸಿದ್ದಕ್ಕೆ ನನ್ನ ಮೇಲೆ ಹಲ್ಲೆ ಮಾಡಿದ್ದಾರೆ.

ಬ್ಯೂಟಿ ಪಾರ್ಲರ್‌ಗೆ ನುಗ್ಗಿ ಮನೆಯನ್ನು ಲೀಸ್‌ಗೆ ಹಾಕಿಸಿಕೊಳ್ಳಬೇಕೆಂದು ಇಟ್ಟಿದ್ದ 4 ಲಕ್ಷ ರೂಪಾಯಿ ತೆಗೆದುಕೊಂಡು ಹೋಗಿದ್ದಾರೆ. ಜಾತಿ ನಿಂದನೆ ಮಾಡಿದ್ದಾರೆ ಎಂದು ಮಹಿಳೆ ರಾಧಾ ದೂರು ನೀಡಿದ್ದಾರೆ.

**ಶಿಕ್ಷಕಿಯರು ಬೇಕಾಗಿದ್ದಾರೆ**

**ರಶ್ಮಿ** ಹೆಣ್ಣು ಮಕ್ಕಳ ವಸತಿಯುತ ಶಾಲೆ ದಾವಣಗೆರೆಯಲ್ಲಿ ಕಾರ್ಯನಿರ್ವಹಿಸಲು ಪಿಯುಸಿ ಅಥವಾ ಯಾವುದೇ ಪದವಿ ಪಡೆದ ಮಹಿಳೆಯರು ವಾರ್ಡನ್ ಹುದ್ದೆಗೆ ಹಾಗೂ ಕನ್ನಡ ಮಾಧ್ಯಮದಲ್ಲಿ ಬೋಧನೆ ಮಾಡಲು **BA, B.Sc, B.Ed, B.Com** ವಿದ್ಯಾರ್ಹತೆಯುಳ್ಳ ಶಿಕ್ಷಕಿಯರು ಬೇಕಾಗಿದ್ದಾರೆ.

ಸೂಚನೆ : ಶಿಕ್ಷಕಿಯರಿಗೆ ಉಚಿತ ಊಟ, ವಸತಿ ಸೌಲಭ್ಯವಿರುತ್ತದೆ.

**ಸಂಪರ್ಕಿಸಿ : 82771 67890**

**ಉಚಿತ ಚಿಕಿತ್ಸಾ ಶಿಬಿರ**

ಸುಸಂಸ್ಕೃತ ಭಾರತದ ಭವ್ಯ ಚರಿತ್ರೆಯ ಹಾಗೂ ಸನಾತನ ಧರ್ಮದ ವೈದ್ಯಕೀಯ ಶಾಸ್ತ್ರ ಎಂದೇ ಚಿರಪರಿಚಿತವಾದದ್ದು ಆಯುರ್ವೇದ. ಈ ಚಿಕಿತ್ಸಾ ಶಾಸ್ತ್ರದಲ್ಲಿ ರೋಗಗಳಿಗೆ ನೀಡಿರುವಂತಹ ನಾನಾ ರೀತಿಯ ಔಷಧಿಗಳ ಉಲ್ಲೇಖನೆ, ಈ ಆಧುನಿಕ ಲೋಕಕ್ಕೆ ಸವಾಲು ಒಡ್ಡಿದೆ. ಅಂತಹ ಚಿಕಿತ್ಸೆಯು ಜನ ಸಾಮಾನ್ಯರಿಗೆ ತಲುಪುವ ದೃಷ್ಟಿಯಿಂದ ದಾವಣಗೆರೆಯಲ್ಲಿ ವೈದ್ಯರ ಮತ್ತು ಔಷಧಿಗೆ ಶುಲ್ಕವಿಲ್ಲದೇ ಉಚಿತವಾಗಿ ನೀಡಲಾಗುವುದು.

ಶಿಬಿರ ದಿನಾಂಕ : ದಿನಾಂಕ 05-06-2023 ರಿಂದ 12-06-2023ರವರೆಗೆ.
ಸಮಯ : ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ರವರೆಗೆ ಮತ್ತು ಸಂಜೆ 6 ರಿಂದ 8.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

ANVAYA **ಅನ್ವಯ ಆಯುರ್ವೇದ ಆಸ್ಪತ್ರೆ**

ವಿಳಾಸ : #1981, 10ನೇ ಕ್ರಾಸ್, ಎಂ.ಸಿ.ಸಿ. 'ಎ' ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ.
ಫೋ. 08192-252228, ಮೊ. 8618642929

ವಿ.ಸೂ. : ಪ್ರತಿದಿನ ಶಿಬಿರಕ್ಕೆ ಹೆಸರು ಮೊದಲೇ ನೊಂದಾಯಿಸಿಕೊಳ್ಳಬೇಕು. ಹೆಸರು ನೊಂದಾಯಿಸಿದ ಒಬ್ಬರಿಗೆ (ದಿನಕ್ಕೆ ಒಂದು) ಉಚಿತ ಚಿಕಿತ್ಸೆ ನೀಡಲಾಗುವುದು.

**ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ**
**Numero Astrologer & Palmistry**



ವಂಶಪಾರಂಪರಿಕ ಮಾಂತ್ರಿಕ ಜ್ಯೋತಿಷ್ಯರು, ನಂ.1 ವಶೀಕರಣ ಸ್ಪೆಷಲಿಸ್ಟ್, ಇಷ್ಟಪಟ್ಟವರು ನಿಮ್ಮಂತಗಲು, ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ

ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 5 ದಿನಗಳೊಳಗೆ ಪರಿಹಾರ ಮಾಡುತ್ತಾರೆ. ಇಂದೇ ಭೇಟಿ ಕೊಡಿ

ವಿಳಾಸ: **ಪಂ. ಜಿ.ವಿ. ಭಟ್ಟರ್**
ಆಹಾರ್ ಹೋಟೆಲ್, ಗಾಂಧಿ ಸರ್ಕಲ್, ದಾವಣಗೆರೆ.
ಮೊಬೈಲ್ : **94481 78626, 89716 99826**

# ಪಿಎಂ ಕಿಸಾನ್ ಸಮ್ಮಾನ್ ನಿಧಿ ಪಡೆಯಲು ಇ-ಕೆವೈಸಿ ಕಡ್ಡಾಯ

ದಾವಣಗೆರೆ, ಜೂ. 7- ಕೇಂದ್ರ ಸರ್ಕಾರದ ಮಹತ್ವಾಂಕ್ಷಿ ಪಿ. ಎಂ. ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಧನಸಹಾಯ ಪಡೆಯಬೇಕಾದಲ್ಲಿ ರೈತರು ಇ-ಕೆವೈಸಿ ಮಾಡಿಸುವುದು ಕಡ್ಡಾಯವಾಗಿರುತ್ತದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಈ ವಿಷಯವನ್ನು ರೈತರಿಗೆ ವಿಭಿನ್ನ ಮಾಧ್ಯಮಗಳ ಮೂಲಕ ಕಳೆದ ಒಂದು ವರ್ಷದಿಂದ ತಿಳಿಸುತ್ತಾ ಬಂದರೂ ಸಹ ಜಿಲ್ಲೆಯಲ್ಲಿ ಇನ್ನೂ 55177 ರೈತರು ಇ-ಕೆವೈಸಿ ಮಾಡಿಸಿರುವುದಿಲ್ಲ. ಸದರಿ ರೈತರು ಇ-ಕೆವೈಸಿ ಮಾಡಿಸದಿದ್ದಲ್ಲಿ ಆರ್ಥಿಕ ಧನ ಸಹಾಯ ಸ್ಥಗಿತಗೊಳಿಸಲಾಗುತ್ತದೆ.

ಇ-ಕೆವೈಸಿ ಮಾಡಿಸಿಕೊಳ್ಳದ ಫಲಾನುಭವಿಗಳಿಗೆ ಮುಂದೆ ಕೇಂದ್ರ ಸರ್ಕಾರದಿಂದ ಆರು ಸಾವಿರ ಹಾಗೂ ರಾಜ್ಯ ಸರ್ಕಾರದಿಂದ 4 ಸಾವಿರ ರೂಪಾಯಿಗಳ ಆರ್ಥಿಕ ಸೌಲಭ್ಯ ದೊರೆಯುವುದಿಲ್ಲ. ಈವರೆಗೂ ಇ-ಕೆವೈಸಿ ಮಾಡಿಸದ ರೈತ ಫಲಾನುಭವಿಗಳು ತಮ್ಮ ಆಧಾರ್ ಸಂಖ್ಯೆಗೆ ಜೋಡಣೆಯಾಗಿರುವ ಮೊಬೈಲ್ ಸಂಖ್ಯೆಯೊಂದಿಗೆ ಈ ಕೆಳಗೆ ತಿಳಿಸಿದ ವಿಧಾನಗಳಲ್ಲಿ ಯಾವುದಾದರೂ ಒಂದು ಪ್ರಕ್ರಿಯೆಯನ್ನು ಅನುಸರಿಸ ಬಹುದಾಗಿದೆ.

ಫಲಾನುಭವಿಗಳು ಸ್ವತಃ ತಾವೇ http://pm-kisan.gov.in ಪಿಎಂ ಕಿಸಾನ್ ಪೋರ್ಟಲ್ ನ farmers corner ನ e-KYC ಅವಕಾಶದಡಿ ಆಧಾರ್ ಸಂಖ್ಯೆಯನ್ನು ನಂತರ ಆಧಾರ್ ಸಂಖ್ಯೆಯೊಂದಿಗೆ ಜೋಡಣೆಯಾದ ಮೊಬೈಲ್ ಸಂಖ್ಯೆಯನ್ನು ದಾಖಲಿಸಬೇಕು. ಈ ಪ್ರಕ್ರಿಯೆಯ ನಂತರ ಸ್ವೀಕೃತವಾದ ಓಟಿಪಿಯನ್ನು ದಾಖಲಿಸಿ, SUBMIT OTP ಎಂಬ ಬಟನ್ ಒತ್ತುವ ಮೂಲಕ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು. ಇಲ್ಲವೇ ಸಮೀಪದ ಗ್ರಾಮ ಒನ್ ಕೇಂದ್ರ, ಸಾಮಾನ್ಯ ಗ್ರಾಹಕ ಸೇವಾ ಕೇಂದ್ರಗಳಿಗೆ ಭೇಟಿ ನೀಡಿ ಬಯೋಮೆಟ್ರಿಕ್ ಅಥವಾ ಓಟಿಪಿ ಮೂಲಕ ಇ-ಕೆವೈಸಿ ಮಾಡಿಸಬಹುದು. ಇ-ಕೆವೈಸಿ ಮಾಡಿಸದೇ ಇರುವ ಎಲ್ಲಾ ರೈತರು ಈ ಕೂಡಲೇ ಕ್ರಮ ವಹಿಸಬೇಕು. ಹೆಚ್ಚಿನ ಮಾಹಿತಿಗಾಗಿ ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರಗಳನ್ನು ಸಂಪರ್ಕಿಸಲು ಕೋರಿದೆ

## 'ಕಲ್ಲಿದ್ದಲು ಶೋಧ' ವಿಸ್ತರಣೆ

ನವದೆಹಲಿ, ಜೂ. 7 – ಕಲ್ಲಿದ್ದಲು ಶೋಧ ಯೋಜನೆಯನ್ನು ವಿಸ್ತರಿಸಿರುವ ಕೇಂದ್ರ ಸರ್ಕಾರ, ಇದಕ್ಕಾಗಿ 2,980 ಕೋಟಿ ರೂ. ಬಿಡುಗಡೆ ಮಾಡಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆದ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಪಂಚವಾರ್ಷಿಕ ಅವಧಿಗೆ ಅನುಗುಣವಾಗಿ 2025-26ರವರೆಗೆ ಯೋಜನೆಯನ್ನು ವಿಸ್ತರಿಸಲಾಗಿದೆ.

# ಮೈಕ್ರೋ ಪ್ಲಾಸ್ಟಿಕ್‌ನಿಂದ ದೂರವಿರಿ: ಡಾ.ಶಾಂತಾ ಭಟ್



ದಾವಣಗೆರೆ, ಜು.7- ನಮಗೇ ಗೊತ್ತಿಲ್ಲದ ರೀತಿಯಲ್ಲಿ ನಾವೆಲ್ಲರೂ ಮೈಕ್ರೋ ಪ್ಲಾಸ್ಟಿಕ್ ಅನ್ನು ವಾತಾವರಣದೊಳಗೆ ಅಪಾರ ಪ್ರಮಾಣದಲ್ಲಿ ಸೇರಿಸುತ್ತಿದ್ದೇವೆ. ಇದರಿಂದ ಮನುಷ್ಯ ಹಾಗೂ ಪ್ರಾಣಿಗಳ ಆರೋಗ್ಯದ ಮೇಲೆ ಸಾಕಷ್ಟು ದುಷ್ಪರಿಣಾಮ ಉಂಟಾಗುತ್ತಿದೆ ಎಂದು ಪರಿಸರ ಪ್ರೇಮಿ ಡಾ. ಶಾಂತಾ ಭಟ್ ಹೇಳಿದರು.

ನಗರದ ಕುಂದುವಾಡ ಕೆರೆಯಲ್ಲಿ ಬುಧವಾರ ಕುಂದುವಾಡ ಕೆರೆ ವಾಯು ವಿಹಾರಿಗಳ ಬಳಗ ಮತ್ತು ಸಪ್ತಗಿರಿ ಪದವಿಪೂರ್ವ ಕಾಲೇಜು ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ವನ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, 0.5 ಎಂಎಂ ಗಿಂತಲೂ ಕಡಿಮೆ ಉದ್ದ, ದಪ್ಪ, ಅಗಲವಿರುವ ಕಣ್ಣಿಗೆ ಕಾಣದಂತಹ ಪ್ಲಾಸ್ಟಿಕ್‌ನ ಕಣಗಳು ಯಾವುದೇ ರೂಪದಲ್ಲಾದರೂ ದೇಹ ಸೇರುವ ಅಪಾಯವಿದೆ ಎಂದರು.

ಚಿಕ್ಕದಾದ ಈ ಮೈಕ್ರೋ ಪ್ಲಾಸ್ಟಿಕ್ ಕಣಗಳು ಮನುಷ್ಯ ಮಾತ್ರವಲ್ಲದೆ ಯಾವುದೇ ಪ್ರಾಣಿ, ಸಸ್ಯದ ದೇಹ ಸೇರುವ ಸಾಮರ್ಥ್ಯ ಹೊಂದಿರುತ್ತವೆ. ಅದು ಸಸ್ಯಗಳಲ್ಲಿ ಸುಲಭವಾಗಿ ಬೆರೆತು, ನಾವು ಸೇವಿಸುವ ಹಣ್ಣು, ತರಕಾರಿಗಳಲ್ಲಿ ಸೇರುತ್ತದೆ. ನೀರಿನ ಮೂಲಕ ಜಲಚರಗಳ ದೇಹ ಸೇರುತ್ತದೆ. ಬಳಿಕ ಹಣ್ಣು ತರಕಾರಿ, ಮೀನುಗಳನ್ನು ಆಹಾರ ರೂಪದಲ್ಲಿ ಸೇವಿಸುವ ವ್ಯಕ್ತಿಯ ದೇಹವನ್ನು ಮೈಕ್ರೋ ಪ್ಲಾಸ್ಟಿಕ್ ಸೇರುತ್ತದೆ. ಮನುಷ್ಯನ ದೇಹದ ಟಿಷ್ಯುಗಳನ್ನು ಪರೀಕ್ಷೆ ಮಾಡಿದರೆ ಒಂದು ಜೀವ ಕಣದಲ್ಲಿ 16,000 ಪಾರ್ಟಿಕಲ್ ಮೈಕ್ರೋ ಪ್ಲಾಸ್ಟಿಕ್‌ಗಳು ಸಿಗುತ್ತವೆ. ಈ ಜೀವಕೋಶಗಳು ಸೇರಿ ನಮ್ಮ ಚಯಾಪಚಯ (ಮೆಟಬಾಲಿಸಂ), ಅನುವಂಶೀಯ ಕ್ರಮಾವಳಿಯನ್ನೇ ಬದಲಿಸುವ ಹಾಗೂ ಹಾರ್ಮೋನ್ ವ್ಯವಸ್ಥೆಯನ್ನು ಪಲ್ಲಟಗೊಳಿಸುವ ಸಾಮರ್ಥ್ಯ ಈ ಮೈಕ್ರೋ ಪ್ಲಾಸ್ಟಿಕ್ ಕಣಗಳಿಗಿದೆ ಎಂದು ಎಚ್ಚರಿಸಿದರು.

**ಸಿಂಥೆಟಿಕ್ ಬಿಡಿ, ಹತ್ತಿ ಹಿಡಿ :**

ನಾವು ಇಂದು ಎದುರಿಸುತ್ತಿರುವ ಹಲವಾರು ಅನಾರೋಗ್ಯ ತೊಂದರೆಗಳಿಗೆ ಮೈಕ್ರೋ ಪ್ಲಾಸ್ಟಿಕ್ ಮೂಲ ಕಾರಣವಾಗಿದೆ. ಬೊಜ್ಜು, ಥೈರಾಯ್ಡ್, ಮಧುಮೇಹ, ಅಧಿಕ ರಕ್ತದೊತ್ತಡ, ಅಲರ್ಜಿ ಮಾತ್ರವಲ್ಲದೆ ಎಲ್ಲ ರೀತಿಯ ಮಾರಣಾತಿಕ ಕಾಯಿಲೆಗಳಿಗೂ ಈ ಮೈಕ್ರೋ ಪ್ಲಾಸ್ಟಿಕ್ ಕಾರಣವಾಗಿದೆ. ಇದರಿಂದ ರಕ್ಷಣ ಪಡೆಯಲು ಒಂದು ಸುಲಭ ಮಾರ್ಗವಿದೆ. ಅದೇನೆಂದರೆ, ಸಿಂಥೆಟಿಕ್ ಉಡುಪುಗಳನ್ನು ತ್ಯಜಿಸಿ, ಮಣ್ಣಿನಲ್ಲಿ ಕೊಳೆಯುವಂತಹ ಹತ್ತಿ, ರೇಷ್ಮೆ ಮತ್ತು ಉಣ್ಣೆ ಉಡುಪುಗಳನ್ನು ಧರಿಸಬೇಕು ಎಂದು ಡಾ. ಶಾಂತಾ ಭಟ್ ಸಲಹೆ ನೀಡಿದರು.

ನಗರದ ಖ್ಯಾತ ವೈದ್ಯ ಡಾ. ಸುರೇಂದ್ರ ಮಾತನಾಡಿ, ನಾವೆಲ್ಲರೂ ಮಾತನಾಡುವುದು ಹೆಚ್ಚು. ಆದರೆ ಆಡಿದ್ದನ್ನು ಮಾಡಿ ತೋರಿಸುವುದು ತೀರಾ ಕಡಿಮೆ. ಹೀಗಾಗಿ ಪರಿಸರ ರಕ್ಷಣೆ ಕುರಿತು ಕೇವಲ ಮಾತನಾಡದೆ, ರಕ್ಷಣೆ ಮಾಡಿ ತೋರಿಸಬೇಕೆಂದರು. ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರಿಗೆ ಪರಿಸರದ ಬಗ್ಗೆ ಕಾಳಜಿ ಹೆಚ್ಚಿದೆ. ಇದು ಆಶಾದಾಯಕ ಬೆಳವಣಿಗೆ ಎಂದರು.

ಅರಣ್ಯ ಇಲಾಖೆ ಅಧಿಕಾರಿ ಎಸ್.ಕೆ. ದೇವರಾಜ್, ದೂಡ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಪಾಲಿಕೆ ಸದಸ್ಯೆ ಶಿಲ್ಪಾ ಜಯಪ್ರಕಾಶ್, ಸಪ್ತಗಿರಿ ಶಿಕ್ಷಣ ಸಂಸ್ಥೆಯ ರಾಮಮೂರ್ತಿ, ವಾಯುವಿಹಾರಿಗಳ ಬಳಗದ ಈಶ್ವರ್ ಸಿಂಗ್, ಬಿ.ಎಚ್. ಶಿವಕುಮಾರ್ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಸಮರ್ಪಕ ಬಿತ್ತನೆ ಬೀಜ ಪೂರೈಸಿ

## ಕೃಷಿ ಇಲಾಖೆ ಅಧಿಕಾರಿಗಳಿಗೆ ಶಾಸಕ ಕೆ.ಎಸ್.ಬಸವಂತಪ್ಪ ಸೂಚನೆ



ದಾವಣಗೆರೆ, ಜೂ. 7- ತಾಲ್ಲೂಕಿನ ಆನಗೋಡು ಬಿತ್ತನೆ ಬೀಜ ಮಾರಾಟ ಕೇಂದ್ರಕ್ಕೆ ಬುಧವಾರ ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ಭೇಟಿ ನೀಡಿ, ಕೃಷಿ ಇಲಾಖೆ ಅಧಿಕಾರಿಗಳು ರೈತರಿಗೆ ಸಮರ್ಪಕವಾಗಿ ಬಿತ್ತನೆ ಬೀಜ, ರಸಗೊಬ್ಬರ ವಿತರಣೆ ಮಾಡಲಾಗುತ್ತಿದ್ದಾರೆಯೇ ಎಂಬುದರ ಪರಿಶೀಲನೆ ನಡೆಸಿದರು.

ಬಳಿಕ ನಡೆದ ಬಿತ್ತನೆ ಬೀಜ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮುಂಗಾರು ಆರಂಭವಾಗಿದ್ದು, ರೈತರಿಗೆ ಒಳ್ಳೆಯ ಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ಒದಗಿಸಬೇಕು. ಯಾವುದೇ ಕಾರಣಕ್ಕೂ ವಿಳಂಬವಾಗಬಾರದು. ಸಮರ್ಪಕವಾಗಿ ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರ ಒದಗಿಸಬೇಕು ಎಂದು ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ನೀಡದಿದ್ದರೆ, ನನ್ನ ಗಮನಕ್ಕೆ ತಂದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಮುಂಗಾರು ಸ್ವಲ್ಪ ವಿಳಂಬವಾಗಿದ್ದು, ಮುಂದಿನ ದಿನಗಳಲ್ಲಿ ಮಳೆ ಆರಂಭವಾಗಲಿದೆ. ಈಗಿನಿಂದಲೇ ರೈತರಿಗೆ ಸಮರ್ಪಕವಾಗಿ ಬಿತ್ತನೆ ಬೀಜ, ರಸಗೊಬ್ಬರು ವಿತರಿಸಿದರೆ, ಅವರು ದಾಸ್ತಾನು ಮಾಡಿಕೊಂಡು ಮಳೆ ಬಂದಾಗ ಬಿತ್ತನೆ ಮಾಡಲು ಅನುಕೂಲವಾಗಲಿದೆ. ಕೃಷಿ ಇಲಾಖೆ ಅಧಿಕಾರಿಗಳು ಇತ್ತ ಕಡೆ ಹೆಚ್ಚು ಗಮನ ಹರಿಸಬೇಕೆಂದು ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಜಂಟಿ ಕೃಷಿ ಉಪನಿರ್ದೇಶಕ ಶ್ರೀನಿವಾಸ್ ಚಿಂತಾಲ್, ಕೃಷಿ ಇಲಾಖೆ ಅಧಿಕಾರಿಗಳಾದ ಆರ್.ತಿಪ್ಪೇಸ್ವಾಮಿ, ಶ್ರೀಧರಮೂರ್ತಿ, ಶ್ರೀನಿವಾಸ್, ಸುರೇಶ್, ರೇಷ್ಮಾ, ಆನಗೋಡು ಗ್ರಾಪಂ ಅಧ್ಯಕ್ಷ ಮಾದಪ್ಪ, ಉಪಾಧ್ಯಕ್ಷ ನಸ್ರುದ್ದೀನ್, ಸದಸ್ಯರಾದ ಬಸವರಾಜ್, ಕರಿಬಸಪ್ಪ, ಸಾಧಿಕ್, ಕಂದನಕೋವಿ ದ್ಯಾಮನಗೌಡ, ಹನುಮಂತಪ್ಪ ಹೊನ್ನೂರು ಸೇರಿದಂತೆ ಗ್ರಾಮಸ್ಥರು, ರೈತರು ಭಾಗವಹಿಸಿದ್ದರು.

# ಬಿಎಸ್ಸೆನ್ನೆಲ್‌ಗೆ 89,047 ಕೋಟಿ ರೂ. ಪ್ಯಾಕೇಜ್ ನೀಡಿದ ಕೇಂದ್ರ

ನವದೆಹಲಿ, ಜೂ. 7 – ಬಿ.ಎಸ್.ಎನ್.ಎಲ್. ಪುನಶ್ಚೇತನಕ್ಕಾಗಿ 89,047 ಕೋಟಿ ರೂ.ಗಳ ಮೂರನೇ ಪ್ಯಾಕೇಜ್ ನೀಡಲು ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಈ ಪ್ಯಾಕೇಜ್‌ನಲ್ಲಿ 4ಜಿ ಹಾಗೂ 5ಜಿ ಸ್ಪೆಕ್ಟ್ರಮ್ ಸಹ ಸೇರಿದೆ.

ಇದೇ ವೇಳೆ ಬಿ.ಎಸ್.ಎನ್.ಎಲ್.ನ ಅನುಮೋದಿತ ಬಂಡವಾಳವನ್ನು 1.50 ಲಕ್ಷ ಕೋಟಿ ರೂ.ಗಳಿಂದ 2.10 ಲಕ್ಷ ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬಿ.ಎಸ್.ಎನ್.ಎಲ್.ಗೆ ಸ್ಪೆಕ್ಟ್ರಮ್‌ಗಳನ್ನು ನೀಡಿರುವುದರಿಂದ ದೇಶಾದ್ಯಂತ 4ಜಿ ಹಾಗೂ 5ಜಿ ಸೇವೆಗಳನ್ನು ಆರಂಭಿಸಲು ಸಾಧ್ಯವಾಗಲಿದೆ. ಸರ್ಕಾರ ಈ ಹಿಂದೆ 2019ರಲ್ಲಿ ಬಿ.ಎಸ್.ಎನ್.ಎಲ್. ಹಾಗೂ ಎಂ.ಟಿ.ಎನ್.ಎಲ್.ಗಳಿಗೆ 69 ಸಾವಿರ ಕೋಟಿ ರೂ. ಪ್ಯಾಕೇಜ್ ನೀಡಿತ್ತು. ನಂತರ 2022ರಲ್ಲಿ 1.64 ಲಕ್ಷ ಕೋಟಿ ರೂ.ಗಳ ಪ್ಯಾಕೇಜ್ ನೀಡಿತ್ತು.

# ರೈಲು ದುರಂತ : ಪ್ರಧಾನಿ ವಿರುದ್ಧ ಎಫ್.ಐ.ಆರ್.ಗೆ ಕಾಂಗ್ರೆಸ್ ಒತ್ತಾಯ

ನವದೆಹಲಿ, ಜೂ. 7- ಒಡಿಶಾದ ಬಾಲಸೋರ್ ರೈಲು ದುರಂತಕ್ಕೆ ಸಂಬಂಧಿಸಿದಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ವಿರುದ್ಧ ಎಫ್.ಐ.ಆರ್. ದಾಖಲಿಸುವಂತೆ ಕಾಂಗ್ರೆಸ್ ಒತ್ತಾಯಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ವಕ್ತಾರ ಅಜಯ್ ಕುಮಾರ್, 288 ಜನರ ಸಾವಿಗೆ ಕಾರಣವಾದ ರೈಲು ಅಪಘಾತದ ಹಿಂದೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸಂಚಿದೆ. ನಂತರ ಅವರು ನಾಟಕ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಪ್ರಧಾನ ಮಂತ್ರಿಯೂ ಈ ಸಂಚಿನಲ್ಲಿ ಭಾಗಿಯಾಗಿದ್ದಾರೆ. ಈ ಬಗ್ಗೆ ತನಿಖೆ ನಡೆಸಬೇಕು ಎಂದವರು ಒತ್ತಾಯಿಸಿದ್ದಾರೆ.

# ಕಳಪೆ ಬಿತ್ತನೆ ಬೀಜದ ಬಗ್ಗೆ ಎಚ್ಚರಿಕೆ

## ಹರಿಹರದಲ್ಲಿ ಬಿತ್ತನೆ ಬೀಜ ವಿತರಣೆಯಲ್ಲಿ ಶಾಸಕ ಬಿ.ಪಿ. ಹರೀಶ್



ಹರಿಹರ, ಜೂ. 7 - ರೈತರಿಗೆ ಸರ್ಕಾರವು ರಿಯಾಯ್ತಿ ದರದಲ್ಲಿ ನೀಡುವ ಬಿತ್ತನೆ ಬೀಜಗಳನ್ನು ಪರೀಕ್ಷೆ ಮಾಡಿ ವಿತರಣೆ ಮಾಡಬೇಕು. ಕಳಪೆ ಬೀಜಗಳ ವಿತರಣೆಯಾಗಿ ರೈತರು ಸಂಕಷ್ಟ ಎದುರಿಸಿದರೆ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು ಎಂದು ಶಾಸಕ ಬಿ.ಪಿ. ಹರೀಶ್ ಎಚ್ಚರಿಕೆ ನೀಡಿದರು.

ನಗರದ ಎಪಿಎಂಸಿ ಆವರಣದಲ್ಲಿ ಇರುವ ರೈತ ಸಂಪರ್ಕ ಕೇಂದ್ರದಲ್ಲಿ ನಡೆದ ಬಿತ್ತನೆ ಬೀಜ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿತರಣೆಯಲ್ಲಿ ಯಾವುದೇ ದುರ್ಬಳಕೆ, ತಾರತಮ್ಯ ಆಗದಂತೆ ವ್ಯವಸ್ಥೆ ಮಾಡಬೇಕು. ಸಂಪರ್ಕ ಕೇಂದ್ರಕ್ಕೆ ಬರುವ ರೈತರೊಂದಿಗೆ ಅಧಿಕಾರಿಗಳು ಸೌಜನ್ಯದಿಂದ ವರ್ತಿಸಿ ತಾಲ್ಲೂಕಿನ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಸೂಚಿಸಿದರು. ತಾಲ್ಲೂಕಿನ ಕೆಲ ಭಾಗಗಳಲ್ಲಿ ಮಾತ್ರ ಮಳೆಯಾಗಿದೆ. ರೈತರು ಜಮೀನುಗಳನ್ನು ಸಿದ್ಧಪಡಿಸಿ ಕೊಂಡಿದ್ದಾರೆ. ಅವರ ಅನುಕೂಲಕ್ಕೆ ತಕ್ಕ ಹಾಗೆ ಅಧಿಕಾರಿಗಳು ಬೀಜ ವಿತರಣೆ ಮಾಡಬೇಕು ಎಂದೂ ತಿಳಿಸಿದರು.

ಸಹಾಯಕ ಕೃಷಿ ನಿರ್ದೇಶಕ ನಾರನಗೌಡ, ಕೃಷಿ ಅಧಿಕಾರಿಗಳಾದ ಮಲ್ಲಿಕಾ ರ್ಜುನ್, ವಿಕಾಸ್, ಅಕೌಂಟೆಂಟ್ ಪ್ರಸಾದ್, ಬಿಜೆಪಿ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಪ್ರಧಾನ ಕಾರ್ಯದರ್ಶಿ ಮಂಜಾನಾಯ್ಕ ಹೆಚ್., ಮುಖಂಡರಾದ ವಿನಾಯಕ ಆರಾಧ್ಯಮಠ, ಹನಗವಾಡಿ ಮಂಜುನಾಥ, ಅದ್ವೈತ್ ಶಾಸ್ತ್ರಿ, ಅಶೋಕ ಕುಂಬಳೂರು, ಗಣೇಶ್, ರೈತರಾದ ಮೈಲಪ್ಪ ಎ.ಕೆ. ಬನ್ನಿಕೋಡು, ಅಶೋಕ ರಾಜನಹಳ್ಳಿ, ಭೀಮಪ್ಪ ಮತ್ತಿತರರಿದ್ದರು.

## ಸರ್ವೋತ್ತಮ ಸೇವಾ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಜೂ. 7 - ರಾಜ್ಯ ಸರ್ಕಾರದ ಅಧಿಕಾರಿ / ನೌಕರರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ಪಡೆಯಲು ನಾಮ ನಿರ್ದೇಶನಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಇದೇ ದಿನಾಂಕ 15 ರವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

# ವಿಯೆಟ್ನಾಂ ಟ್ಯಾಲೆಂಟ್ ಶೋ ತೀರ್ಪುಗಾರರಾಗಿ ವಿದುಷಿ ಮಾಧವಿ



ದಾವಣಗೆರೆ, ಜೂ. 7- ಇದೇ 11ರಂದು ವಿಯೆಟ್ನಾಂ ದೇಶದ ಹೋಚಿಮಿನ್ ನಗರದ ವಿಯೋಗ ವರ್ಲ್ಡ್ ವತಿಯಿಂದ ನಡೆಯುತ್ತಿರುವ 5 ನೇ ಆವೃತ್ತಿಯ 'ದಿ ವಿಯೋಗ ವರ್ಲ್ಡ್ ಸ್ಟಾರ್ ಆರ್ಟಿಸ್ಟಿಕ್ ಯೋಗ ಅಂಡ್ ಇಂಟರ್‌ನ್ಯಾಷನಲ್ ಕಲ್ಚರಲ್ ಎಕ್ಸ್‌ಚೇಂಜ್' ಕಾರ್ಯಕ್ರಮದ ಅಂತರರಾಷ್ಟ್ರೀಯ ತೀರ್ಪುಗಾರರಾಗಿ ನಗರದ ನಮನ ಅಕಾಡೆಮಿಯ ಗುರುಗಳಾದ ವಿದುಷಿ ಶ್ರೀಮತಿ ಮಾಧವಿ ಡಿ. ಕೆ. ಆಯ್ಕೆಯಾಗಿದ್ದಾರೆ.

ಜೂನ್ 11ರಂದು ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ನಡೆಯುತ್ತಿರುವ ಸ್ಪರ್ಧೆಗೆ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸುವುದರೊಂದಿಗೆ ಏಕವ್ಯಕ್ತಿ ಶಾಸ್ತ್ರೀಯ ನೃತ್ಯ ಪ್ರದರ್ಶನ ಹಾಗೂ ನಮನ ಅಕಾಡೆಮಿಯ ಶಿಷ್ಯರೊಂದಿಗೆ ಅಂತರರಾಷ್ಟ್ರೀಯ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದಲ್ಲಿ ಜನಪದ ಹಾಗೂ ಲಘು ಶಾಸ್ತ್ರೀಯ ನೃತ್ಯಗಳನ್ನು ನೀಡಲಿದ್ದಾರೆ.

ಇವರ ಪ್ರಯಾಣ, ತೀರ್ಪುಗಾರಿಕೆ ಹಾಗೂ ನೃತ್ಯ ಪ್ರದರ್ಶನ ಯಶಸ್ವಿಯಾಗಿ ನಡೆಯಲಿ ಎಂದು ಶಾಸಕ ಡಾ|| ಶಾಮನೂರು ಶಿವಶಂಕರಪ್ಪ, ನೂತನ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ದಿನೇಶ್ ಕೆ ಶೆಟ್ಟಿ, ಕುಟುಂಬ ಸದಸ್ಯರು ಮತ್ತು ಇತರರು ಹಾರೈಸಿದ್ದಾರೆ.

## ಗೋಹತ್ಯೆ ತಡೆ, ಭೂ ಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆಗಳ ಮರು ಪರಿಶೀಲನೆ

ಬೆಂಗಳೂರು, ಜೂ. 7 – ಗೋಹತ್ಯೆ ನಿರ್ಬಂಧ ಕಾಯ್ದೆ, ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ಹಾಗೂ ಎ.ಪಿ.ಎಂ.ಸಿ. ಕಾಯ್ದೆಗಳನ್ನು ಪರಿಶೀಲಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ತಮ್ಮನ್ನು ಭೇಟಿ ಮಾಡಿದ ರೈತರೊಂದಿಗೆ ಮಾತನಾಡಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಈ ಭರವಸೆ ನೀಡಿದ್ದಾರೆ. ಕೇಂದ್ರ ಸರ್ಕಾರ ಕಾರ್ಪೊರೇಟ್ ಕೃಷಿ ಜಾರಿಗೆ ತಂದಿರುವುದರಿಂದ ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ತೊಂದರೆಯಾಗುತ್ತದೆ ಎಂದು ಕೃಷಿಕರು ತಿಳಿಸಿದ್ದಾರೆ. ಕೃಷಿ ವಿಷಯಗಳ ಕುರಿತು ಚರ್ಚಿಸಲು ಪ್ರತ್ಯೇಕ ಸಭೆ ನಡೆಸಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

# ಜಾತಿಗಣತಿ ವರದಿ ಅನುಷ್ಠಾನಕ್ಕೆ ನಿರ್ಧಾರ



ಬೆಂಗಳೂರು, ಜೂ. 7 - ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ವರದಿಯನ್ನು ಸ್ವೀಕರಿಸಿ ಅದನ್ನು ಅನುಷ್ಠಾನಗೊಳಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ.

ಶೈಕ್ಷಣಿಕ ಸಮೀಕ್ಷಾ ವರದಿಯನ್ನು ದತ್ತಾಂಶದ ಆಧಾರದಲ್ಲಿ ವಿವಿಧ ಸಮುದಾಯಗಳಿಗೆ ಅನುಕೂಲ ಮಾಡಿಕೊಡುವುದಾಗಿ ಅವರು ತಿಳಿಸಿದ್ದಾರೆ. ಗೃಹ ಕಚೇರಿ ಕೃಷ್ಣಾದಲ್ಲಿ ಕರ್ನಾಟಕ ಶೋಷಿತ ವರ್ಗಗಳ ಮಹಾ ಒಕ್ಕೂಟದ ನಿಯೋಗವನ್ನು ಭೇಟಿಯಾದ ಬಳಿಕ ಮಾತನಾಡಿದ ಅವರು, ಹಿಂದಿನ ಬಾರಿ ನನ್ನ ಸರ್ಕಾರದ ಅವಧಿಯಲ್ಲಿ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಹಮ್ಮಿಕೊಳ್ಳಲಾದ ಜಾತಿವಾರು ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗೆ ಕಾಯಕಲ್ಪ ನೀಡುವ ಭರವಸೆ ನೀಡಿದ್ದಾರೆ. ಉದ್ಯೋಗ, ಶಿಕ್ಷಣ, ಸರ್ಕಾರದ ವಿವಿಧ ಯೋಜನೆಗಳು ಸಂಬಂಧಪಟ್ಟ ಫಲಾನುಭವಿಗಳಿಗೆ ತಲುಪಲು ವೈಜ್ಞಾನಿಕ ಹಾಗೂ ನಿಖರ ಮಾಹಿತಿ ಅಗತ್ಯವಿದೆ. ಅಂತಹ ಮಾಹಿತಿ ಸಿದ್ಧಪಡಿಸಲೆಂದೇ ಕಾಂತರಾಜ್ ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಆಯೋಗದ ಸಮಿತಿ ನೇಮಕ ಮಾಡಿದ್ದು, ಅವರು ವರದಿ ಸಿದ್ಧಪಡಿಸಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು.

ಈ ವರದಿ ಸ್ವೀಕರಿಸಿ ಅನುಷ್ಠಾನಗೊಳಿಸುವಷ್ಟರಲ್ಲಿ ನಮ್ಮ ಸರ್ಕಾರ ಬದಲಾಯಿತು. ನಂತರ ಬಂದ ಮೈತ್ರಿ ಸರ್ಕಾರದಲ್ಲೂ ಜಾರಿಗೊಳಿಸಲಾಗಲಿಲ್ಲ. ಆನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಮೂಲೆಗೆಸೆದಿತ್ತು. ಜಾತಿವಾರು ಸಮೀಕ್ಷೆಯಿಂದ ಜನರಿಗೆ ಒದಗಿಸಬೇಕಾದ ಸೌಲಭ್ಯಗಳು ಮೊದಲಾದ ಅಂಶಗಳ ಕುರಿತು ದತ್ತಾಂಶ ಲಭ್ಯವಾಗುವುದು.

ಮೀಸಲಾತಿ ಮತ್ತಿತರೆ ಸೌಲಭ್ಯಗಳನ್ನು ಒದಗಿಸಲು ಒಂದು ವೈಜ್ಞಾನಿಕ ವರದಿ ಸರ್ಕಾರಕ್ಕೆ ಅಗತ್ಯವಿದೆ. ಇಂತಹ ವರದಿಯನ್ನು ಹಿಂದುಳಿದ ವರ್ಗಗಳ ಆಯೋಗ ನೀಡಿದೆ. ಇದನ್ನೇ ಮುಂದಿಟ್ಟುಕೊಂಡು ಬಿಜೆಪಿ ಸರ್ಕಾರವು ಮೀಸಲಾತಿಯಲ್ಲಿ ಸೃಷ್ಟಿಸಿದ ಗೊಂದಲ ನಿವಾರಣೆ ಮಾಡಲಾಗುವುದು. ಇಲ್ಲವಾದರೆ ಯಾರಿಗೂ ಸಾಮಾಜಿಕ ನ್ಯಾಯ ಒದಗಿಸಲು ಸಾಧ್ಯವಾಗುವುದಿಲ್ಲ ಎಂದು ಮುಖ್ಯಮಂತ್ರಿ ತಿಳಿಸಿದರು.

ಈ ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ 162 ಕೋಟಿ ರೂ. ವೆಚ್ಚದಲ್ಲಿ ಹಿಂದುಳಿದ ವರ್ಗಗಳ ಆಯೋಗದ ಮೂಲಕ ಜಾತಿವಾರು, ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆಯನ್ನು ಸಿದ್ಧಪಡಿಸಿದ್ದರು. ಅವರು ಸಿದ್ಧಪಡಿಸಿದ್ದ ವರದಿಯನ್ನೇ ಸ್ವೀಕರಿಸಿ, ಅನುಷ್ಠಾನಗೊಳಿಸಲು ಸಾಧ್ಯವಾಗಲಿಲ್ಲ.

ವರದಿ ಸಿದ್ಧಗೊಂಡ ಸಂದರ್ಭದಲ್ಲೇ ರಾಜ್ಯ ವಿಧಾನಸಭೆಗೆ ಚುನಾವಣೆ ಎದುರಾದ ಹಿನ್ನೆಲೆಯಲ್ಲಿ ಆಗಲೇ ವಿವಾದ ಸೃಷ್ಟಿಸಿದ್ದ ವರದಿಯನ್ನು ಮುಟ್ಟಲು ಹಿಂದೇಟು ಹಾಕಿದರು.

ಸಮೀಕ್ಷೆಗೆ ಬಿಜೆಪಿ, ಜೆಡಿಎಸ್ ಸೇರಿದಂತೆ ಸಾರ್ವಜನಿಕವಾಗಿ ಕೆಲವರ್ಗಗಳಿಂದ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಜೆಡಿಎಸ್-ಕಾಂಗ್ರೆಸ್ ನೇತೃತ್ವದ ಮೈತ್ರಿ ಸರ್ಕಾರ ಅಸ್ತಿತ್ವಕ್ಕೆ ಬಂದ ಸಂದರ್ಭದಲ್ಲಿ ಅಂದಿನ ಸರ್ಕಾರದ ಸಚಿವರಾಗಿದ್ದ ಪುಟ್ಟರಂಗಶೆಟ್ಟಿ ಸಮೀಕ್ಷೆ ಅನುಷ್ಠಾನಗೊಳಿಸುವ ಪ್ರಸ್ತಾಪ ಇಟ್ಟಿದ್ದರು.

ಇದಕ್ಕೆ ತೀವ್ರ ವಿರೋಧ ವ್ಯಕ್ತಗೊಂಡ ಹಿನ್ನೆಲೆಯಲ್ಲಿ, ಅಂದಿನ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿವಾದ ತಲೆ ಎತ್ತದಂತೆ ನೋಡಿಕೊಂಡರು. ಆ ನಂತರ ಬಂದ ಬಿಜೆಪಿ ಸರ್ಕಾರ ಈ ಸಮೀಕ್ಷೆಯ ಗೊಡವೆಯೇ ಬೇಡವೆಂದು ಸುಮ್ಮನಾಗಿತ್ತು. ಇದೀಗ ಮತ್ತೆ ಅಧಿಕಾರಕ್ಕೆ ಬಂದಿರುವ ಸಿದ್ದರಾಮಯ್ಯ ಅವರು ವರದಿ ಸ್ವೀಕರಿಸಿ ಅನುಷ್ಠಾನಗೊಳಿಸುವ ಪ್ರಸ್ತಾಪವಿಟ್ಟಿದ್ದಾರೆ.

## ಸಂಜೆ ಕಾಲೇಜಿಗೆ ಪ್ರವೇಶ

ದಾವಣಗೆರೆ, ಜೂ. 7 - ನಗರದ ಸರ್ಕಾರಿ ಪ್ರಥಮ ದರ್ಜೆ ಸಂಜೆ ಕಾಲೇಜ್‌ನಲ್ಲಿ ಬಿಸಿಎ ಮತ್ತು ಬಿಕಾಂ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ಪ್ರಾರಂಭವಾಗಿದ್ದು, ಅತ್ಯಂತ ಕಡಿಮೆ ಶುಲ್ಕದಲ್ಲಿ ಶಿಕ್ಷಣ ಪಡೆಯಬಹುದು. ದಾವಿವಿ ಸಂಯೋಜನೆಗೆ ಒಳಗಾಗಿರುವ ಕಾಲೇಜ್, ಪಾರ್ಟ್‌ಟೈಮ್ ಅಥವಾ ಜಾಬ್ ಮಾಡುವವರ ಕಲಿಕೆಯ ಆಸಕ್ತಿಗೆ ಪೂರಕವಾಗಿದ್ದು, ದ್ವಿತೀಯ ಪಿಯುಸಿ, ಡಿಪ್ಲೋಮಾ ಮತ್ತು ಐಟಿಐ ಪಾಸಾದ ಆಸಕ್ತ ವಿದ್ಯಾರ್ಥಿಗಳು ಈ ಸಂಜೆ ಕಾಲೇಜಿಗೆ ಸೇರಬಹುದು ಎಂದು ಪ್ರಾಂಶುಪಾಲರಾದ ಡಾ. ಸಿ.ಕೆ.ಕೊಟ್ರಪ್ಪ ತಿಳಿಸಿದ್ದಾರೆ.

# ನಕಲಿ ರಸೀದಿ ನೀಡಿ ಗ್ರಾಹಕರಿಗೆ ವಂಚನೆ

ದಾವಣಗೆರೆ, ಜೂ. 7 - ಬ್ಯಾಂಕಿಗೆ ಹಣ ಪಾವತಿ ಮಾಡದೇ ನಕಲಿ ರಸೀದಿ ನೀಡಿ 10 ಗ್ರಾಹಕರಿಗೆ 1.92, 458 ರೂ. ಗಳ ವಂಚನೆ ಮಾಡಿರುವ ಕೃತ್ಯ ಶಾಂತಿನಗರದಲ್ಲಿ ನಡೆದಿದೆ. ಬೆಳಗಾವಿ ತಿಲಕವಾಡಿಯ ಅಡಿವೆಪ್ಪ ಎಂಬುವರು ದೂರು ನೀಡಿದ್ದು, ಡೈನಾಮಿಕ್ ಏಜೆನ್ಸಿಗೆ ಮೋಸ ಮಾಡಿರುತ್ತಾರೆಂದು ದಾಖಲಾತಿ ಮತ್ತು ಗ್ರಾಹಕರ ಖಾತೆಯನ್ನು ಪರಿಶೀಲಿಸಿದಾಗ ಪ್ರಕರಣ ಬಯಲಾಗಿದೆ. ದಾವಣಗೆರೆ ಶಾಂತಿನಗರದ ಶಾಹೀಮ್ ಶೇಕ್ ಆರೋಪಿಯಾಗಿದ್ದು, ಈತನ ವಿರುದ್ಧ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಅಡಿವೆಪ್ಪ ಮನವಿ ಮಾಡಿದ್ದಾರೆ.


ಡಾ|| ಸದಾಶಿವಪ್ಪ ಮತ್ತು ಶ್ರೀಮತಿ ಅನುಸೂಯಮ್ಮ
ಇವರ ಸವಿನೆನಪಿಗಾಗಿ
ಭಕ್ತ ಸಿರಿಯಾಳ ದೇವಸ್ಥಾನ ಉದ್ಘಾಟನೆ



ವಿಳಾಸ : ಅಶ್ವಿನಿ ನರ್ಸಿಂಗ್ ಹೋಂ ಆವರಣ, ಅಶ್ವಿನಿ ಮೆಡಿಕಲ್ಸ್, ದಾವಣಗೆರೆ ENT, ಎವಿಕೆ ಕಾಲೇಜು ರಸ್ತೆ, ದಾವಣಗೆರೆ
ಸುಸ್ವಾಗತ ಬಯಸುವವರು :
ಹಿರೇಮಾಗಡಿ ಹಾಗೂ ಆವರಗೊಳ್ಳ ಶ್ರೀಗಳು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಸುರಹೊನ್ನೆ ವಂಶಸ್ಥರು.


# ಕಮೀಷನ್ ಕೊಡುವುದಾಗಿ ಹೇಳಿ 8.87 ಲಕ್ಷ ರೂ. ಆನ್‌ಲೈನ್ ಮೂಲಕ ವಂಚನೆ

ದಾವಣಗೆರೆ, ಜೂ. 7- ಅಪರಿಚಿತ ವ್ಯಕ್ತಿಯೊಬ್ಬ ಮೊಬೈಲ್‌ಗೆ ಮೆಸೇಜ್ ಮಾಡಿ ಪ್ರಾಡಕ್ಟ್‌ಗಳನ್ನು ಖರೀದಿಸಿದರೆ ಕಮೀಷನ್ ಮೂಲಕ ಹಣ ಹಿಂದುರುಗಿಸುವುದಾಗಿ ನಂಬಿಸಿ, ಆನ್‌ಲೈನ್ ಖಾತೆ ತೆರೆದು ಒಟ್ಟು 8.87 ಲಕ್ಷ ರೂ.ಗಳನ್ನು ವಂಚನೆ ಮಾಡಿರುವ ಪ್ರಕರಣ ನಡೆದಿದೆ.

ವಿಜಯನಗರ ಜಿಲ್ಲೆ ಹೊಸಪೇಟೆ ಭಾರತಿನಗರ ಅಮರಾವತಿ ವಾಸಿ ಸುಬ್ರಹ್ಮಣ್ಯ ತಂದೆ ರಾಮಚಂದ್ರ ದೀಕ್ಷಿತ್ ಅವರು ವಂಚನೆಗೆ ಒಳಗಾದ ವ್ಯಕ್ತಿಯಾಗಿದ್ದಾರೆ.

ಕಂಪನಿಯ ಪ್ರಾಡಕ್ಟ್‌ಗಳನ್ನು ಖರೀದಿಸಿದರೆ ಕಮೀಷನ್ ರೂಪದಲ್ಲಿ ಹಣವನ್ನು ಹಿಂತಿರುಗಿಸುತ್ತೇವೆ ಎಂದು ಹೇಳಿ ಬ್ಯಾಂಕ್ ಖಾತೆಗೆ ಆರಂಭದಲ್ಲಿ 2 ಸಾವಿರ ರೂ. ಹಾಕಿದ್ದಾರೆ. ಕಂಪನಿ ಕಡೆಯಿಂದ ಕಮಿಷನ್ ಹಣ ಸೇರಿ 2800 ರೂ. ಹಣವನ್ನು ವಾಪಾಸ್ ಹಾಕಿದ್ದಾರೆ. ಪುನ: ಅವರ ಮಾತನ್ನು ನಂಬಿ 15 ಸಾವಿರ, 99 ಸಾವಿರ, 25 ಸಾವಿರ, 48 ಸಾವಿರ, 76 ಸಾವಿರ ಹಣವನ್ನು ಅವರು ಕಳುಹಿಸಿದ ಎಸ್ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದ್ದು, ಹೀಗೆ ಹಣದಾಸೆಗೆ ಒಟ್ಟು 8,87, 055 ರೂ. ಗಳನ್ನು ಕಳೆದುಕೊಂಡಿದ್ದಾರೆ.

ಕಮೀಷನ್ ಬಾರದೇ ಇರುವುದನ್ನು ಮನಗಂಡು ಬ್ಯಾಂಕಿಗೆ ಹೋಗಿ ಸ್ಟೇಟ್‌ಮೆಂಟ್ ತೆಗೆಸಿಕೊಂಡು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.


WANTED LECTURERS

| SUBJECT | QUALIFICATION | EXPERIENCE |
|---|---|---|
| Physics | MSc., BEd., | Minimum - 4 years Experience |
| Chemistry | MSc., BEd., | Minimum - 4 years Experience |
| Maths | MSc., BEd., | Minimum - 4 years Experience |
| Biology | MSc., BEd., | Minimum - 4 years Experience |

Note : Interested Candidates Must Attend
The Interview & Demo On 08/06/2023 Onwards
Contact : 99806 29965, 70220 04042



34ನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀಯುತ ಡಿ. ದುಗ್ಗಪ್ಪನವರು
ನೀವು ನಮ್ಮನ್ನಗಲಿ ಇಂದಿಗೆ 34 ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ, ನೀವು ಹಾಕಿಕೊಟ್ಟ ಹಾದಿಯಲ್ಲಿ ಮುನ್ನಡೆಯುತ್ತಿರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ,
ಮಗ : ಶ್ರೀ ಡಿ.ಡಿ.ಬಸವರಾಜಪ್ಪ,
ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಮರಿ ಮೊಮ್ಮಕ್ಕಳು, ದಾವಣಗೆರೆ.